ಕಾಡುಕುರುಬರ ಮತ್ತು ಜೇನುಕುರುಬರ ಪಾರಂಪರಿಕಜ್ಞಾನ ಮತ್ತು ಜೀವನಾವರ್ತಕಾಚರಣೆಗಳು

(ಎನ್. ಬೇಗೂರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ)

ಸಂಶೋಧಕರು
ನಾಗರಾಜ ಜೆ.ಎಸ್.
ನೊಂದಣಿ ಸಂಖ್ಯೆ : KUTS-೦೦೫೨೫

ಮಾರ್ಗದರ್ಶಕರು
ಡಾ. ಗಂಗಾಧರ ದೈವಜ್ಞ
ಸಹ ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೩

ಕಾಡುಕುರುಬರ ಮತ್ತು ಜೇನುಕುರುಬರ ಪಾರಂಪರಿಕಜ್ಞಾನ ಮತ್ತು ಜೀವನಾವರ್ತಕಾಚರಣೆಗಳು

(ಎನ್. ಬೇಗೂರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ)

ಸಂಶೋಧಕರು

ನಾಗರಾಜ ಜಿ.ಎಸ್.

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಸಹ ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೩

ಮಾರ್ಗದರ್ಶಕರ ಪ್ರಮಾಣ ಪತ್ರ

ಕಾಡುಕುರುಬರ ಮತ್ತು ಜೇನುಕುರುಬರ ಪಾರಂಪರಿಕಜ್ಞಾನ ಮತ್ತು ಜೀವನಾವರ್ತಕಾಚರಣೆಗಳು (ಎನ್.ಬೇಗೂರನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ನಾಗರಾಜ ಜಿ.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 30/7/2013
ಸ್ಥಳ: ವಿದ್ಯಾರಣ್ಯ

(ಡಾ. ಗಂಗಾಧರ ದೈವಜ್ಞ)
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಕಾಡುಕುರುಬರ ಮತ್ತು ಜೇನುಕುರುಬರ ಪಾರಂಪರಿಕಜ್ಞಾನ ಮತ್ತು ಜೀವನಾವರ್ತಕಾಚರಣೆಗಳು (ಎನ್.ಬೇಗೂರನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಡಾ. ಗಂಗಾಧರ ದೈವಜ್ಞ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: ೩೦/೭/೨೦೧೩
ಸ್ಥಳ: ವಿದ್ಯಾರಣ್ಯ

(ನಾಗರಾಜ ಜಿ.ಎಸ್.)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ವಿಧಾನ

ಪ್ರಸ್ತಾವನೆ

ಬದಲಾವಣೆಯಾಗುತ್ತಿರುವ ಮಾನವ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕಾದರೆ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೆ ಸಾವಿರಾರು ವರ್ಷಗಳಿಂದ ಬೆಟ್ಟಗುಡ್ಡ, ಕಾಡು ಮೇಡು, ಮೊದಲಾದ ಸ್ಥಳಗಳಲ್ಲಿ ನೆಲೆಸಿ ತಮ್ಮದೇ ಆದ ಆದಿ ದೈವ, ಮೂಲ ಪುರುಷ, ತನ್ನದೇ ಆದ ಸಂಸ್ಕೃತಿ, ತನ್ನದೇ ಆದ ಪಾರಂಪರಿಕ ಜ್ಞಾನ, ಉಪಭಾಷೆ, ಮನೋರಂಜಕ ಕಲೆಗಳು, ಕ್ರೀಡೆ ಮುಂತಾದ ಅಂಶಗಳನ್ನು ಬುಡಕಟ್ಟು ಸಮುದಾಯಗಳು ಒಳಗೊಂಡಿವೆ.

ಕರ್ನಾಟಕದಲ್ಲಿ ಹಲವಾರು ಬುಡಕಟ್ಟುಗಳು ಕಂಡುಬರುತ್ತವೆ. ೫೦ ಬುಡಕಟ್ಟುಗಳು ಕರ್ನಾಟಕದಲ್ಲಿವೆ ಎಂದು ಸರ್ಕಾರದ ಆದೇಶವಿದೆ. ಇಂದು ಕರ್ನಾಟಕದಲ್ಲಿ ಐವತ್ತು ಬುಡಕಟ್ಟುಗಳು ಕಂಡುಬರುವುದಿಲ್ಲ ಮತ್ತು ಸರ್ಕಾರ ಬುಡಕಟ್ಟುಗಳೆಂದು ಆದೇಶಿಸದೆ ಇರುವ ಹತ್ತಾರು ಬುಡಕಟ್ಟುಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿವೆ. ಸಾಮಾನ್ಯವಾಗಿ ಈ ಬುಡಕಟ್ಟು ಸಮುದಾಯಗಳು ಕಾಡು ಹಾಗೂ ಕಾಡಿನ ಅಂಚಿನಲ್ಲಿ ಇತರೆ ಸಮುದಾಯದ ಜನರಿಂದ ಪ್ರತ್ಯೇಕವಾಗಿ ವಾಸಿಸುತ್ತಿರುವುದು ಕಂಡುಬರುತ್ತದೆ. ಈ ಆದಿವಾಸಿ ಸಮುದಾಯಗಳಲ್ಲಿ ವ್ಯಕ್ತಿ ವ್ಯಕ್ತಿಗಳ ಸಂಬಂಧಗಳು ಗಾಢವಾಗಿರುವುದರ ಜೊತೆಗೆ ಬಿಗಿಯಾದ ಸಾಂಸ್ಕೃತಿಕ ಕಟ್ಟಳೆ ಮತ್ತು ನಿಯಮಗಳು ಇರುವುದನ್ನು ಕಾಣುತ್ತೇವೆ. ಈ ಸಮುದಾಯಗಳ ಸಂಸ್ಕೃತಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಂಸ್ಕೃತಿಗಿಂತ ಭಿನ್ನವಾಗಿರುತ್ತವೆ. ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಭಾಷೆ ಮತ್ತು ಜೀವನ ವಿಧಾನವನ್ನು ಹೊಂದಿರುತ್ತವೆ.

ಕಾಡಿನಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಒಂದೆಡೆ ನೆಲೆ ನಿಂತು ಜೀವಿಸುತ್ತಿದ್ದರೂ ಸಹ ಇವರಲ್ಲಿಯೂ ಅಲೆಮಾರಿತನ ಕಂಡುಬರುತ್ತದೆ. ಆಹಾರ ಸಂಗ್ರಹಣೆ ಕಾಡಿನ ಉತ್ಪನ್ನಗಳ ಸಂಗ್ರಹಣೆಗಾಗಿ ಸುತ್ತಾಡುತ್ತಾ ತಮ್ಮದೇ ಆದ ಜೀವನಶೈಲಿಯಲ್ಲಿ ಬದುಕುತ್ತಿರುವುದನ್ನು ನೋಡುತ್ತೇವೆ. ಅವರದ್ದೇ ಆದ ಆಚಾರ, ವಿಚಾರ, ಭಾಷೆ, ದೈವ, ಮೂಲ ಪುರುಷ, ನಂಬಿಕೆ, ಆಚರಣೆ ಸಾಮಾಜಿಕ ಕಟ್ಟುಪಾಡುಗಳನ್ನು ರೂಪಿಸಿ ಕೊಂಡಿರುತ್ತಾರೆ. ಒಂದು ಕಾಲದಲ್ಲಿ ಕಾಡುಗಳಲ್ಲಿ ಸ್ವತಂತ್ರವಾಗಿ ಓಡಾಡಿಕೊಂಡು ಅಲ್ಲಿ ದೊರೆಯುವ ಹಣ್ಣು ಹಂಪಲುಗಳನ್ನು, ಗೆಡ್ಡೆ ಗೆಣಸುಗಳನ್ನು, ಸೊಪ್ಪು ಸೆದೆ, ಜೇನು ಮೊದಲಾದ ಕಾಡಿನುತ್ಪನ್ನಗಳನ್ನು ಆಹಾರಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಇಂದು ಬೇಟೆ ನಿಷೇಧದಿಂದ ಅವರು ಸಂಪೂರ್ಣವಾಗಿ ಬೇಟೆಯಾಡುವುದನ್ನು ನಿಲ್ಲಿಸಿದ್ದಾರೆ.

ಪ್ರತಿಯೊಂದು ಬುಡಕಟ್ಟು ಸಮುದಾಯ ತನ್ನ ಆರಾಧ್ಯ ದೈವವನ್ನು ತನ್ನದೇ ಆದ ರೀತಿಯಲ್ಲಿ ಆರಾಧಿಸುತ್ತದೆ. ಹಾಡಿ, ಕುಣಿದು ಕುಪ್ಪಳಿಸುತ್ತ, ತನ್ನ ಸಮುದಾಯದ ನಾಯಕನ ಅಪ್ಪಣೆಯನ್ನು ಪಾಲಿಸುತ್ತಾ, ವಿಶಿಷ್ಟವಾದ ಉಡುಗೆ ತೊಡುಗೆಗಳನ್ನು ತೊಟ್ಟು ತನ್ನ ಕಲೆಯನ್ನು ಪ್ರದರ್ಶಿಸುತ್ತದೆ. ಆದಿವಾಸಿಗಳು ಓದು ಬರಹವನ್ನು ಕಲಿತವರಲ್ಲ. ಆದರೆ ಅವರಲ್ಲಿರುವ ಜ್ಞಾನ ಅಗಾಧವಾದದ್ದು. ಧಾರ್ಮಿಕ ಶ್ರದ್ಧೆಯುಳ್ಳ ಇವರು ತನ್ನ ಸುತ್ತಲಿನ ಪರಿಸರದಲ್ಲಿರುವ ಕಾಡಿನ ಹಳ್ಳ, ಮರ, ಗಿಡ, ಬಳ್ಳಿ, ಪ್ರಾಣಿ, ಪಕ್ಷಿ, ಜಲಚರ ಜೀವಜಂತುಗಳಲ್ಲಿ ಆತ್ಮಗಳಿವೆ ಎಂಬ ನಂಬಿಕೆ ಉಳ್ಳವರು. ಇವರು ಮುಖ್ಯವಾಹಿನಿಗೆ ಬರದೆ ಇದ್ದರೂ ತಮ್ಮ ನಂಬಿಕೆ ಆಚರಣೆಗಳನ್ನು ವಿಶಿಷ್ಟವಾಗಿ ಆಚರಿಸುವ ಕ್ರಮವನ್ನು ಅನುಸರಿಸಿಕೊಂಡಿದ್ದಾರೆ. ನಿಗೂಢ ಜಗತ್ತಿನ ಹಲವು ವಿಸ್ಮಯಗಳನ್ನು ಆಧುನಿಕ ಜಗತ್ತಿನಲ್ಲಿರುವ ಅನೇಕ ಆದಿವಾಸಿ ಸಮುದಾಯಗಳು ಇಂದಿಗೂ ಆಚರಿಸುವುದರ ಮೂಲಕ ಅವುಗಳನ್ನು ಪರಂಪರಾನುಗತವಾಗಿ ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಆಚರಣೆ, ಕಟ್ಟುಪಾಡು, ನಂಬಿಕೆಗಳನ್ನು ಇಂದಿಗೂ ಆದಿವಾಸಿಗಳಲ್ಲಿ ಜೀವಂತವಾಗಿರಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಅಧ್ಯಯನದ ವ್ಯಾಪ್ತಿ

"ಕಾಡುಕುರುಬ ಮತ್ತು ಜೇನುಕುರುಬರ ಪಾರಂಪರಿಕ ಜ್ಞಾನ ಹಾಗೂ ಜೀವನಾವರ್ತಕಾಚರಣೆಗಳು" ಈ ವಿಷಯದ ಅಧ್ಯಯನಕ್ಕಾಗಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಎನ್. ಬೇಗೂರು ಪರಿಸರದಲ್ಲಿ ವಾಸಿಸುತ್ತಿರುವ ಕಾಡುಕುರುಬ ಹಾಗೂ ಜೇನುಕುರುಬರ ಸಮುದಾಯವನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶಗಳು

೧. ಜೀವನಾವರ್ತಕಾಚರಣೆಯಿಂದ ಸಂಸ್ಕೃತಿಯ ಉನ್ನತೀಕರಣ.

೨. ಪಾರಂಪರಿಕ ಜ್ಞಾನವು ವಾಸ್ತವದಲ್ಲಿ ಉಳಿಸಿಕೊಂಡಿರುವ ಮಹತ್ವ

೩. ಕಾಡುಕುರುಬ ಮತ್ತು ಜೇನುಕುರುಬರ ಪಾರಂಪರಿಕ ಜ್ಞಾನ ಮತ್ತು ಜೀವನಾವರ್ತಕಾಚರಣೆಗಳ ಪರಸ್ಪರ ಹೋಲಿಕೆ ಮತ್ತು ವ್ಯತ್ಯಾಸಗಳ ಅಧ್ಯಯನ.

೪. ಕಾಡುಕುರುಬ ಮತ್ತು ಜೇನುಕುರುಬ ಸಮುದಾಯಗಳ ಪಾರಂಪರಿಕ ಜ್ಞಾನ ಮತ್ತು ಜೀವನಾವರ್ತಕಾಚರಣೆಗಳಲ್ಲಿ ಸ್ಥಿತ್ಯಂತರಗಳಾಗಿವೆ ಎಂಬುದನ್ನು ಅಧ್ಯಯನ ಮಾಡುವುದು.

೫. ಸಮುದಾಯಗಳ ಹಿನ್ನೆಲೆಯನ್ನು ತಿಳಿಯುವುದು.

೬. ಸಮುದಾಯಗಳ ಧಾರ್ಮಿಕ ಆಚರಣೆಗಳ ಅಧ್ಯಯನ.

ಅಧ್ಯಯನದ ಪ್ರಾಕ್ ಕಲ್ಪನೆ

೧. ಸಾಂಸ್ಕೃತಿಕ ಅಂಶಗಳಲ್ಲಿ ಸಾಮ್ಯತೆ ಇದೆಯೇ.

೨. ಪಾರಂಪರಿಕ ಜ್ಞಾನಕ್ಕೆ ಸಂಬಂಧಪಟ್ಟಂತೆ ಎರಡು ಸಮುದಾಯಗಳ ನಡುವೆ ಅನನ್ಯತೆ ಇದೆಯೇ.

೩. ಈ ಸಮುದಾಯಗಳ ಪಾರಂಪರಿಕ ಜ್ಞಾನ ಮತ್ತು ಜೀವನಾವರ್ತಕಾಚರಣೆಗಳಲ್ಲಿ ಬದಲಾವಣೆಯಾಗಿದೆಯೇ ಎಂಬುದನ್ನು ಅಧ್ಯಯನ ಮಾಡುವುದು.

ಅಧ್ಯಯನದ ಮಹತ್ವ

ಪ್ರಸ್ತುತ ಈ ನಿಬಂಧವು ಒಟ್ಟು ೬ ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ ಒಂದು: ಅಧ್ಯಯನದ ಉದ್ದೇಶ, ವ್ಯಾಪ್ತಿ, ಮತ್ತು ಮಹತ್ವ

ಕಾಡುಕುರುಬ ಮತ್ತು ಜೇನುಕುರುಬರ ಕುರಿತು ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳನ್ನು ಪರಿಶೀಲನೆ ಮಾಡುವುದು, ಕಾಡುಕುರುಬ ಮತ್ತು ಜೇನುಕುರುಬರ ಪರಿಚಯ, ಭೌಗೋಳಿಕ, ಚಾರಿತ್ರಿಕ ವಿವರಗಳನ್ನು ನೀಡುವುದರ ಜೊತೆಗೆ ಈ ಜಿಲ್ಲೆಯಲ್ಲಿ ವಾಸವಾಗಿರುವ ಕಾಡುಕುರುಬ ಮತ್ತು ಜೇನುಕುರುಬರ ಮೂಲದ ಬಗೆಗಿನ ಮಾಹಿತಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಈ ಸಮುದಾಯಗಳು ನೆಲೆಗೊಂಡಿರುವ ವಿವಿಧ ಸ್ಥಳಗಳ

ಪರಿಚಯ ಮಾಡಲಾಗುವುದು. ಅಧ್ಯಯನದ ವ್ಯಾಪ್ತಿಗೆ ಒಳಪಡುವ ಕಾಡುಕುರುಬ ಮತ್ತು ಜೇನುಕುರುಬರ ಸಾಂಸ್ಕೃತಿಕ ಪರಿಚಯವನ್ನು ಮಾಡಿಕೊಡಲಾಗಿದೆ. ಇಲ್ಲಿಯವರೆಗೆ ನಡೆದಂತಹ ಸಮೀಕ್ಷಾ ವರದಿಗಳನ್ನು, ಲೇಖನಗಳನ್ನು ನಿಬಂಧ ರಚನೆಯ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ ಎರಡು: ಕರ್ನಾಟಕದಲ್ಲಿ ಕಾಡುಕುರುಬ ಮತ್ತು ಜೇನುಕುರುಬರು

ಈ ಅಧ್ಯಯನದಲ್ಲಿ ಕರ್ನಾಟಕದ ಕಾಡು(ಕಾಡು)ಕುರುಬ ಮತ್ತು ಜೇನುಕುರುಬರ ನೆಲೆಯ ಬಗ್ಗೆ ಪರಿಚಯಿಸಲಾಗಿದೆ.

ಅಧ್ಯಾಯ ಮೂರು: ಕಾಡುಕುರುಬ ಮತ್ತು ಜೇನುಕುರುಬರ ಪಾರಂಪರಿಕ ಜ್ಞಾನ

ಕಾಡುಕುರುಬ ಹಾಗೂ ಜೇನುಕುರುಬರ ಪಾರಂಪರಿಕ ಜ್ಞಾನ ಈ ಅಧ್ಯಾಯದಲ್ಲಿ ಅವರ ಆಚರಣೆಗಳಿಗೆ ಸಂಬಂಧಿಸಿದ ಪಾರಂಪರಿಕ ಜ್ಞಾನ ಮತ್ತು ಅವರು ಯಾಕಾಗಿ ಈ ಆಚರಣೆಗಳನ್ನು ಆಚರಿಸುತ್ತಿದ್ದಾರೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ನಾಲ್ಕು: ಜೀವನಾವರ್ತನ ಆಚರಣೆಗಳು

ಈ ಅಧ್ಯಾಯದಲ್ಲಿ ಕಾಡುಕುರುಬರು ಮತ್ತು ಜೇನುಕುರುಬರ ಹುಟ್ಟಿನಿಂದ ಸಾವಿನವರೆಗೆ ಹಾಗೂ ಸಾವಿನ ನಂತರದ ಪರಿಕಲ್ಪನೆ ಹಾಗೂ ಆಚರಣೆಗಳು ಹೇಗಿವೆ? ಆಧುನಿಕತೆಯ ಇಂದಿನ ಸಂದರ್ಭದಲ್ಲಿ ಅವರ ಈ ಆಚರಣೆಗಳಲ್ಲಿ ಯಾವ ರೀತಿಯ ಬದಲಾವಣೆಗಳಾಗುತ್ತಿವೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಾಯ ಐದು: ವಾರ್ಷಿಕಾವರ್ತನ ಆಚರಣೆಗಳು

ಕಾಡುಕುರುಬರು ಮತ್ತು ಜೇನುಕುರುಬರು ಸಾಮೂಹಿಕವಾಗಿ ಆಚರಿಸುವ ಆಚರಣೆಗಳು ಯಾವವು? ಅವುಗಳನ್ನು ಅವರು ಆಚರಿಸುವ ಬಗೆ ಹೇಗೆ? ಅದರಲ್ಲಿ ಅವರ ಪಾರಂಪರಿಕ ಜ್ಞಾನ ಹೇಗೆ ಅಡಕವಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಆರು: ಸಮಾರೋಪ

ಅಧ್ಯಯನದ ವಿಧಾನ

೧. ಕ್ಷೇತ್ರಕಾರ್ಯ ವಿಧಾನ

ಕಾಡುಕುರುಬ ಮತ್ತು ಜೇನುಕುರುಬರ ಆಚರಣೆ ಮತ್ತು ಪಾರಂಪರಿಕ ಜ್ಞಾನದ ಅಧ್ಯಯನಕ್ಕಾಗಿ ಈ ಸಮುದಾಯಗಳ ಹಿರಿ–ಕಿರಿಯರನ್ನು ಭೇಟಿಯಾಗಿ ಅವರಿಂದ ಅವರ ವೈದ್ಯಪದ್ಧತಿ, ವೃತ್ತಿಯ ಆಚರಣೆಗಳಲ್ಲಿರುವ ಪಾರಂಪರಿಕ ಜ್ಞಾನದ ಬಗ್ಗೆ ಮಾಹಿತಿ ಮತ್ತು ಪಡೆದ ಮಾಹಿತಿಯನ್ನು ವ್ಯವಸ್ಥಿತವಾಗಿ ವರ್ಗೀಕರಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

೨. ಪ್ರಶ್ನಾವಳಿ ವಿಧಾನ

ಕಾಡುಕುರುಬರ ಮತ್ತು ಜೇನುಕುರುಬರ ಆಚರಣೆಗಳನ್ನು ಹಾಗೂ ಪಾರಂಪರಿಕ ಜ್ಞಾನವನ್ನು ಕುರಿತು ಅಧ್ಯಯನ ಮಾಡುವುದಕ್ಕಾಗಿ ಸುಧೀರ್ಘವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳಲಾಗುವುದು. ಈ ಪ್ರಶ್ನಾವಳಿಯಿಂದ ಮಾಹಿತಿದಾರರಿಂದ ಮಾಹಿತಿ ಸಂಗ್ರಹಿಸಿ ಅದನ್ನು ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೩. ಅವಲೋಕನ ವಿಧಾನ

ಕೆಲ ಆಚರಣೆ ಸಂಪ್ರದಾಯಗಳನ್ನು ಕುರಿತು ಅಧ್ಯಯನ ಮಾಡಬೇಕಾದರೆ ಅದರಲ್ಲಿ ಸಂಶೋಧಕನ ಪಾಲ್ಗೋಳ್ಳುವಿಕೆ ಅತೀ ಮುಖ್ಯವಾಗಿರುತ್ತದೆ. ಇಂತಹ ಆಚರಣೆಗಳಲ್ಲಿ ಭಾಗವಹಿಸಿ ಅವರ ಪ್ರತಿಯೊಂದು ಆಚರಣೆಗಳನ್ನು ಸೂಕ್ಷ್ಮವಾಗಿ ಗುರುತಿಸಿ ವಿಷಯವನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೪. ಸಂದರ್ಶನ ವಿಧಾನ

ಕಾಡುಕುರುಬ ಮತ್ತು ಜೇನುಕುರುಬರ ಪಾರಂಪರಿಕ ಜ್ಞಾನ, ಜೀವನಾವರ್ತಕಾಚರಣೆಗಳು, ಹಬ್ಬ ಹರಿದಿನಗಳು ವಾರ್ಷಿಕಾವರ್ತನದ ಆಚರಣೆಗಳಲ್ಲಿ ಸಾಂಸ್ಕೃತಿಕ ಮತ್ತು ಅಂಶಗಳಲ್ಲಿನ ವ್ಯತ್ಯಾಸಗಳನ್ನು ತಿಳಿದುಕೊಳ್ಳಲು ಸಮುದಾಯದ ಸದಸ್ಯರನ್ನು ಮತ್ತು ಹಿತೈಷಿಗಳನ್ನು ನೇರವಾಗಿ ಸಂದರ್ಶಿಸುವ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಇಲ್ಲಿಯವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಬುಡಕಟ್ಟು ಅಧ್ಯಯನ ಕುರಿತು ಹೇಳುವುದಾದರೆ ಕರ್ನಾಟಕದಲ್ಲಿರುವಂತಹ ಎಲ್ಲ ಬುಡಕಟ್ಟುಗಳನ್ನು ಗುರುತಿಸಲಾಗಿದೆ. ಆದರೆ ಅವುಗಳ ಬಗ್ಗೆ ಸಂಪೂರ್ಣವಾದ ಅಧ್ಯಯನ ನಡೆದಿಲ್ಲ. ಭಾರತ ಸರ್ಕಾರ ಕರ್ನಾಟಕದಲ್ಲಿ ಗುರುತಿಸಿರುವ ೫೦ ಬುಡಕಟ್ಟುಗಳಲ್ಲಿ ಕೆಲವನ್ನು ಪರಿಶಿಷ್ಟ ಜಾತಿಗೆ, ಕೆಲವನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದವುಗಳನ್ನು ಅಲೆಮಾರಿ, ಅರೆಅಲೆಮಾರಿ ಬುಡಕಟ್ಟುಗಳೆಂದು ಪರಿಗಣಿಸಿ ಹಿಂದುಳಿದ ವರ್ಗಗಳಿಗೆ ಸೇರಿಸಿದ್ದಾರೆ. ಈ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ಗಣನೆಗೆ ತೆಗೆದುಕೊಂಡರೆ ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲ.[೧] ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕುರಿತಂತೆ ಇಂಗ್ಲಿಷಿನಲ್ಲಿ ಪ್ರಕಟವಾಗಿರುವಷ್ಟು ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ನಿರಾಸಕ್ತಿಯೇ ಕಾರಣ ಎಂದು ಹೇಳಬಹುದು.

ಭಾರತದ ಯಾವುದೇ ಒಂದು ಜಾತಿ ಅಥವಾ ಜನಾಂಗ ಪರಿಶಿಷ್ಟ ಬುಡಕಟ್ಟಿನ ಮಾನ್ಯತೆ ಪಡೆಯಬೇಕಾದರೆ ಭಾರತದ ಸಂವಿಧಾನದ ೩೪೨ನೆಯ ನಿಯಮದ ಪ್ರಕಾರ ಅದು ರಾಷ್ಟ್ರಾಧ್ಯಕ್ಷರಿಂದ ಮೊದಲು ಸೂಚಿತವಾಗಿ ನಂತರ ಸಂಸತ್ತಿನಲ್ಲಿ ಒಪ್ಪಿತವಾಗಬೇಕು. ಆಗ ಭಾರತ ಸರ್ಕಾರ ಪರಿಶಿಷ್ಟ ಬುಡಕಟ್ಟು ಎಂದು ಗುರುತಿಸುವಾಗ ಆ ಜನಾಂಗದ ಗುಣಲಕ್ಷಣ, ಸಂಪ್ರದಾಯಗಳು, ಕಸುಬು, ವಾದ್ಯಗಳು ಮತ್ತು ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಪರಿಶಿಷ್ಟ ಬುಡಕಟ್ಟುಗಳನ್ನು ಪಟ್ಟಿ ಮಾಡುತ್ತದೆ. ಪ್ರಸ್ತುತ ಈಗ ಕರ್ನಾಟಕದಲ್ಲಿ ೫೦ ಬುಡಕಟ್ಟುಗಳನ್ನು ಗುರುತಿಸಿದೆ. ಆದರೆ ಅವರಲ್ಲಿ ೨೫ ಬುಡಕಟ್ಟುಗಳು ಮಾತ್ರ ಕರ್ನಾಟಕದಲ್ಲಿ ಕಂಡುಬರುವುದನ್ನು ಕಾಣಬಹುದು. ಈ ೨೫ ಬುಡಕಟ್ಟುಗಳಲ್ಲಿ ಜೇನುಕುರುಬರು ಮತ್ತು ಕೊರಗರನ್ನು ಮಾತ್ರ ಆದಿಮ ಬುಡಕಟ್ಟುಗಳೆಂದು ಕರೆಯಲಾಗಿದೆ. ಉಳಿದ ಬುಡಕಟ್ಟುಗಳನ್ನು ಪರಿಶಿಷ್ಟ ಬುಡಕಟ್ಟುಗಳೆಂದು ಕರೆಯಲಾಗಿದೆ. ಅದರಲ್ಲಿ ಕಾಡುಕುರುಬರು ಸಹ ಒಬ್ಬರು.

ಕರ್ನಾಟಕದಲ್ಲಿ ಇಲ್ಲಿಯವರೆಗೆ ನಡೆದಿರುವ ಬುಡಕಟ್ಟುಗಳ ಅಧ್ಯಯನ ಕ್ರಮವನ್ನು ಅವಲೋಕಿಸಿದರೆ ಪ್ರಾರಂಭದ ದಿನಗಳಲ್ಲಿ ನಡೆದಿರುವಷ್ಟು ಅಧ್ಯಯನಗಳು ಇಂದು ನಡೆದಿಲ್ಲ. ಮೊಟ್ಟ ಮೊದಲು ದೇಶ ಮತ್ತು ವಿದೇಶಗಳ ವಿದ್ವಾಂಸರಿಂದ ಕರ್ನಾಟಕದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ೧೯೦೯ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ. ರಂಗಾಚಾರಿ ಅವರ Caste and Tribes of Southern India ಎಂಬ ಕೃತಿಯು ದಕ್ಷಿಣ ಭಾರತದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ. ೧೯೨೬-೧೯೩೫ರಲ್ಲಿ ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ The Mysore Tribes and Castes ಎಂಬ ಕೃತಿಗಳು ಬುಡಕಟ್ಟು ಅಧ್ಯಯನದ ಮಹತ್ವದ ಕೊಡುಗೆಗಳಾಗಿವೆ.

ಜೇನುಕುರುಬ ಸಮುದಾಯದ ಬಗ್ಗೆ ಮಿಶ್ರ ಅವರು ತಮ್ಮ Jenukuruba Bulletion of the Anthropological Survey of India(1975) ದಲ್ಲಿ, ಜೇನುಕುರುಬರ ಜೇನು ನುಡಿಯ ಬಗ್ಗೆ ಕೆ.ಎಸ್. ಸಿಂಗ್ ಅವರು The Sheduled Tribes(1994)ನಲ್ಲಿ, ಎಂ.ಎಂ. ಬಸವರಾಜ ಅವರು ಪಲ್ಲವರ ಪ್ರತಿನಿಧಿಗಳು ಎಂದು ತಿಳಿಸಿದ್ದಾರೆ. ಜೇನುಕುರುಬರ ಆಹಾರಪದ್ಧತಿಯ ಬಗ್ಗೆ ಲಕ್ಷ್ಮೀಪತಿಯವರು ತಮ್ಮ 'ಜೇನುಕುರುಬರ ಮಕ್ಕಳು ನಾವು ಕಾಡಿಗೆ ಅರಸರು' ೧೯೯೩ ಎಂಬ ಲೇಖನದಲ್ಲಿ ವೈವಾಹಿಕ ಜೀವನದ ಬಗ್ಗೆ ಮುತ್ತುರಾಯಪ್ಪರವರು ತಮ್ಮ "Socia cultural factors and marriage among Jenukuruba and kadukuruba Tribes of Karnataka"(೧೯೯೩)

ಎಂಬ ಲೇಖನದಲ್ಲಿ ಹಾಗೆಯೇ ಚಂದ್ರಶೇಖರ್ ಬಿಳಿಗೆರೆ ಅವರು 'ನಾಗರಿಕ ಬದುಕಿನತ್ತ ಕಾಡುಕುರುಬರು' (೧೯೯೦)ದಲ್ಲಿ ಕಾಡುಕುರುಬರ ವೈವಾಹಿಕ ಜೀವನದ ಬಗ್ಗೆ ವಿವರಿಸುತ್ತಾರೆ. ಕಾಡುಕುರುಬರ ಉಗಮ ಮತ್ತು ಐತಿಹ್ಯದ ಬಗ್ಗೆ ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು The Mysore Tribes and castes(1931) ನಲ್ಲಿ ಉಪಯುಕ್ತ ವಿವರಗಳಿವೆ.

ಎ.ಸಿ. ಲಲಿತ ಅವರು ಕಾಡುಕುರುಬ ಮತ್ತು ಜೇನುಕುರುಬರ ಸಂಸ್ಕೃತಿ ಎಂಬ ಕೃತಿಯಲ್ಲಿ ಕಾಡುಕುರುಬ ಮತ್ತು ಜೇನುಕುರುಬರ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಡಾ.ಕೆ.ಎಂ. ಮೇತ್ರಿ ಅವರು ತಮ್ಮ 'ಬುಡಕಟ್ಟು ಕುಲಕಸುಬುಗಳು' ಎಂಬ ಗ್ರಂಥದಲ್ಲಿ ಕಾಡುಕುರುಬ ಮತ್ತು ಜೇನುಕುರುಬ ಸಮುದಾಯಗಳ ಬಗ್ಗೆ ವಿವರಣೆ ನೀಡಿದ್ದಾರೆ.

ಡಾ. ಮಧು ಗುಂಡ್ಲಪೇಟೆ ಅವರು ತಮ್ಮ "ಕರ್ನಾಟಕದ ಬುಡಕಟ್ಟು ಜನಾಂಗಗಳ ಅಭಿವೃದ್ಧಿ' ಎಂಬ ಗ್ರಂಥದಲ್ಲಿ ಜೇನುಕುರುಬ ಮತ್ತು ಕಾಡುಕುರುಬರ ಜೀವನಪದ್ಧತಿಯ ಬಗ್ಗೆ ವಿವರಿಸಿದ್ದಾರೆ.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕೊಡಗು ಜಿಲ್ಲೆ ಇದರಲ್ಲಿಯೂ ಸಹ ಜೇನುಕುರುಬ ಹಾಗೂ ಕಾಡುಕುರುಬರ ಮೂಲದ ಬಗ್ಗೆ ತಿಳಿಸಿಕೊಡಲಾಗಿದೆ.

ಕನ್ನಡ ವಿಷಯ ವಿಶ್ವಕೋಶ ಜಾನಪದದಲ್ಲಿ ಕಾಡುಕುರುಬ ಮತ್ತು ಜೇನುಕುರುಬರ ಬಗ್ಗೆ ಅಧ್ಯಯನವನ್ನು ನಡೆಸಿ ಅಗತ್ಯ ಮಾಹಿತಿಯನ್ನು ಕಲೆಹಾಕಿದ್ದಾರೆ.

ಅಡಿಟಿಪ್ಪಣಿ

೧. ಡಾ.ಬಿ.ಎನ್. ಪಮ್ಮಾರ, 'ಬುಡಬುಡಕೆಯವರು: ಒಂದು ಅಧ್ಯಯನ', ೧೯೯೪, ಪುಟ. ೪

ಅಧ್ಯಾಯ ಎರಡು

ಕರ್ನಾಟಕದ ಕಾಡುಕುರುಬರು ಮತ್ತು ಜೇನುಕುರುಬರು

ಭಾರತ ಜಾತ್ಯಾತೀತ ರಾಷ್ಟ್ರ. ಇಲ್ಲಿ ವೈವಿಧ್ಯಮಯವಾದ ಭಾಷೆ, ಸಂಸ್ಕೃತಿ, ಧರ್ಮ, ಸಮುದಾಯ, ಜಾತಿ ಮುಂತಾದ ವೈರುಧ್ಯಗಳ ನಡುವೆ ಜನ ಜೀವಿಸುತ್ತಿದ್ದಾರೆ. ಇಂತಹ ವೈರುಧ್ಯಗಳ ನಡುವೆ ನಿಕೃಷ್ಟ ಜೀವನ ನಡೆಸುತ್ತಿರುವ ಬುಡಕಟ್ಟು ಸಮುದಾಯಗಳು ನಗರ ಪ್ರದೇಶದ ನಾಜೂಕಿನ ಜೀವನ ಪರಿಚಯವಿಲ್ಲದೆ ಅರಣ್ಯ ಪ್ರದೇಶದಲ್ಲಿಯೇ ಇವೆ. ಅನೇಕ ಶತಮಾನಗಳಿಂದ ತಮ್ಮದೆಯಾದ ಸಹಜ ಬದುಕಿನೊಂದಿಗೆ ಅರಣ್ಯ ಹಾಗೂ ಅರಣ್ಯ ಸರಹದ್ದಿನಲ್ಲಿ ಜೀವನ ನಡೆಸುತ್ತಿರುವ ಸಮುದಾಯಗಳಿವೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುತ್ತಾ, ಉಳಿದೆಲ್ಲಾ ಜನರಿಂದಲೂ ದೂರವಾಗಿ ಪ್ರತ್ಯೇಕ ಸಂಸ್ಕೃತಿಯುಳ್ಳ ಜನರ ಸಮಾಜವನ್ನು ಬುಡಕಟ್ಟುಗಳು ಎಂದು ಕರೆಯಲಾಗಿದೆ. ಇಂಥಹ ಸಮಾಜಗಳಲ್ಲಿ ರಕ್ತ ಸಂಬಂಧಕ್ಕೆ ಆಧ್ಯತೆ ಇದ್ದು ವ್ಯಕ್ತಿ ಸಂಬಂಧಗಳು ಗಾಢವಾಗಿರುತ್ತದೆ. ಸಾಂಸ್ಕೃತಿಕವಾಗಿ ಅತ್ಯಂತ ಕಟ್ಟುನಿಟ್ಟಾದ ನಿಯಮಗಳಿದ್ದು ಹೊರಗಿನ ಜನರನ್ನು ಅನುಮಾನದಿಂದಲೇ ನೋಡುವ ಪ್ರವೃತ್ತಿ ಇವರಲ್ಲಿ ಇಂದಿಗೂ ಮುಂದುವರೆದಿದೆ. ಇವರ ಸಂಸ್ಕೃತಿ ನಗರ ಮತ್ತು ಗ್ರಾಮೀಣಾ ಸಂಸ್ಕೃತಿಗಳಿಗಿಂತ ತೀರಾ ಭಿನ್ನವಾಗಿದೆ.

ಬಹುತೇಕ ಬುಡಕಟ್ಟು ಸಮುದಾಯಗಳು ಅರಣ್ಯವಾಸಿ ಹಾಗೂ ಅರಣ್ಯಾವಲಂಬಿ ಬುಡಕಟ್ಟು ಸಮುದಾಯಗಳಾಗಿವೆ. ಬುಡಕಟ್ಟುಗಳು ಇತ್ತೀಚಿನ ದಿನಗಳಲ್ಲೂ ಸಹ ಅರಣ್ಯ ಹಾಗೂ ಅರಣ್ಯ ಸರಹದ್ದಿನಲ್ಲಿ ವಾಸಿಸುವುದನ್ನು ಕಾಣಬಹುದಾಗಿದೆ. ಇವರು ಅರಣ್ಯದಲ್ಲಿ ದೊರೆಯುವ ಗೆಡ್ಡೆ, ಗೆಣಸು, ಹಣ್ಣು ಹಂಪಲುಗಳ ಸಂಗ್ರಹ, ಜೇನು ಹಾಗೂ ಕಾಡುಪ್ರಾಣಿಗಳ ಬೇಟೆಯಿಂದ ಜೀವನ ಸಾಗಿಸುತ್ತಿದ್ದರು. ಕಾಲಾನಂತರದಲ್ಲಿ ಕುಮ್ರಿ ಬೇಸಾಯವನ್ನು ರೂಢಿಸಿಕೊಂಡು ನಂತರ ಒಂದೇ ಕಡೆ ನೆಲೆಕಂಡುಕೊಂಡು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಕರ್ನಾಟಕದಲ್ಲಿ ೫೦ ಬುಡಕಟ್ಟುಗಳು ಇವೆ ಎಂದು ಸರಕಾರಿ ದಾಖಲೆಗಳು ಹೇಳುತ್ತಿವೆಯಾದರೂ ಇಲ್ಲಿ ಸುಮಾರು ೩೦ ಸಮುದಾಯಗಳನ್ನು ಬುಡಕಟ್ಟು ಸಮುದಾಯಗಳೆಂದು ಪರಿಗಣಿಸಿ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲಾಗಿದೆ.[೧]

ಅರಣ್ಯದಲ್ಲಿ ವಾಸವಾಗಿರುವ ಸಮುದಾಯಗಳನ್ನು ೩ ಭಾಗಗಳಾಗಿ ಮಾಡಲಾಗಿದೆ.

೧. **ಅರಣ್ಯವಾಸಿ ಸಮುದಾಯಗಳು:** ಇವರು ಅರಣ್ಯದಲ್ಲಿ ಕೃಷಿ ಮತ್ತು ಅರಣ್ಯೋತ್ಪನ್ನಗಳನ್ನು ಸಂಗ್ರಹಿಸಿ ಜೀವನ ನಿರ್ವಹಿಸುತ್ತಿರುವಂತಹ ಸಮುದಾಯಗಳಾಗಿವೆ.

೨. **ಕೃಷಿ ಅವಲಂಬಿತ ಸಮುದಾಯಗಳು:** ಅರಣ್ಯದಲ್ಲಿ ಅಥವಾ ಅರಣ್ಯದ ಸರಹದ್ದಿನಲ್ಲಿ ನೆಲೆನಿಂತು ಅಥವಾ ಸರ್ಕಾರದ ಹಲವು ಯೋಜನೆಗಳಿಂದ ಒತ್ತಾಯ ಪೂರ್ವಕವಾಗಿ ನೆಲೆನಿಲ್ಲಿಸಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿವೆ.

೩. **ನಿರ್ದಿಷ್ಟ ಕಾಲಘಟ್ಟದಲ್ಲಿ ಮಾತ್ರ ಸಂಚರಿಸುವ ಬುಡಕಟ್ಟುಗಳು** ಅಲೆಮಾರಿ ಸಮುದಾಯಗಳಾಗಿವೆ.

‘ಜೇನುಕುರುಬ ಹಾಗೂ ಕೊರಗ ಬುಡಕಟ್ಟುಗಳನ್ನು ಆದಿಮ ಬುಡಕಟ್ಟುಗಳು (Primative Tribes) ಎಂದು ಗುರುತಿಸಲಾಗಿದೆ’.[೨]

ಕಾಡುಕುರುಬರ ಪರಿಚಯ

ಕನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಕಾಡುಕುರುಬ ಬುಡಕಟ್ಟು ಒಂದು ಪ್ರಮುಖ ಸಮುದಾಯ. ಬೆಟ್ಟಕುರುಬರು ಕಾಡುಕುರುಬರ ಒಂದು ಪಂಗಡ ಕಾಡುಕುರುಬರು ಅಂದರೆ ಬೆಟ್ಟಕುರುಬರು ಮತ್ತು ಜೇನುಕುರುಬರ ಜನಾಂಗಗಳು ಸೇರುತ್ತವೆ. ಕಾಡುಕುರುಬರೆಂದರೆ ಸಾಮಾನ್ಯವಾಗಿ ಬೆಟ್ಟಕುರುಬರೆಂದು ಸಮಾನಾಂತರ ಪದವನ್ನಾಗಿ ಬಳಸಲಾಗುತ್ತದೆ.

ಕಾಡುಕುರುಬರು ಕರ್ನಾಟಕ ರಾಜ್ಯದ ಮೈಸೂರು, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಹೆಗ್ಗಡದೇವನ ಕೋಟೆ, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ ಮತ್ತು ವಿರಾಜಪೇಟೆ ತಾಲ್ಲೂಕುಗಳಲ್ಲಿ ಹಾಗೂ ತಮಿಳುನಾಡಿನ ನೀಲಗಿರಿಯ ಕಾಡುಗುಡ್ಡಗಳಲ್ಲಿ ನೆರೆಯ ಕೇರಳದ ವೈನಾಡು (ಮಲಬಾರ್)ಗಳಲ್ಲಿ ಬರುವ ಕಾಡುಕುರುಬರು ಅನಾದಿಯಿಂದಲೂ ನೆಲೆಸಿದ್ದಾರೆ. ಇವರು ವಾಸಿಸುವ ಪ್ರದೇಶ ಕಾಡು ಅಥವಾ ಕಾಡಿನಿಂದ ಆವೃತ್ತವಾಗಿರುವುದರಿಂದ ಇವರಿಗೆ ಕಾಡುಕುರುಬರು ಅಥವಾ ಕಾಡುಕುರುಬರೆಂದು ಕರೆದಿರಬಹುದೆಂದು ಅಭಿಪ್ರಾಯಪಡಲಾಗಿದೆ.

ಕಾಡುಕುರುಬರ ಉಗಮದ ಐತಿಹಾಸಿಕ ಹಿನ್ನಲೆ ಕುರಿತು ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ತಮ್ಮ The Mysore Tribes and castes ಎಂಬ ಗ್ರಂಥದಲ್ಲಿ ಈ ರೀತಿ ಬರೆಯುತ್ತಾರೆ. ‘ಕುರುಬರು ಅಥವಾ ಕಾರಬ್ಬರು ಪ್ರಾಚೀನ ಕುರುಬರ ಅಥವಾ ಪಲ್ಲವರ ಪ್ರತಿನಿಧಿಗಳಾಗಿದ್ದರು. ಇವರು ಮೊದಲು ದಕ್ಷಿಣ ಭಾರತದಲ್ಲಿ

ಬಲಶಾಲಿಗಳಾಗಿದ್ದರು. ಈ ಕುರುಬರು ಕ್ರಿ.ಶ. ಸುಮಾರು ೭, ೮ನೇ ಶತಮಾನದಲ್ಲಿ ಚೋಳರ ದೊರೆಯಾಗಿದ್ದ ಆದಿತ್ಯನಿಂದ ಜಯಿಸಲ್ಪಟ್ಟವರು. ಆಗ ಕುರುಬರು, ವಿವಿಧ ರಾಜ್ಯಗಳಲ್ಲಿ ಚದುರಿಹೋಗಿ ದೂರ ಪ್ರದೇಶಗಳಲ್ಲಿ ನೆಲೆಸಿದರು. ಅನೇಕರು ನೀಲಗಿರಿ, ವೈನಾಡು ಮತ್ತು ಸುತ್ತಮುತ್ತಲಿನ ಕಾಡುಗುಡ್ಡಗಳಿಗೆ ಪಲಾಯನ ಮಾಡಿದರು.' ಇದರಿಂದ ತಮ್ಮ ಸಂಸ್ಕೃತಿಯಿಂದ ಹೊರತಾಗಿ ಮಾರ್ಪಡುವಂತಾಯಿತು. ಅವರ ಪ್ರತಿನಿಧಿಗಳೇ ಮೇಲೆ ತಿಳಿಸಿದ ಪ್ರದೇಶಗಳಲ್ಲಿ ವಾಸವಾಗಿದ್ದರು ಎಂದು ತಿಳಿಸಿದ್ದಾರೆ.[೩] ಇವರು ಆಕಾರದಲ್ಲಿ ಗಿಡ್ಡು, ಕಪ್ಪು ಮೈ ಬಣ್ಣ, ಉದ್ದವಾದ ತಲೆ, ಉಬ್ಬಿದ ಕೆನ್ನೆಯ ಮೂಳೆಗಳು, ಚಪ್ಪಟೆಯಾದ ಮೂಗು ಕಂಡುಬರುತ್ತದೆ.

ಕಾಡುಕುರುಬರು ಇತರೆ ಬುಡಕಟ್ಟು ಸಮುದಾಯಗಳಂತೆ ತಮ್ಮದೇ ಆದ ಕುಲಗಳನ್ನು ಹೊಂದಿದ್ದಾರೆ. ಅವರ ರಕ್ತಸಂಬಂಧದ ನೆಲೆಗಟ್ಟಿನಲ್ಲಿ ರಚನೆಯಾಗಿದ್ದು ವೈವಾಹಿಕ, ಧಾರ್ಮಿಕ, ಸಾಮಾಜಿಕ ಕಾರ್ಯಗಳು ನೆರವೇರಲು ಸಹಕಾರಿಯಾಗಿವೆ. ಕಾಡುಕುರುಬರಲ್ಲಿ ೮೦ಕ್ಕೂ ಹೆಚ್ಚು ಕುಲಗಳನ್ನು ಕಾಣಬಹುದು.

ಕಾಡುಕುರುಬರ ವಾಸದ ನೆಲೆಗಳು

ಕಾಡುಕುರುಬರು ವಾಸಮಾಡುವ ಪ್ರದೇಶವನ್ನು **'ಹಾಡಿ'** ಹಾಗೂ ಕಾಡುಕುರುಬರ ಭಾಷೆಯಲ್ಲಿ **'ಮತರಿ'** ಎಂದು ಕರೆಯುತ್ತಾರೆ. ಹಾಡಿ, ಪೋಡು, ಮಾಡ ಎಂಬ ಪದಗಳನ್ನು ಗ್ರಾಮ ಎಂಬ ಅರ್ಥ ಬರುವ ರೀತಿಯಲ್ಲಿ ಬಳಸಲಾಗುತ್ತದೆ. ಅವರು ವಾಸಿಸುವ ಸ್ಥಳಗಳಲ್ಲಿ ೧೦ರಿಂದ ೨೦ ಗುಡಿಸಲು ಮನೆಗಳು ಒಂದೇ ಕಡೆ ನೆಲೆಸಿವೆ. ಅವರ ಗುಡಿಸಲುಗಳು ಐದು ಅಡಿ ಅಗಲ, ಏಳು ಅಡು ಉದ್ದದ ಜಾಗದ ಪುಟ್ಟ ಗುಡಿಸಲು ಕಡಿನ ಬಿದಿರು ಗೊಂಚಿಗಳ ತಟಿಕೆಯ ಮೇಲೆ ಹುಲ್ಲು, ಗರಿಗಳನ್ನು ಬಳಸಿಕೊಂಡು ಮಣ್ಣು, ನೀರು, ನಾರುಗಳನ್ನು ಸೇರಿಸಿಕೊಂಡು ಹಾಡಿಗಳಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಕೆಲವೊಮ್ಮೆ ಹಾಡಿ ಕಟ್ಟುವ ಮುನ್ನ ಆ ಜಾಗದಲ್ಲಿ ಕಲ್ಲುಗಳ ಮೇಲೆ ಕಲ್ಲುಗಳನ್ನು ಪೇರಿಸಿ ಇಟ್ಟು ಪೂಜೆ ಮಾಡಿ ವಾಪಾಸ್ಸಾಗುತ್ತಾರೆ. ಮಾರನೇಯ ದಿನದವರೆಗೂ ಪೇರಿಸಿದ ಕಲ್ಲುಗಳು ಹಾಗೇ ಇದ್ದರೆ ಆ ಪ್ರದೇಶದ ಗಾಳಿ, ಗರಗಳಿಂದ ಮುಕ್ತವಾದ ಪ್ರವೇಶವೆಂಬುದು ಅವರ ನಂಬಿಕೆ. ಆ ಪೇರಿಸಿದ ಕಲ್ಲುಗಳೇನಾದರೂ ಉರುಳಿ ಬಿದ್ದಿದ್ದರೆ ಅಲ್ಲಿ ಹಾಡಿ ನಿರ್ಮಿಸುವುದು ಅಪಾಯಕರವೆಂಬುದೇ ಅವರ ನಂಬಿಕೆಯಾಗಿದೆ ಎಂದು ಹೇಳಬಹುದು. ಕಾಡುಕುರುಬರು ಹಿಂದೆ ಅರಣ್ಯದಲ್ಲಿ ವಾಸಿಸುವ ಸಂದರ್ಭದಲ್ಲಿ ಅವರು ಪ್ರತಿ ಮೂರು ವರ್ಷಗಳಿಗೊಮ್ಮೆ ಹಾಡಿಯನ್ನು ಬೇರೆ ಬೇರೆ ಸ್ಥಳಗಳಲ್ಲಿ ನಿರ್ಮಿಸಿಕೊಳ್ಳುತ್ತಿದ್ದರು. ಸ್ಥಳ ಪರಿಶೀಲನೆ ಹಾಗೂ ಹೊಸ ಹಾಡಿಯ

ನಿರ್ಮಾಣದ ಕಾರ್ಯದಲ್ಲಿ ಹಾಡಿಯ ಹಿರಿಯರ ನಿರ್ಧಾರಗಳು ಪ್ರಮುಖವಾಗಿರುತ್ತಿದ್ದವು. ಯಜಮಾನನ ನಿರ್ಧಾರಗಳು ಹಾಡಿಯ ಎಲ್ಲಾ ಜನರ ಯೋಗಕ್ಷೇಮವನ್ನು ಆಧರಿಸಿರುತ್ತಿತ್ತು.

ಕಾಡುಕುರುಬರು ಮನುಷ್ಯರು ತಿನ್ನಬಹುದಾದ ೪೭ ರೀತಿಯ ಗೆಡ್ಡೆ ಗೆಣಸುಗಳು, ನಿಸರ್ಗ ಖನಿಜಗಳನ್ನವರು ಬಲ್ಲರು (ಮುಳ್ಳುಗೆಣಸು, ನೋಪಳ ಗೆಣಸು) ಎಂದು ಹೇಳಬಹುದಾಗಿದೆ. ಹಾಗೂ ೯೦ ಜಾತಿಯ ಹಣ್ಣುಗಳನ್ನು ತಿನ್ನಲು ಮತ್ತು ಔಷಧಿಗೆ ಉಪಯೋಗಿಸಬಹುದಾದ ೬೦ ಜಾತಿಯ ಸಸಿಗಳನ್ನವರು ಬಲ್ಲರೂ. ಕಾಡುಕುರುಬರು ತಾವು ತಿನ್ನುವ ಪ್ರತಿಯೊಂದು ಸಸ್ಯದ ಬಗೆಗಿನ ಪೂರ್ಣವಾದ ಪರಿಜ್ಞಾನವಿದ್ದು ಸಸ್ಯದ ಸಿಹಿ, ಒಗರು, ಗುಣಗಳನ್ನು ಅವುಗಳ ಸಿಪ್ಪೆಯನ್ನು ಎರೆಯುವುದರಿಂದಲೋ ಅಥವಾ ಬೇಯಿಸಿ ನೀರು ಬಸಿಯುವುದರಿಂದಲೋ ಆ ಸಸ್ಯದ ಗುಣಗಳನ್ನು ತಿಳಿದುಕೊಂಡಿದ್ದಾರೆ. ಉದಾ: ಬಿದಿರು ಕಳ್ಳೆ, ಕಾಡುಸಾಸಿವೆ ಸೊಪ್ಪು, ಬೊನಗೆರೆ ಸೊಪ್ಪು.

ಕಾಡುಕುರುಬರಲ್ಲಿ ಮತ್ತೊಂದು ವಿಶೇಷವೆಂದರೆ ಬುರುಡೆ ಕರೆಯುವುದು ಇಲ್ಲವೇ 'ಬುಂಡೆಕರೆಯುವುದು' ಎಂಬ ದೈವದರ್ಶನ ಮತ್ತು ದೈವದೊಡನೆ ಸಂಭಾಷಣೆ ಮಾಡುವ ಒಂದು ವಿಶಿಷ್ಟವಾದ ಆಚರಣೆ. ಈ ಒಂದು ಕ್ರಿಯೆ, ಜೇನುಕುರುಬರು ಮತ್ತು ಕಾಡುಕುರುಬರಲ್ಲಿ ಪ್ರತ್ಯೇಕವಾಗಿ ವಿಭಿನ್ನವಾಗಿ ಕಂಡುಬರುತ್ತದೆ. ಯಾವುದೇ ಕೆಲಸಗಳನ್ನು ಮಾಡುವ ಮುನ್ನ ಬುಂಡೆ ಕರೆಯುವುದು ಸಾಮಾನ್ಯ ಬುಂಡೆ ಕರೆಯುವ ಕುಟುಂಬ ಎಂಬ ಹೆಸರಿನ ಕುಟುಂಬಗಳಿರುತ್ತವೆ. ಇವರನ್ನು ಕರೆಯಿಸಿ ತಮ್ಮ ಕಷ್ಟ-ಸುಖಗಳನ್ನು ಕೇಳಿಕೊಳ್ಳುವ ಪರಿಪಾಠವಿದೆ. ಕಾಡುಕುರುಬರು ಈ ಕ್ರಿಯೆಯನ್ನು 'ಬಿಂಜೆಕಳುವುಗ' ಮತ್ತು ಅದಕ್ಕೆ ಸಂಬಂಧಪಡುವ ಹಾಡನ್ನು 'ಬಿಂಜೆ ಪಾಡುಗ' ಎಂದು ಕರೆಯುತ್ತಾರೆ. ಕಾಡು ಕುರುಬರು 'ಬೀನ್‌ಮರ್ ಮುತ್ತಲು' ಎಂದು ಕರೆಯುವ ಬಿದಿರಿನಿಂದ ಮಾಡಿದ ಒಂದು ಸಣ್ಣ ಮೊರದ ಮಾದರಿಗೆ ನಾಲ್ಕೈದು ಗೆಜ್ಜೆ ಕಟ್ಟಿರುತ್ತಾರೆ. ಬಿಂಜೆ ಪಾಡುಗಳನ್ನು ಹೇಳುವ ಗುಂಪಿನ ಹಿರಿಯ ವ್ಯಕ್ತಿಯ ಬಳಿ ಸಾಮಾನ್ಯವಾಗಿ ಇದು ಇರುತ್ತದೆ. ಇದನ್ನು ಕೈಯಲ್ಲಿ ಹಿಡಿದು ಅಲ್ಲಾಡಿಸುತ್ತಾ ಎಂಟು-ಹತ್ತು ಜನರು ಸೇರಿಕೊಂಡು ಧನಿಗೂಡಿಸುತ್ತ ಬಿಂಜೆ ಪಾಡುಗಳನ್ನು ಹಾಡುತ್ತಾರೆ.

ಜೇನುಕುರುಬರ ಪರಿಚಯ

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಕೊಡಗು ಜಿಲ್ಲೆಯ ಸೋಮವಾರಪೇಟೆ, ವಿರಾಜಪೇಟೆ ತಾಲ್ಲೂಕುಗಳಲ್ಲಿ ಹಾಗೂ ಕೇರಳದ ವೈನಾಡು(ಮಲಬಾರ್) ತಮಿಳುನಾಡಿನ ನೀಲಗಿರಿಯ ಕಾಡುಗುಡ್ಡಗಳಲ್ಲಿ ಜೇನುಕುರುಬರು ಅನಾದಿಯಿಂದಲೂ ನೆಲೆಸಿದ್ದಾರೆ. ಜೇನುಕುರುಬರು

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣಗಳಲ್ಲಿ, ಹೆಗ್ಗಡದೇವನ ಕೋಟೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಜೇನುಕುರುಬರು ದಟ್ಟವಾದ ಕಾಡು ಕಾಡು ಪ್ರದೇಶಗಳಲ್ಲಿ ಮತ್ತು ಮೈದಾನ ಪ್ರದೇಶಗಳಲ್ಲಿ ವಾಸವಾಗಿದ್ದು, ಅಲ್ಲಿನ ಭೌಗೋಳಿಕ ಪರಿಸರ ಅವರ ಜೀವನ ನಿರ್ವಹಣೆಗೆ ಅನುಕೂಲಕರವಾಗಿದೆ. ಜೇನುಕುರುಬರು ಸ್ಥಳೀಯರು ಕರೆಯುವ ಹಾಗೆ 'ಜೇನುನುಡಿ' ಭಾಷೆಯನ್ನು ಮಾತನಾಡುತ್ತಾರೆ. ಇದು ಅವರ ಆಡು ಭಾಷೆ ಮಾತ್ರ ಆಗಿದೆ. ಇದು ದಕ್ಷಿಣ ದ್ರಾವಿಡ ಭಾಷೆಯಾದ ಕನ್ನಡಕ್ಕೆ ಸಮೀಪವಾಗಿದೆ. ಅವರು ಬೇರೆ ಬೇರೆ ಜನರ ಜೊತೆಯಲ್ಲಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ ಮತ್ತು ಕನ್ನಡ ಲಿಪಿಯನ್ನು ಉಪಯೋಗಿಸುತ್ತಾರೆ.

ಉಗಮ

ಜೇನುಕುರುಬರ ಬಗ್ಗೆ ಮಿಶ್ರ ಅವರು ಹೀಗೆ ಬರೆಯುತ್ತಾರೆ. ಕಾಡುಕುರುಬರಾದ ಜೇನುಕುರುಬ ಮತ್ತು ಬೆಟ್ಟಕುರುಬರು, ಪಲ್ಲವರ ಸಂತತಿಯಾಗಿ ದಕ್ಷಿಣ ಭಾರತದ ಕೆಲವು ಭಾಗದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಕ್ರಿ.ಶ. ೭ನೆಯ ಶತಮಾನದಲ್ಲಿ ಬಲಿಷ್ಠ ಚಕ್ರಾಧಿಪತಿಗಳಾದ ಕಂಗೋ, ಚೋಳ ಮತ್ತು ಚಾಲುಕ್ಯರು ಪಲ್ಲವರಾದ ಕುರುಬರು ರಾಜ್ಯ ಭಾರ ನಡೆಸುತ್ತಿದ್ದಾಗ ಅವರನ್ನು ಸದೆಬಡಿದು ಸೋಲಿಸಿದರು. ಆಗ ಅನೇಕರು ಸತ್ತರು. ಕೆಲವರು ಚೆಲ್ಲಾಪಿಲ್ಲಿಯಾಗಿ ತಲೆಮರೆಸಿಕೊಳ್ಳಲು ಗುಡ್ಡಗಾಡನ್ನು ಹೊಕ್ಕರು. ಕಾಡುಕಾಡುಗಳಲ್ಲಿ ನೆಲೆಸಿದ ಅವರ ಸಂತತಿಯು ಹೊರ ಸಂಪರ್ಕವಿಲ್ಲದೆಯೇ ಪೂರ್ಣವಾಗಿ ಕಾಡಿನಲ್ಲಿ ವಂಶಾಭಿವೃದ್ಧಿ ಹೊಂದಿ, ಆದಿವಾಸಿಗಳಾಗಿ ಉಳಿದರು. ಅವರ ಪ್ರತಿನಿಧಿಗಳೇ ಮೇಲೆ ತಿಳಿಸಿದ ಪ್ರದೇಶಗಳಲ್ಲಿ ವಾಸವಾಗಿದ್ದಾರೆ.

ಜೇನುಕುರುಬರು ನಿಗ್ರೋ ಜನಾಂಗದವರಂತೆ ಕುಳ್ಳಗೆ, ಕಪ್ಪಗೆ ಇದ್ದು ಗುಂಗುರು ಕೂದಲನ್ನು ಹೊಂದಿದವರಾಗಿದ್ದಾರೆ. ನಾಚಿಕೆ ಹಾಗೂ ಅಂಜಿಕೆ ಇವರ ಸ್ವಭಾವದತ್ತವಾದ ಗುಣಗಳು ಇತರೆ ಜನಾಂಗಗಳಿಗಿಂತ ತಮ್ಮ ಇರುವಿಕೆಯಲ್ಲಿ ಸಾಂಸ್ಕೃತಿಕ ಆಚರಣೆಗಳಲ್ಲಿ ಭಿನ್ನತೆಯನ್ನು ಈ ಜನ ಹೊಂದಿದ್ದಾರೆ. 'ಜೇನುಕುರುಬರು' ಎಂಬ ಹೆಸರು ಈ ಜನಾಂಗಕ್ಕೆ ವೃತ್ತಿಯಿಂದ ದೊರಕಿದುದಾಗಿದೆ. ಇವರ ಸಾಂಪ್ರದಾಯಿಕ ವೃತ್ತಿ ಜೇನು ಸಂಗ್ರಹಿಸುವುದಾಗಿತ್ತು. ಜೇನುತುಪ್ಪಕ್ಕಾಗಿ, ಹಣ್ಣುಗಳಿಗಾಗಿ, ಗೆಡ್ಡೆ ಗೆಣಸುಗಳಿಗಾಗಿ ಈ ಜನ ಗುಡ್ಡಗಾಡುಗಳಲ್ಲಿ ಅಲೆಯುತ್ತಾ ಇದ್ದುದು ತಿಳಿದು ಬಂದಿದೆ. ಇವರು ಆನೆಗಳನ್ನು ಚೋಳ ಹಾಗೂ ಪಲ್ಲವ ಅರಸರಿಗೆ ಒದಗಿಸುತ್ತಿದ್ದುದನ್ನು ಇತಿಹಾಸ ಹೇಳುತ್ತದೆ. ಇತ್ತೀಚಿನ ದಿನಗಳಲ್ಲಿ 'ಖೆಡ್ಡಾ'ದ ಮೂಲಕ ಆನೆಗಳನ್ನು ಹಿಡಿದು ಪಳಗಿಸುವಲ್ಲಿ ಇವರು ನಿಷ್ಣಾತರೆಂದು ಸಾಧಿಸಲ್ಪಟ್ಟಿದ್ದಾರೆ. ಶ್ರೇಷ್ಠ ಮಾವುತರೆನಿಸಿಕೊಂಡಿದ್ದಾರೆ. ಕಾಡಿನ ಪ್ರಾಣಿ ಹಾಗೂ ಸಮಸ್ತ ಸಸ್ಯವರ್ಗವೆಲ್ಲ ಇವರಿಗೆ ಗೊತ್ತು.

ಭಾರತದಲ್ಲಿದ್ದ ಬ್ರಿಟೀಷ್ ಅಧಿಕಾರಿ ಕೆನೆತ್ ಅಂಡರ್‌ಸನ್ (೧೯೩೦) ತನ್ನ ಕೃತಿಯೊಂದರಲ್ಲಿ ಕಾಕನಕೋಟೆಯಲ್ಲಿ ತಾನು ಸಂಚರಿಸುತ್ತಿದ್ದ ಸಂದರ್ಭದಲ್ಲಿ ಹುಲಿ ಎದುರಾಯಿತೆಂದೂ ಜೇನುಕುರುಬನೊಬ್ಬ ಧೈರ್ಯದಿಂದ ತನ್ನನ್ನು ರಕ್ಷಿಸಿದನೆಂದು ಆ ಯುವಕನ ಶೌರ್ಯವನ್ನು ವರ್ಣಿಸಿದ್ದಾನೆ. ಮಲಬಾರ ಪ್ರದೇಶಕ್ಕೆ ಬಂದಿದ್ದ ವೆರಿಯರ್ ಎಲ್ವಿನ್ ಕೂಡ ಧೀರರಾದ ಜೇನುಕುರುಬರನ್ನು ಸಂಪರ್ಕಿಸಿದ್ದಾನೆ. ಜೇನುಕುರುಬರು ಕಾಡು ಪ್ರಾಣಿಗಳ ಚಲನವಲನದ ಬಗೆಗಿನ ಜ್ಞಾನವನ್ನು ಕೆನ್ನೆತ ಆ್ಯಂಡರ್‌ಸನ್ ತನ್ನ "೯ ನರಭಕ್ಷಕಗಳು ಮತ್ತು ಒಂದು ಪುಂಡ ಆನೆ" ಎಂಬ ತನ್ನ ಬೇಟೆಯ ಬಗೆಗಿನ ನೆನಪಿನ ಪುಸ್ತಕದಲ್ಲಿ ವಿವರವಾಗಿ ಚಿತ್ರಿಸಿದ್ದಾನೆ. ಅದರಲ್ಲೂ ಜೇನುಕುರುಬರು ಆನೆಗಳ ನಾಡಿಯನ್ನು ಅದರ ವಾಸನೆ ಹಿಡಿಯುವುದನ್ನು ಅವರ ಜೊತೆಯಲ್ಲೇ ಕಾಡಿನಲ್ಲಿ ತಿರುಗಿ ಅನುಭವಿಸಿ ನೋಡಬೇಕು ಎಂದಿದ್ದಾರೆ.

ಜೇನು ಸಂಗ್ರಹಿಸುವುದು ಜೇನುಕುರುಬರಿಗೆ ವಂಶಪಾರಂಪರ್ಯವಾಗಿ ಬಂದ ಮೂಲ ವೃತ್ತಿಯಾಗಿದೆ. ಹಾರುವ ಒಂದು ಜೇನಿನ ಹುಳುವಿನಿಂದ ಅದರ ಗೂಡು ಕಂಡುಹಿಡಿಯುವ ಚತುರರು. ಜೇನು ಸಂಗ್ರಹಣೆಯ ಪ್ರಾರಂಭಕ್ಕೆ ಮುಂಚೆ ಮರಕ್ಕೆ ಪೂಜೆ ಮಾಡುತ್ತಾರೆ. ಆ ನಂತರ ರಾತ್ರಿ ವೇಳೆಯಲ್ಲಿ ಜೇನು ಸಂಗ್ರಹಣೆ ಮಾಡುತ್ತಾರೆ. ಜೇನಿನ ಸಂಗ್ರಹದಲ್ಲಿ ನಾಲ್ಕು ರೀತಿ ಮುಖ್ಯವಾಗಿವೆ. ೧. ಹೆಜ್ಜೇನು ೨. ತುಡಬೆಜೇನು ೩. ಕಿರುಜೇನು ಮತ್ತು ಮಿಶ್ರಜೇನು. ಜೇನು ಸಂಗ್ರಹಣೆ ಸಾಮಾನ್ಯವಾಗಿ ಜೂನ್, ಜುಲೈ, ನವಂಬರ್, ಡಿಸೆಂಬರ್ ತಿಂಗಳಲ್ಲಿ ಮಾತ್ರ ಸಂಗ್ರಹ ಮಾಡುತ್ತಾರೆ.

ಜೇನುಕುರುಬರು ಕಾಡಿನಲ್ಲಿ ಅರೆ ಅಲೆಮಾರಿಯಾಗಿ ವಾಸಮಾಡುತ್ತಿದ್ದರೆಂದು ತಿಳಿಯುತ್ತದೆ. ಜೇನುಕುರುಬರು ಕಾಡಿನೊಳಗೆ ಕುಮರಿ ಬೇಸಾಯ ಮಾಡಿಕೊಂಡು ತಮಗೆ ಬೇಕಾದ ರಾಗಿ ಗೆಣಸುಗಳನ್ನು ಕಾಡಿನೊಳಗೆ ಬೆಳೆಯುತ್ತಾರೆ. ಮರಗಳ ನಡುವಿನ ಜಾಗವನ್ನು ತೆರವು ಮಾಡಿಕೊಂಡು ಚೂಪಾದ ಕೋಲಿನಿಂದ ಭೂಮಿಯನ್ನು ಸಡಿಲಮಾಡಿ ಮುಂಗಾರಿನಲ್ಲಿ ರಾಗಿ ಬೆಳೆಯನ್ನು ಬೆಳೆಯುತ್ತಾರೆ. ದಟ್ಟವಾದ ಕಾಡಿನ ಮಧ್ಯದಲ್ಲಿ ಬಿದಿರಿನಿಂದ ಸಣ್ಣ ಸಣ್ಣ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಮಾಡುತ್ತಾರೆ. ಕಾಡಿನೊಳಗೆ ಪ್ರಕೃತಿಯಲ್ಲಿ ವಿವಿಧ ಪ್ರಾಣಿಗಳೊಡನೆ ಸಾಮರಸ್ಯದಿಂದ ಬದುಕುತ್ತಿದ್ದರು.

ಅಡಿಟಿಪ್ಪಣಿ

೧. ಪರಿಶಿಷ್ಟ ವರ್ಗಗಳ ಕೈಪಿಡಿ, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು

೨. Sensus of India Report 2001, S.C. Bhat Gopal K. Bharagan Land and people of India States and Union Teritorian LZK Publication, Delhi, 2005-6, Vol-13, p113-133

೩. ಮಧುಗುಂಡ್ಲುಪೇಟೆ, ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ ಅಕ್ಷತ ಪಬ್ಲಿಕೇಶನ್ಸ್, ೨೦೦೭, ಮೈಸೂರು, ಪು-೪೭

ಆಧಾರಗಳು

೧. ಕಿಕ್ಕೇರಿ ನಾರಾಯಣ, 'ಜೇನು ಕುರುಬರು' ಲಕ್ಕಪ್ಪ ಗೌಡ, ಎಚ್.ಜೆ. (ಪ್ರಸಂ), ಕರ್ನಾಟಕದ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಸಂಪುಟ-೧, ಬೆಂಗಳೂರು, ೨೦೦೦

೨. ರಾಜಮಣಿ, ಎಲೇವ, ಕಾಡುಕುರುಬರು, ಲಕ್ಕಪ್ಪಗೌಡ ಹೆಚ್.ಜೆ. ಎಪ್ರಸಂವ, ಕರ್ನಾಟಕ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮

೩. ಎ.ಸಿ. ಲಲಿತ, ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ, ಕನಾಘಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೪. ಮಧುಗುಂಡ್ಲುಪೇಟೆ, ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ ಅಕ್ಷತ ಪಬ್ಲಿಕೇಶನ್ಸ್, ೨೦೦೭, ಮೈಸೂರು

ಅಧ್ಯಾಯ ಮೂರು

ಕಾಡುಕುರುಬ ಮತ್ತು ಜೇನುಕುರುಬರ ಪಾರಂಪರಿಕಜ್ಞಾನ

ಮಾನವನು ತನ್ನ ಬಗೆಗೆ ಇರುವಿಕೆಯನ್ನು ಸರಿಯಾಗಿ ತಿಳಿಯಲು ಇದುವರೆಗೂ ಸಾಧ್ಯವಾಗಿಲ್ಲ. ಕಾರಣ ಲಕ್ಷಾಂತರ ವರ್ಷಗಳ ತನ್ನ ಇತಿಹಾಸದಲ್ಲಿ ನಿರಂತರವಾಗಿ ವಿಕಾಸಹೊಂದುತ್ತಾ ಬಂದ ಆತನ ಪ್ರಜ್ಞೆ ಇವತ್ತಿಗೂ ಅದೇ ವಿಕಾಸದ ದಾರಿಯಲ್ಲಿಯೇ ಇದೆ. ಈತ ಬುದ್ಧಿವಂತಿಕೆಯಲ್ಲಿ ಬೆಳೆಯುತ್ತಾ ಮುಂದುವರೆದಂತೆ ಮಾನವನ ಪ್ರಜ್ಞೆ ಅಂದರೆ ಜ್ಞಾನ ವಿವಿಧ ಹಂತಗಳಲ್ಲಿ ವಿಕಾಸ ಹೊಂದುತ್ತಾ ನಡೆದು ತನ್ನ ಹಿಂದಿನ ಎಲ್ಲಾ ಅಂಶಗಳನ್ನು ಪರೀಕ್ಷಿಸಿಕೊಂಡು ಮುಂದಡಿ ಇಡುವ ಪ್ರಯತ್ನ ನಡೆಸಿರುತ್ತಾನೆ. ಇಂಥಹ ಪ್ರತಿಯೊಂದು ಜ್ಞಾನವನ್ನು ತನ್ನ ಮೂಲ ಅಂಶಗಳಲ್ಲಿ ಬಳಸಿಕೊಂಡಿರುವ ಅಂಶಗಳನ್ನು ಪರಿಗಣಿಸಿಕೊಂಡಿರುವುದರಿಂದ ಅಂತಹ ಜ್ಞಾನವನ್ನು ಪರಂಪರೆಯಿಂದ ಬಳಸಿಕೊಂಡಿರುತ್ತಾನೆ ಎಂಬ ಕಾರಣದಿಂದ ಅಂಥಹ ಜ್ಞಾನವನ್ನು ಪಾರಂಪರಿಕ ಜ್ಞಾನ ಎಂದು ಕರೆಯಲಾಗುತ್ತದೆ. ಜ್ಞಾನವು ಸತ್ಯವಾದುದಲ್ಲ, ಲಭ್ಯ ಜ್ಞಾನದ ಆಧಾರದ ಮೇಲೆ ಸತ್ಯವನ್ನು ಊಹಿಸಲಾಗುವುದು. ನಮ್ಮ ಸುತ್ತಮುತ್ತಲಿನ ವಿಶ್ವದ ಬಗೆಗಿನ ಸತ್ಯ ಅಥವಾ ಸ್ಥೂಲವಿರುವ ಸೂಕ್ಷ್ಮಗಳಿಗಿನ ಸತ್ಯವು ಊಹಿಸಲ್ಪಡುತ್ತದೆ. ಆಕಾಶ ಗಂಗೆ ಜ್ಞಾನವು ಊಹಿಸಲ್ಪಟ್ಟಿದ್ದು. ಇದರ ಹಾಗೆ ನ್ಯೂಕ್ಲಿಯರ್ ವಿಜ್ಞಾನ, ಆಕಾಶಕಾಯ, ಸಮಾಜವಿಜ್ಞಾನ ಮುಂತಾದ ಜ್ಞಾನಗಳು ಊಹಿಸಲ್ಪಟ್ಟಂತವುಗಳಾಗಿವೆ. ನಮಗೆ ತಿಳಿದಿರುವಂತೆ ಹೆಚ್ಚಿನ ಅಂಶ ಅವಲೋಕಿತ ಜ್ಞಾನವಲ್ಲ. ಅವು ಪರಿಣಾಮ ಗುಣಲಕ್ಷಣಗಳಿಂದ ವೀಕ್ಷಿತ ಅಂಶಗಳಿಂದ ತಿಳಿದುಬಂದಂತವುಗಳಾಗಿವೆ. ಇದು ಊಹಿಸುವ ಹಂತದಲ್ಲಿ ತತ್ವಶಾಸ್ತ್ರ ಮತ್ತು ಜ್ಞಾನದ ಸಮ್ಮಿಲನದಿಂದ ಉಂಟಾಗಿರುವಂತಹ ಜ್ಞಾನವನ್ನು ತರ್ಕಕ್ಕೆ ಒಳಪಡಿಸಿ ಮಾನವನು ರೂಢಿಸಿಕೊಂಡಿರುವುದರಿಂದ ಜ್ಞಾನ ಬಂದಿದೆ.

ಜ್ಞಾನದ ಸ್ವರೂಪ

ಜ್ಞಾನವು ಜ್ಞಾನಮೀಮಾಂಸೆಯ ಸಿದ್ಧಾಂತವಾಗಿದೆ. ಇದೊಂದು ವಿಶ್ವವಿಚಾರವೆಂಬಂತೇ ವ್ಯವಹರಿಸುತ್ತದೆ. ತಿಳುವಳಿಕೆಯ ಪ್ರಕ್ರಿಯೆಯಲ್ಲಿ ಏನಿದೆ ಎಂಬುದನ್ನು ಕಂಡುಹಿಡಿಯುವ

ಗುರಿ ಹೊಂದಿದೆ. ಹಾಗೆಯೇ ಇದು ಆಲೋಚನಾ ಮತ್ತು ವಿಶ್ಲೇಷಣಾತ್ಮಕ ಅಂಶಕ್ಕೆ ಸಂಬಂಧಿಸಿದಾಗಿದೆ. ಇದು ಪ್ರಶ್ನೆಯನ್ನೊಂದನ್ನು ಹುಟ್ಟು ಹಾಕುವಂಥಹ ಅಂಶವಾಗಿ ಜ್ಞಾನ ಕಂಡುಬರುತ್ತದೆ. ಈ ಎಲ್ಲಾ ಅಂಶಗಳ ನಡುವೆ ಮನುಷ್ಯನ ವಿಶೇಷ ಮಾನಸಿಕ ಕ್ರಿಯೆಯೇ ಕೆಲಸ ನಿರ್ವಹಿಸುತ್ತದೆ ಹಾಗೂ ನಂಬಿಕೆ ಮತ್ತು ಜ್ಞಾನದ ನಡುವಿನ ವ್ಯತ್ಯಾಸವನ್ನು ತಮ್ಮ ಇಂದ್ರಿಯಗಳು ವಸ್ತುವಿನ ಬಗೆಗೆ ಗೋಚರಿಸದಂತೆ ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಇಂತಹ ಅಂಶಗಳನ್ನು ಜ್ಞಾನ ಎಂದು ಕರೆಯುತೇವೆ.

'ಜ್ಞಾನ ಎನ್ನುವ ಕನ್ನಡ ಪದವು ಇಂಗ್ಲೀಷ್‌ನ **ನಾಲೆಡ್ಜ್** ಎಂಬ ಪದದಿಂದ ಬಂದಿದೆ. ಈ ನಾಲೆಡ್ಜ್ ಪದದ ನಿಷ್ಪತ್ತಿ ಏನೆಂದರೆ ಗ್ರೀಕ್ ಭಾಷೆಯ **'ಎಪಿಸ್ಟ್'** ಎನ್ನುವಂತಹ ಪದದಿಂದ ನಾಲೆಡ್ಜ್ ಎನ್ನುವಂತಹ ಪದ ಉಗಮಗೊಂಡಿದೆ'.[೧] ಈ ಪದವು ಎಪಿಸ್ಟಮಾಲಜಿ ಜ್ಞಾನಶಾಸ್ತ್ರ ಎಂದು ಕರೆಯಲಾಗುತ್ತದೆ. ತರ್ಕಶಾಸ್ತ್ರದಲ್ಲಿ ಜ್ಞಾನ ಎನ್ನುವ ಪದಕ್ಕೆ ಈ ರೀತಿಯಾಗಿ ಬಳಸಿದ್ದಾರೆ.

ಪಾರಂಪರಿಕ ಜ್ಞಾನವೆಂದು ಕರೆಯಲ್ಪಡುವ ಈ ಪದದಲ್ಲಿ ಪರಂಪರೆ + ಜ್ಞಾನ ಪಾರಂಪರಿಕ ಜ್ಞಾನ ಎಂಬ ಪದ ರಚನೆ ಆಗಿದೆ. ಪದಕೋಶದ ಪರಂಪರೆ ಪದದ ಅರ್ಥ ಹೀಗಿದೆ. ಪರಂಪರೆ ಇದೊಂದು ನಾಮಪದವಾಗಿದೆ. ಒಂದರ ನಂತರ ಮತ್ತೊಂದು ಬರುವುದು, ಸಂಪ್ರದಾಯ, ರೂಢಿ, ಆಚರಣೆಗಳು ಕಂಡುಬರುತ್ತವೆ. ಈ ಪರಂಪರೆಯ ಜೊತೆ ಜ್ಞಾನ ಎಂಬ ಪದವು ಸೇರಿಕೊಂಡಿದೆ. ಜ್ಞಾನ ಎಂದರೆ ಅರಿವು, ತಿಳಿವು ಎಂಬ ಅರ್ಥವಿದೆ. ಪಾರಂಪರಿಕ ಜ್ಞಾನ ಎಂಬ ಎರಡು ಪದಗಳ ಸಮ್ಮಿಲನದ ಅರ್ಥಹೀನವಾಗಿದೆ. ಮಾನವನು ತನ್ನ ಅನುಭವದ ಯುಕ್ತಿಯಿಂದ ಹಂತ ಹಂತವಾಗಿ ಕಲಿಯುತ್ತಾ ಬಂದಿರುವ ಜೀವನ ಕೌಶಲ್ಯಗಳು, ರೂಢಿ, ಸಂಪ್ರದಾಯಗಳನ್ನಾಗಿಸಿರುವ ವಿಶಿಷ್ಟವಾಗಿರುವ ನಿಯಾಮವಳಿಯೇ ಪಾರಂಪರಿಕ ಜ್ಞಾನವಾಗಿದೆ.

ಪಾರಂಪರಿಕ ಜ್ಞಾನವು ಹೀಗೆ ಒಂದುಕಡೆ ನೆಲೆನಿಂತಿರುವ ನಾಗರಿಕ ಸಮುದಾಯಗಳಿಗಿಂತ ಬುಡಕಟ್ಟು ಸಮುದಾಯಗಳ, ಸಂಪ್ರದಾಯ ಮತ್ತು ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಕಾರಣ ಬುಡಕಟ್ಟು ಜನಗಳು ಪ್ರತ್ಯಕ್ಷ ಅನುಭವವನ್ನು ಸ್ವೀಕರಿಸಲು ಸತ್ಯವನನು ಅರ್ಥಮಾಡಿಕೊಳ್ಳಲು ಸತ್ಯದ ಸ್ವರೂಪದ ಕಡೆಗೆ ಗಮನ ಹರಿಸುತ್ತಾರೆ. ಇಂತಹ ಅಂಶಗಳನ್ನು ತಮ್ಮ ನಿಯಮಗಳು ಎಂಬಂತೆ ಪರಂಪರೆಯಿಂದ ಪರಂಪರೆಗೆ ವರ್ಗಾಯಿಸುತ್ತಾ ಬಂದಿರುವುದು ಕಂಡುಬಂದಿದೆ. ಇದು ಭಾರತೀಯ ಸಂಸ್ಕೃತಿಯ ಬುಡಕಟ್ಟು ಜನ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ವಿಶಿಷ್ಟವಾಗಿ ಮತ್ತು ಅವರ ಸಂಸ್ಕೃತಿಯಾಗಿ ಕಂಡುಬರುತ್ತದೆ. ಉದಾಹರಣೆಗೆ ಬುಡಕಟ್ಟು ಸಮುದಾಯಗಳಲ್ಲಿ

ಕಂಡುಬರುವ ವೈದ್ಯ ಪದ್ಧತಿ, ಆಹಾರ ಪದ್ಧತಿ, ಕೃಷಿ ಪದ್ಧತಿ, ಹಬ್ಬದ ಆಚರಣೆ, ಉದ್ಯೋಗ, ಬೇಟೆ, ಪ್ರಾಣಿಗಳ ಸಾಕುವಿಕೆ ಹಾಗೂ ಪ್ರಾಣಿಗಳನ್ನು ಪಳಗಿಸುವಿಕೆ, ಪರಿಸರದೊಂದಿಗಿನ ಸಂಬಂಧ ಹಾಗೂ ಅರಣ್ಯದಲ್ಲಿ ಸಂಗ್ರಹಿಸುವ ವಿಶೇಷ ವಸ್ತುಗಳು, ಜೇನು ಇನ್ನು ಮುಂತಾದ ಅಂಶಗಳನ್ನು ಕಾಣಬಹುದು.

ನಾನು ಕಾಡುಕುರುಬ ಮತ್ತು ಜೇನುಕುರುಬರನ್ನು ಈ ಪಾರಂಪರಿಕ ಜ್ಞಾನದ ನಿಟ್ಟಿನಲ್ಲಿ ಅಧ್ಯಯನ ಮಾಡಲು ಮುಂದಾಗಿರುತ್ತೇನೆ. ಕಾಡುಕುರುಬರು ಮತ್ತು ಜೇನುಕುರುಬರ ಜೇನು ಇಳಿಸುವಿಕೆ, ನಾಟಿ ವೈದ್ಯಪದ್ಧತಿ, ಕೃಷಿ ಆಚರಣೆಗಳು, ಹಬ್ಬ ಹರಿದಿನಗಳು ಮತ್ತು ಅವರ ಆಚರಣೆಗಳನ್ನು ನಾನು ಪಾರಂಪರಿಕ ಜ್ಞಾನದ ದೃಷ್ಟಿಕೋನದಿಂದ ಅಳವಡಿಸಿರುತ್ತೇನೆ.

ಕಾಡುಕುರುಬರ ಪಾರಂಪರಿಕಜ್ಞಾನ

ಜೇನು ಕೀಳುವುದು: ಕಾಡುಕುರುಬರು ಮೊದಲಿನಿಂದಲೂ ಗೆಣಸು ಕೀಳುವುದು, ಬುಟ್ಟಿ ನೇಯುವುದು, ಜೇನು ಕೀಳುವುದು, ಬಿದಿರಿನಿಂದ ಕೆಲವಸ್ತುಗಳನ್ನು ತಯಾರಿಸುವುದು ಇವರ ಮೂಲ ಕಸುಬುಗಳು. ಜೇನು ಕೀಳುವುದು ಇವರ ಮೂಲ ಕಸುಬುಗಳಲ್ಲಿ ಒಂದಾಗಿದೆ. ಕಾಡುಕುರುಬರು ಜೇನು ಕೀಳುವ ಮೊದಲು ಅವರ ಕುಲದ ದೇವರುಗಳನ್ನು ನೆನೆದು ಜೇನುಗೂಡು ಇರುವ ಮರವನ್ನು ಪೂಜಿಸುತ್ತಾರೆ. ಪೂಜೆಗೆ ಗಂಧದ ಕಡ್ಡಿ, ಬಾಳೆಹಣ್ಣು, ತೆಂಗಿನಕಾಯಿ, ಎಲೆ, ಅಡಿಕೆ, ಕುಂಕುಮ, ಅರಿಶಿನ ಬಳಸುತ್ತಾರೆ. ವರ್ಷವಿಡೀ ಜೇನು ಕೀಳುವವರು ಅವರ ದೇವರಿಗೆ ಹರಕೆಯನ್ನು ಹೇಳುತ್ತಾರೆ. ಅಲ್ಲದೆ ಕಾಡಿನಲ್ಲಿ ಯಾವುದೇ ರೀತಿಯ ತೊಂದರೆಗಳು, ಪ್ರಾಣಿಗಳು ಕಾಟ ಕೊಡಬಾರದು ಎಂದು ಅವರು ದೇವರಿಗೆ ಹರಕೆಯನ್ನು ಕಟ್ಟುತ್ತಾರೆ. ದೇವರಿಗೆ ಆಡು, ಕುರಿ, ಅಥವಾ ಕೋಳಿಯನ್ನು ವರ್ಷದ ಹರಕೆಯಾಗಿ ಬಲಿಯನ್ನು ನೀಡುತ್ತಾರೆ. ಹರಕೆಯನ್ನು ಕಟ್ಟಿಕೊಂಡರೆ ಅವರ ಎಲ್ಲಾ ಕೆಲಸಗಳು ಸುಸೂತ್ರವಾಗಿ ಆಗಿಯೇ ತೀರುತ್ತವೆ ಮತ್ತು ಯಾವುದೇ ತೊಂದರೆಗಳು ಬರುವುದಿಲ್ಲ ಎಂಬ ದೃಢವಾದ ನಂಬಿಕೆ ಇವರಲ್ಲಿದೆ.

ಕಾಡುಕುರುಬರು ಜೇನುಗೂಡನ್ನು ಕಂಡುಹಿಡಿಯುವ ಬಗೆ ಹೇಗೆಂದರೆ ಜೇನುಹುಳುಗಳು ಹೂವಿನ ಮಕರಂದವನ್ನು ಹೀರಲು ಬಂದಾಗ ಅವು ಮಕರಂದವನ್ನು ತೆಗೆದುಕೊಂಡು ಹೋಗುವಾಗ ಅದರ ಗೂಡಿನ ಜಾಗ ಇಂತಹ ದಿಕ್ಕಿನಲ್ಲಿಯೇ ಇದೆ ಎಂದು ಗುರುತಿಸುತ್ತಾರೆ. ಅದು ಹೇಗೆಂದರೆ ಹೆಚ್ಚು ಹೆಚ್ಚು ಜೇನುಹುಳುಗಳು ಹೂವಿನ ಮಕರಂದವನ್ನು ಹೀರಿ ಯಾವ ದಿಕ್ಕಿನೆಡೆಗೆ ಸಾಗುತ್ತವೆಯೋ ಆ ದಿಕ್ಕಿನಲ್ಲಿ ಜೇನುಹುಳುಗಳ ಗೂಡು ಇದೆ ಎಂದು ಗುರುತಿಸುತ್ತಾರೆ ಮತ್ತು ಆ ದಿಕ್ಕಿನೆಡೆಗೆ ಹೋಗುತ್ತಾರೆ. ಜೇನುಹುಳುಗಳು ಹೆಚ್ಚಾಗಿ 'ಪೂಲೆ' ಮರದಲ್ಲಿ ಕಂಡುಬರುತ್ತವೆ.

ಜೇನುಗಳಲ್ಲಿ ಮೂರು ತರಹದ ಜೇನುಹುಳುಗಳನ್ನು ಕಾಣಬಹುದು. ೧. ಹೆಜ್ಜೇನು, ೨. ತುಡುಬೆ ಜೇನು, ೩. ಕಿರುಜೇನು. ಈ ಜೇನುಹುಳುಗಳು ಅತಿ ಎತ್ತರದ ಮರದಲ್ಲಿ, ಮೊಟರೆಗಳಲ್ಲಿ, ಹುತ್ತಗಳಲ್ಲಿ ಜೇನುಹುಳುಗಳು ತಮ್ಮ ಗೂಡನ್ನು ಕಟ್ಟುತ್ತವೆ.

ಕಾಡುಕುರುಬರು ಜೇನನ್ನು ಹೆಚ್ಚಾಗಿ ಮಳೆಗಾಲದಲ್ಲಿ ಕೀಳುತ್ತಾರೆ. ಮರದಲ್ಲಿರುವ ಜೇನನ್ನು ತೆಗೆಯಬೇಕೆಂದರೆ, ಮೊದಲು ಬಿದಿರಿನ ಬುಟ್ಟಿಯಲ್ಲಿ ಒಣಕಡ್ಡಿಗಳನ್ನು ಹಾಕಿ ಬೆಂಕಿ ಹೊತ್ತಿಸಿ ಅದರ ಮೇಲೆ ಹಸಿಯಾದ ಸೊಪ್ಪನ್ನು ಬೆಂಕಿಯಲ್ಲಿ ಹಾಕಿ ಅದರ ಹೊಗೆಯನ್ನು ಜೇನುಹುಳುಗಳ ಗೂಡಿಗೆ ತಾಕಿಸಿದಾಗ ಜೇನುಹುಳುಗಳು ಆ ಹೊಗೆಯಿಂದ ಮಂಕಾಗಿ ಅವು ಯಾರಿಗೂ ಕಚ್ಚದಂತೆ ಆಗುತ್ತವೆ. ಹಾಗೆಯೇ ಕೆಲ ಸಣ್ಣಪುಟ್ಟ ಜೇನುಹುಳುಗಳ ಗೂಡಿಗೆ ಬೀಡಿಯ ಹೊಗೆಯನ್ನು ಮತ್ತು ಊದಿನಕಡ್ಡಿ ಹೊಗೆಯನ್ನು ಸಹ ತಾಕಿಸಿ ಸುಲಭವಾಗಿ ಜೇನನ್ನು ಸಂಗ್ರಹಿಸುತ್ತಾರೆ. ಈ ಹೊಗೆಯಿಂದ ಜೇನುಹುಳುಗಳು ಮಂಕಾಗಿ ಯಾರಿಗೂ ಕಚ್ಚುವುದಿಲ್ಲ. ಯಾವುದೇ ರೀತಿಯ ತೊಂದರೆಯನ್ನು ಕೊಡುವುದಿಲ್ಲ. ಹಾಗೆಯೇ ಹೆಜ್ಜೇನುಗಳ ಗೂಡನ್ನು ರಾತ್ರಿ ವೇಳೆಯಲ್ಲಿ ಕೀಳಲು ಒಳ್ಳೆಯ ಸಮಯವಂತೆ. ರಾತ್ರಿ ವೇಳೆಯಲ್ಲಿ ಜೇನುಹುಳು ಹೆಚ್ಚಾಗಿ ಹಾರುವುದಿಲ್ಲ. ಹಾಗೂ ತೊಂದರೆಯನ್ನು ಕೊಡುವುದಿಲ್ಲ.

ದೊಡ್ಡ ದೊಡ್ಡ ಮರಗಳಲ್ಲಿರುವ ಜೇನುಗೂಡುಗಳನ್ನು ಕೀಳಲು ಬಿದಿರಿನ ಏಣಿಯನ್ನು ಬಳಸುತ್ತಾರೆ. ಹಾಗೆಯೇ ಸಣ್ಣ ಮರದಲ್ಲಿರುವ ಜೇನುಗೂಡುಗಳನ್ನು ಇವರೇ ಸ್ವತಃ ಮರವನ್ನು ಹತ್ತಿ ಇಳಿಸುತ್ತಾರೆ. ದೊಡ್ಡ ಮರಗಳಿಗೆ ಬೇಕಾದಂತಹ ಏಣಿಯನ್ನು ಕಾಡುಕುರುಬರು ಕಾಡಿನಲ್ಲಿಯೇ ತಯಾರಿಸಿಕೊಳ್ಳುತ್ತಾರೆ. ಜೇನು ಕಿತ್ತ ನಂತರ ಜೇನನ್ನು ಕೆಳಗಿಳಿಸಲು ಬಿದಿರಿನ ಕುಳೆಯನ್ನು(ಬುಟ್ಟಿ) ತಯಾರಿಸಿಕೊಂಡು ಬಂದಿರುತ್ತಾರೆ. ನಂತರ ಮರವನ್ನು ಹತ್ತಿ ಜೇನುಗೂಡಿಗೆ ಹೊಗೆಯನ್ನು ಕೊಟ್ಟು ಜೇನನ್ನು ಕಿತ್ತು ಅದನ್ನು ಕುಳೆಯಲ್ಲಿ ಹಾಕಿ ಹಗ್ಗದ ಸಹಾಯದಿಂದ ಜೇನನ್ನು ಕೆಳಗೆ ಇಳಿಸಲಾಗುತ್ತದೆ. ಹಗ್ಗ ಇಲ್ಲದಂತಹ ಸಮಯದಲ್ಲಿ ಸೊಂಟಕ್ಕೆ ಬುಟ್ಟಿಯನ್ನು ಕಟ್ಟಿಕೊಂಡು ಅದರಲ್ಲಿ ಜೇನನ್ನು ಹಾಕಿಕೊಂಡು ಇಳಿಯುತ್ತಾರೆ. ಜೇನನ್ನು ಕೀಳಲು ನಾಲ್ಕು ಅಥವಾ ಐದು ಜನರು ಹೋಗುತ್ತಾರೆ. ಹೆಜ್ಜೇನು ಗೂಡಲ್ಲಿ ೪ರಿಂದ ೫ ಕೆ.ಜಿ.ಯಷ್ಟು ಜೇನುತುಪ್ಪ ಸಿಗುತ್ತದೆ. ತುಡುಬೆ ಜೇನು ಹುತ್ತದಲ್ಲಿ ಜೇನುಗೂಡು ಕಟ್ಟುವುದರಿಂದ ಅದರಲ್ಲಿಯೂ ಹೆಚ್ಚು ಜೇನು ಸಿಗುತ್ತದೆ. ಸಣ್ಣ ಸಣ್ಣ ಜೇನುಗೂಡುಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಅಂದರೆ ಒಂದು ಕೆ.ಜಿ. ಅಥವಾ ಅರ್ಧ ಕೆ.ಜಿ.ಯಷ್ಟು ಜೇನು ಸಿಗುತ್ತದೆ. ಒಂದು ವೇಳೆ ಜೇನುಗೂಡು ಕೀಳುವಾಗ ಹೆಚ್ಚಾಗಿ ಜೇನುಹುಳುಗಳು ಕಚ್ಚಿದರೆ ಜ್ವರ ಬರುವ ಸಾಧ್ಯತೆ ಇರುತ್ತದೆ ಹಾಗೂ ಬಾವು ಬರುತ್ತದೆ. ಬಾವು ಒಂದು ದಿನದ ನಂತರ ಇಳಿಯುತ್ತದೆ. ಕಾಡುಕುರುಬರಲ್ಲಿ ಜೇನುಹುಳು ಕಚ್ಚಿದರೆ ಯಾವುದೇ ರೀತಿಯ ಔಷಧಿಗಳು ಇಲ್ಲ. ಅದು ಸಾಮಾನ್ಯವಾಗಿಯೇ ವಾಸಿಯಾಗುತ್ತದೆ. ಆದರಿಂದ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ.

ಕಾಡುಕುರುಬರು ಜೇನನ್ನು ಗೆಡ್ಡೆ-ಗೆಣಸು ತಿನ್ನಲು, ಆಲಸಿನ ಹಣ್ಣಿನ ಜೊತೆ, ರೊಟ್ಟಿಯ ಜೊತೆ ತುಪ್ಪವನ್ನು ಬಳಸುತ್ತಾರೆ. ಸಣ್ಣ ಮಕ್ಕಳಿಗೆ ಕೆಮ್ಮು ಬಂದಾಗ ತುಡುಬೆ ಜೇನಿನ ತುಪ್ಪವನ್ನು ನೆಕ್ಕಿಸುತ್ತಾರೆ. ಅದರಲ್ಲೂ ಕಡ್ಡಿಜೇನಿನ ತುಪ್ಪದ ಜೊತೆಗೆ ಅರಿಶಿನ, ಮೆಂತೆ, ಮೆಣಸು, ಬೆಳ್ಳುಳ್ಳಿಯನ್ನು ಹಾಕಿ ಒಲೆಯ ಮೇಲೆ ಚೆನ್ನಾಗಿ ಕಾಯಿಸಿ ಔಷಧಿಯನ್ನು ತಯಾರಿಸಿಟ್ಟುಕೊಂಡು ಅದನ್ನು ಒಂದು ವರ್ಷ ಕಾಲ ಅದನ್ನು ಮಕ್ಕಳ ಆರೋಗ್ಯ ರಕ್ಷಣೆಗೆ ಬಳಸುತ್ತಾರೆ. ಹೆಚ್ಚು ಜೇನು ಸಂಗ್ರಹವಾದಾಗ ಅದನ್ನು ಸ್ಥಳೀಯ ಮಾರುಕಟ್ಟೆಗೆ ಅಥವಾ ಕೇರಳ, ತಮಿಳುನಾಡಿಗೆ ಹೋಗಿ ಮಾರಾಟ ಮಾಡುತ್ತಿದ್ದರು. ಆದರೆ ಇಂದು ಅರಣ್ಯ ಕಾಯಿದೆಯನ್ವಯ ಕಾಡಲ್ಲಿ ಜೇನು ಕೀಳುವುದು, ಮಾರುವುದು ಅಪರಾಧವಾಗಿರುವುದರಿಂದ ಕಳ್ಳತನದಲ್ಲಿಯೇ ಕಿತ್ತು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುತ್ತಾರೆ. ಸಾಧ್ಯವಾದರೆ ಸ್ಥಳೀಯವಾಗಿ ಬೇಕಾದಂತವರಿಗೆ ಇಂತಿಷ್ಟು ಹಣಕ್ಕೆ ಮಾರುತ್ತಾರೆ.

ಜೇನುಕುರುಬರ ಪಾರಂಪರಿಕಜ್ಞಾನ

ಹಿಂದಿನ ಕಾಲದಿಂದಲೂ ಜೇನುಕುರುಬರ ಮೂಲ ಕಸುಬು ಜೇನು ಕೀಳುವುದು. ಆದ್ದರಿಂದ ಇವರಿಗೆ ಜೇನುಕುರುಬರು ಎಂದು ಹೆಸರು ಬಂದಿದೆ. ಜೇನು ಕೀಳುವುದಲ್ಲದೆ ಗೆಣಸು ಕೀಳುವುದು, ನಾರು ಬಿಡಿಸುವುದು, ಬಿದಿರಿನ ಕಡ್ಡಿಯಿಂದ ಬುಟ್ಟಿ ತಯಾರಿಸುವುದು ಸಹ ಇವರ ವೃತ್ತಿಗಳಾಗಿದ್ದವು. ಜೇನುಕುರುಬರು ನೂರಗೆಣಸು, ನವರೆಗೆಣಸು, ಏಕುಗೆಣಸು, ನಾರಗೆಣಸು, ಕೊರಣೆ ಗೆಣಸು, ಎರೆಗೆಣಸು, ಸಣ್ಣಕೊರಣೆ ಗೆಣಸುಗಳನ್ನು ತಿನ್ನುತ್ತಿದ್ದರು.

ಜೇನನ್ನು ತೆಗೆಯುವ ವಿಧಾನ: ಜೇನುಕುರುಬರು ಹೇಳುವಂತೆ ಜೇನುಗಳು ಹೆಚ್ಚಾಗಿ ಅತಿ ಎತ್ತರವಾದ ಮರದ ಮೇಲೆ ಹಾಗೂ ಪುಲೆ ಮರದಲ್ಲಿ ಗೂಡನ್ನು ಕಟ್ಟುತ್ತವೆ. ಜೇನಿನ ಬಗೆಗಳು: ೧. ಕಿರಿ ಜೇನು, ೨. ತುಡುಬೆ ಜೇನು, ೩. ಹೆಜ್ಜೇನು ರೀತಿಯ ಜೇನುಗಳನ್ನು ಗುರುತಿಸಬಹುದು.

ಜೇನುಕುರುಬರು ಜೇನು ಕೀಳುವ ಮುಂಚೆ ಮರದ ಬುಡಕ್ಕೆ ಪೂಜೆಯನ್ನು ಮಾಡುತ್ತಾರೆ. ಪೂಜೆ ಮಾಡುವ ಸಮಯದಲ್ಲಿ ಅಜ್ಜಿ ದೊಡ್ಡ ಮನೆ ದೇವರ ಹೆಸರಿನಲ್ಲಿ ಹಾಗೂ ತೀರಿ ಹೋದ ಹಿರಿಯರ ಹೆಸರನ್ನು ನೆನೆಯುವ ಮೂಲಕ ಪೂಜೆಯನ್ನು ಸಲ್ಲಿಸಿ ಆ ನಂತರ ಪೂಜೆಗೆಂದು ಹಣ್ಣು, ಕಾಯಿ, ಗಂಧದ ಕಡ್ಡಿಯನ್ನು ಬಳಸುತ್ತಾರೆ. ನಂತರ ಮರವನ್ನು ಹತ್ತಲು ಪ್ರಾರಂಭಿಸುತ್ತಾರೆ. ಮರವನ್ನು ಹತ್ತಲು ಬಿದಿರಿನ ಏಣಿಯನ್ನು ಬಳಸುತ್ತಾರೆ. ಇಲ್ಲವೇ ಮರಕ್ಕೆ ಅಲ್ಲಲ್ಲಿ ಕಚ್ಚುಗಳನ್ನು ಹಾಕಿ ಮರವನ್ನು ಹತ್ತುತ್ತಾರೆ. ಅತ್ತಿ ಎತ್ತರದ ಮರಗಳನ್ನು ಹತ್ತುವಾಗ ಮೊದಲು ಸಣ್ಣ ಮರವನ್ನು ಹತ್ತಿ ಅದರ ಮೇಲೆ ನಿಂತು ಬಿದಿರಿನ ಕೊಕ್ಕೆಯನ್ನು ಹಾಕಿ ಮರವನ್ನು ಹತ್ತುತ್ತಾರೆ. ನಂತರ ಬಿದಿರಿನ ಬುಟ್ಟಿಯಲ್ಲಿ ಸಣ್ಣ

ಸಣ್ಣ ಕಡ್ಡಿಗಳನ್ನು ಹಾಕಿ ಬೆಂಕಿ ಹೊತ್ತಿಸಿ ಅದರ ಮೇಲೆ ಹಸಿಯಾದ ಎಲೆಯನ್ನು ಹಾಕಿ ಅದನ್ನು ಜೇನಿನ ಗೂಡಿನ ಬಳಿ ಕೊಂಡೊಯ್ದಾಗ ಆ ಜೇನುಹುಳುಗಳು ಆ ಹೊಗೆಗೆ ಮಂಕಾಗುತ್ತವೆ. ಆ ಸಮಯದಲ್ಲಿ ಜೇನುಗೂಡನ್ನು ಬಿದಿರಿನ ಹಚ್ಚೆಯಿಂದ ಕೊಯ್ಯುವುದು. ಆ ನಂತರ ಜೇನನ್ನು ಬಿದಿರಿನ ಬುಟ್ಟಿಯಲ್ಲಿ(ಪುಣೆ ಅಂದರೆ ಬಿದಿರಿನ ಬುಟ್ಟಿ) ಸಂಗ್ರಹಿಸಿ ಅದನ್ನು ತೆಗೆದುಕೊಂಡು ಹೋಗುತ್ತಿದ್ದರು. ಮರದ ಮೇಲೆ ಸಂಗ್ರಹಿಸಿದ ಜೇನನ್ನು ಹಗ್ಗದ ಸಹಾಯದ ಮೂಲಕ ಕೆಳಗೆ ಇಳಿಸುತ್ತಾರೆ. ೫ ಅಥವಾ ೬ ಜನರು ಸೇರಿ ೭ರಿಂದ ೮ ಜೇನುಗೂಡನ್ನು ಕೀಳುತ್ತಿದ್ದರು. ಒಂದೊಂದು ಜೇನುಗೂಡಿನಲ್ಲಿ ೪ರಿಂದ ೫ ಕೆ.ಜಿ.ಗಿಂತಲೂ ಹೆಚ್ಚಾಗಿ ಜೇನುತುಪ್ಪ ಇರುತ್ತದೆ. ಜೇನನ್ನು ಹೆಚ್ಚಾಗಿ ಮಾರ್ಚ್ ಮತ್ತು ಮೇ ತಿಂಗಳಿನಲ್ಲಿ ಸಂಗ್ರಹಣೆ ಮಾಡುತ್ತಾರೆ. ಸಂಗ್ರಹಿಸಿದ ಜೇನನ್ನು ಕೇರಳದವರು ಬಂದು ಕೊಂಡುಕೊಳ್ಳುತ್ತಿದ್ದರು. ಜೇನು ಕೀಳಲು ಕಾಡಿಗೆ ಹೋಗುವಾಗ ಅವರು ಮನೆಯಿಂದಲೇ ಆಹಾರವನ್ನು ತೆಗೆದುಕೊಂಡು ಹೋಗುತ್ತಿದ್ದರು. ಕಾಡಿನಲ್ಲಿ ಹೋಗುವಾಗ ದುಷ್ಟ ಪ್ರಾಣಿಗಳು ಎದುರಾದರೆ ಎಲ್ಲರೂ ಸೇರಿ ಜೋರಾಗಿ ಕಿರುಚುವ ಮೂಲಕ ಪ್ರಾಣಿಗಳನ್ನು ಎದುರಿಸುತ್ತಿದ್ದರು.

ಕಾಡುಕುರುಬರ ವಾಸಸ್ಥಳದ ಪರಿಕಲ್ಪನೆ: ಕಾಡುಕುರುಬರು ವಾಸಿಸುವ ಮನೆಗಳು ಅಪ್ಪಟ ಬುಡಕಟ್ಟು ಮನೆಗಳಂತಿರುತ್ತವೆ. ಬಹುತೇಕ ಇವರ ಮನೆಗಳು ಗುಡಿಸಿಲು ಮನೆಗಳಾಗಿರುತ್ತವೆ. ಈ ಗುಡಿಸಿಲುಗಳು ಕಾಡುಕುರುಬರ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ಸೂಚಿಸುತ್ತದೆ. ಕಾಡುಕುರುಬರು ತಮ್ಮ ಹಾಡಿಗಳಲ್ಲಿ ಗುಡಿಸಿಲುಗಳನ್ನು ಮತ್ತೆ ಕೆಲವರು ಸರ್ಕಾರದ ವತಿಯಿಂದ ನೀಡಿರುವ ಆಶ್ರಯ ಹಂಚಿನ ಮನೆಗಳನ್ನು ಹೊಂದಿರುತ್ತಾರೆ. ಹಿಂದಿನ ಕಾಲದಲ್ಲಿ ಕಾಡುಕುರುಬರು ಕಾಡಿನಲ್ಲಿಯೇ ಗುಡಿಸಿಲುಗಳನ್ನು ಕಟ್ಟಿಕೊಂಡು ತಮ್ಮದೇ ಆದಂತಹ ಹಾಡಿಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇಂದು ಸರ್ಕಾರ ಅವರನ್ನು ಕಾಡಿನಿಂದ ಹೊರಗೆ ಹಾಕಿ, ಅವರ ಸ್ವಚ್ಛಂದದ ಬದುಕಿಗೆ ಕಡಿವಾಣ ಹಾಕಿ ಅವರನ್ನು ನಾಡಿನ ಸಮೀಪಕ್ಕೆ ಕರೆ ತಂದಿದೆ. ಆದರೆ ಕಾಡುಕುರುಬರು ತಮ್ಮ ಮೂಲ ಸಂಪ್ರದಾಯವನ್ನು ಬಿಟ್ಟು ಹೋಗಿಲ್ಲ. ಅವರು ತಮ್ಮ ಸಂಪ್ರದಾಯದ ಪ್ರಕಾರವಾಗಿಯೇ ತಮ್ಮ ಮನೆಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಇವರು ಮನೆ ಕಟ್ಟುವಾಗ ಯಾವುದೇ ವಾಸ್ತುವನ್ನು ನೋಡುವುದಿಲ್ಲ. ಇವರು ಗುಂಪು ಗುಂಪಾಗಿ ವಸತಿಗಳನ್ನು ನಿರ್ಮಿಸಿರುತ್ತಾರೆ.

ಕಾಡುಕುರುಬರು ವಾಸಿಸುವ ಅಥವಾ ನೆಲೆಸಿರುವ ಸ್ಥಳಕ್ಕೆ ಅವರ ಭಾಷೆಯಲ್ಲಿ 'ಮತರಿ' ಎಂದು ಕರೆಯುತ್ತಾರೆ. ಅವರು ವಾಸಿಸುವ ಸ್ಥಳಗಳಲ್ಲಿ ೧೦ರಿಂದ ೨೦ ಗುಡಿಸಿಲು ಮನೆಗಳು ಒಂದೇ ಕಡೆ ನೆಲೆಸಿರುತ್ತವೆ. ಕಾಡುಕುರುಬರು ಒಂದು ಮನೆಯನ್ನು ಕಟ್ಟಬೇಕಾದರೆ ಮೊದಲು ಯಜಮಾನನಲ್ಲಿ ಹೋಗಿ ಕೇಳಬೇಕು. ಆಗ ಯಜಮಾನನು ಜಾಗವನ್ನು ತೋರಿಸಿ ಒಂದು 'ಮೆಳೆ'ಯನ್ನು ತೆಗೆದುಕೊಡುತ್ತಾನೆ(ಮೆಳೆ ಅಂದರೆ ಮೊದೆ

ಅಥವಾ ಶಾದ್ರಿಯನ್ನು). ಆಗ ಅಲ್ಲಿರುವ ಕಸಕಡ್ಡಿ, ಪೊದೆಯನ್ನು ಉಳಿದವರು ಶುಚಿಮಾಡಿ ಮನೆಯನ್ನು ಕಟ್ಟಿಕೊಳ್ಳಲು ಜಾಗವನ್ನು ಸಜ್ಜು ಮಾಡುತ್ತಾರೆ. ಕಾಡುಕುರುಬರ ಭಾಷೆಯಲ್ಲಿ ಮನೆ ಕಟ್ಟಲು ಜಾಗ ಕೊಟ್ಟಿರುವುದಕ್ಕೆ "ಕೀರ ತೇರೆ ಕೊಟ್ನನೀಯಾ" ಅಂದರೆ ಮನೆ ಕಟ್ಟಲು ಜಾಗ ಕೊಟ್ಟಿದ್ದೇನೆ ಎಂದರ್ಥ.

ಮನೆ ಕಟ್ಟಲು ಜಾಗ ಕೊಟ್ಟ ನಂತರ ಇವರು ಯಜಮಾನನ ಒಕ್ಕಲಿಗೆ ಒಳಪಟ್ಟರು ಎನ್ನಲಾಗುತ್ತದೆ. ನಂತರ ಕಾಡುಕುರುಬರು ಬಿದಿರಿನಲ್ಲಿ ಮನೆಯನ್ನು ಕಟ್ಟುತ್ತಾರೆ. ಅಥವಾ ಗೋಡೆಯಿಂದಲೂ ಮನೆಯನ್ನು ಕಟ್ಟುತ್ತಾರೆ. ಮನೆಯ ಚಾವಣಿಯನ್ನು ಸೊಪ್ಪಿನಿಂದ ಮುಚ್ಚುತ್ತಾರೆ. ಆ ಸೊಪ್ಪುಗಳೆಂದರೆ ಮುತ್ತಿಗೆ ಸೊಪ್ಪು, ಮತ್ತಿ ಸೊಪ್ಪು, ಸಾಗಟೆ ಸೊಪ್ಪು, ಹುಲ್ಲು ಇವುಗಳನ್ನು ಬಳಸಿ ಛಾವಣಿಯನ್ನು ಭದ್ರಪಡಿಸುತ್ತಾರೆ. ಇವರು ಮನೆ ಕಟ್ಟುವಾಗ ಯಾವುದೇ ವಾಸ್ತುವನ್ನು ನೋಡುವುದಿಲ್ಲ. ಇವರು ಮನೆಯನ್ನು ಚೌಕಾಕಾರವಾಗಿ ಕಟ್ಟುತ್ತಾರೆ. ಮನೆಯನ್ನು ಇಂಥವರೇ ಬಂದು ಕಟ್ಟಬೇಕೆಂದಿಲ್ಲ ಯಾರು ಬೇಕಾದರೂ ಬಂದು ಮನೆ ಕಟ್ಟಲು ಸಹಾಯ ಮಾಡಬಹುದು. ಕಾಡುಕುರುಬರು ಹಿಂದಿನ ಕಾಲದಲ್ಲಿ ಮನೆಯ ಬಾಗಿಲನ್ನು ಕೇವಲ ೩ ಅಡಿ ಎತ್ತರಕ್ಕೆ ಇಡುತ್ತಿದ್ದರು. ಈಗ ಕಾಡುಕುರುಬರು ಮನೆಯ ಬಾಗಿಲನ್ನು ೬ ಅಡಿ ಎತ್ತರದವರೆಗೂ ಇಡುತ್ತಾರೆ. ಇವರು ಗ್ರಾಮದಲ್ಲಿ ಮನೆಯನ್ನು ಚೌಕಾಕಾರದಲ್ಲಿ ನಿರ್ಮಿಸಿಕೊಂಡಿದ್ದಾರೆ. ಬೇರೊಂದು ಹಾಡಿಯ ಯಜಮಾನ ಇನ್ನೊಂದು ಹಾಡಿಗೆ ಹೋಗಿ ಯಾವುದೇ ರೀತಿಯಾದ ಕಾರ್ಯವನ್ನು ಮಾಡುವಂತಿಲ್ಲ. ಆ ಹಾಡಿಯ ಯಜಮಾನನೇ ಪ್ರತಿಯೊಂದು ಕಾರ್ಯದ ಮುಖ್ಯಸ್ಥಿಕೆಯನ್ನು ವಹಿಸಿಕೊಳ್ಳಬೇಕು. ಬೇರೊಂದು ಹಾಡಿಯ ಯಜಮಾನರು ಬಂದರೂ ಸಹ ಯಾವುದೇ ಕಾರ್ಯವನ್ನು ಮಾಡುವಂತಿಲ್ಲ.

ಇತ್ತೀಚೆಗೆ ಕೆಲವು ಕಾಡುಕುರುಬರಿಗೆ ಸರ್ಕಾರದ ವತಿಯಿಂದ ವಸತಿ ಸೌಲಭ್ಯವನ್ನು ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ.

ಜೇನುಕುರುಬರ ವಾಸಸ್ಥಳ: ಜೇನುಕುರುಬರು ವಾಸಿಸುವ ಸ್ಥಳಗಳಲ್ಲಿ ೧೦ರಿಂದ ೨೦ ಮನೆಗಳು ಒಂದೇ ಕಡೆ ಇರುತ್ತವೆ. ಜೇನುಕುರುಬರು ಮನೆಗಳನ್ನು ಹೆಚ್ಚಾಗಿ ನೀರು ಹಾಗೂ ಹುಲ್ಲು ಚಾವಣಿ, ಮಣ್ಣಿನ ನೆಲ, ಚಕ್ರಾಕಾರದ ಗೋಡೆಯನ್ನು ನಿರ್ಮಿಸಿ ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಮನೆಯ ಒಳಗೆ ಒಬ್ಬ ವ್ಯಕ್ತಿಯು ಹೋಗಬಹುದಾದಷ್ಟು ಸಣ್ಣದಾಗಿ ಜಾಗವನ್ನು ಬಿಟ್ಟಿರುತ್ತಾರೆ. ಇವರು ತಮ್ಮ ಮನೆಯ ಸುತ್ತ ನಿರ್ಮಿಸಿಕೊಂಡಿರುವ ಮನೆಗಳ ಗುಂಪಿಗೆ ಹಾಡಿ ಎಂದು ಕರೆಯುತ್ತಾರೆ. ಇವರು ಮನೆ ಕಟ್ಟುವ ಮುಂಚೆ ದೇವರನ್ನು ಕರೆಯಿಸಿ ಕೇಳುತ್ತಾರೆ. ದೇವರು ಯಾವ ದಿಕ್ಕನ್ನು ತೋರಿಸುತ್ತವೆಯೋ ಅದೇ ದಿಕ್ಕಿಗೆ ಹೋಗಿ ಮನೆಯನ್ನು ನಿರ್ಮಿಸುತ್ತಿದ್ದರು.

ಕಾಡುಕುರುಬರ ವೈದ್ಯಪದ್ಧತಿ:

೧. **ಹಿರಂಡ ಎಲೆ:** ಈ ಎಲೆಯನ್ನು ನೀರ್ಗುಂಡಿ ತೈಲ ಮಾಡಲು ಬಳಸುತ್ತಾರೆ. ಈ ಎಲೆಯನ್ನು ಪಿಂಡವನ್ನು ಮಾಡಲು ಬಳಸುತ್ತಾರೆ. ಇದರ ಬೀಜದಿಂದ ಅರಳೆ ಎಣ್ಣೆ ಮಾಡುತ್ತಾರೆ. ಈ ತೈಲವನ್ನು ತಲೆಗೆ ಹಾಕಲು ಬಳಸುತ್ತಾರೆ. ದೇಹದಲ್ಲಿ ಕಾಲುನೋವು, ಕೈನೋವು, ಬೆನ್ನನೋವು, ಕತ್ತು ನೋವುಗಳಿಗೆ ಮಸಾಜ್ ಮಾಡಲು ಉಪಯೋಗಿಸುತ್ತಾರೆ.

೨. **ಭೂಮಿ ನೆಲ್ಲಿಕಾಯಿ ಗಿಡ:** ಈ ಭೂಮಿ ನೆಲ್ಲಿಕಾಯಿಯ ಗಿಡವನ್ನು ಜಾಂಡೀಸ್ ರೋಗವಿರುವ ವ್ಯಕ್ತಿಗೆ ಅರೆದು ಕುಡಿಸಬೇಕು.

೩. **ಸರ್ಪಗಂಧ:** ಈ ಸರ್ಪಗಂಧ ಎಲೆಯನ್ನು ಹಾವು ಕಡಿದಾಗ ಅರೆದು ರಸ ಮಾಡಿ ಕುಡಿಸಬೇಕು.

೪. **ಲಕ್ಕಿಸೊಪ್ಪು:** ಈ ಎಲೆಯನ್ನು ರಸ ಮಾಡಿ ನೀರ್ಗುಂಡಿ ತೈಲ ಮಾಡಲು ಉಪಯೋಗಿಸುತ್ತಾರೆ. ನೋವು ನಿವಾರಕ್ಕೆ ಬಳಸಲಾಗುತ್ತದೆ.

೫. **ನುಗ್ಗೆ ಸೊಪ್ಪು:** ನುಗ್ಗೆ ಸೊಪ್ಪಿನ ಎಲೆಯನ್ನು ನೀರ್ಗುಂಡಿ ತೈಲ ಮಾಡಲು ಬಳಸುತ್ತಾರೆ ಮತ್ತು ಪಿಂಡ ಮಾಡಲು ಸಹ ಬಳಸುತ್ತಾರೆ.

೬. **ಬೇವಿನ ಎಲೆ:** ಬೇವಿನ ಎಲೆ ರಕ್ತ ಶುದ್ಧಿಗುಣವನ್ನು ಹೊಂದಿರುವುದರಿಂದ ಚರ್ಮ ರೋಗಗಳಿಗೆ ಉಪಯುಕ್ತ. ಯುಗಾದಿ ಕಾಲದಲ್ಲಿ ಬೇವಿನ ಸೇವನೆ ಬಹಳ ಪರಿಣಾಮಕಾರಿಯಾಗಿರುತ್ತದೆ. ಬೇವಿನ ಸೊಪ್ಪನ್ನು ಅರಿಶಿಣದೊಂದಿಗೆ ಅರೆದು ಚರ್ಮಕ್ಕೆ ಹಚ್ಚುವುದರಿಂದ ಶೀತಪಿತ್ತ (ತುರಿಕೆ, ಕಜ್ಜಿ)ಕ್ಕೆ ಉಪಯುಕ್ತವಾಗುತ್ತದೆ.

೭. **ಹೊಂಗೆ ಮರದ ಎಲೆ:** ರಕ್ತಬೇಧಿಗೆ ಈ ಮರದ ಚಕ್ಕೆ ಉಪಯುಕ್ತವಾದ ಔಷಧ. ಇದರ ಚಕ್ಕೆಯನ್ನು ಕೆತ್ತಿ ಹುರುಪೆ ತೆಗೆದು ಜಜ್ಜಿ ತಣ್ಣೀರಿನಲ್ಲಿ ೩೦ ನಿಮಿಷಗಳ ಕಾಲ ನೆನಸಿ ನಂತರ ಖಾಲಿ ಹೊಟ್ಟೆಗೆ ಕೊಟ್ಟರೆ ಭೇದಿ ನಿಂತು ಹೋಗುತ್ತದೆ.

೮. **ದಾಸವಾಳ ಸೊಪ್ಪು:** ಈ ಗಿಡದ ಎಲೆಯನ್ನು ನೀರಿನಲ್ಲಿ ಕಿವುಚಿ ತಲೆಗೆ ಹಚ್ಚಿಕೊಂಡು ಸ್ನಾನ ಮಾಡಿದರೆ ತಲೆಹೊಟ್ಟು ನಿವಾರಣೆಯಾಗುತ್ತದೆ.

೯. **ಪಿಪ್ಪಲಿ ಎಲೆ:** ಪಿಪ್ಪಲಿ ಗಿಡದ ಕಾಯಿಯನ್ನು ಚೂರ್ಣ ಮಾಡಿ ಕಷಾಯ ಪುಡಿ ಮಾಡಿ ಮತ್ತು ಆಮ್ಲಕ್ಕೆ ರಸಾಯನ ಮಾಡಲು ಬಳಸುತ್ತಾರೆ.

೧೦. **ಬಳಕಡ್ಡಿ ಸೊಪ್ಪು:** ಈ ಗಿಡದ ಸೊಪ್ಪಿಗೆ ನೀರು ಸೇರಿಸದೆ ಅರೆದು ಕುರುವಿನ ಮುಖವನ್ನು ಹೊರತುಪಡಿಸಿ ಲೇಪಿಸಿದರೆ ಕುರವು ಒಡೆದು ಗುಣವಾಗುತ್ತದೆ.

೧೧. **ಗಾಳಿ ಮದ್ದಿನ ಸೊಪ್ಪು:** ಗಾಳಿ ಸೋಕು ಏನಾದರೂ ಬಂದರೆ ಈ ಸೊಪ್ಪನ್ನು ಕಾಳಮೆಣಸು, ಬೆಳ್ಳುಳ್ಳಿ, ಸೇರಿಸಿ ಜಜ್ಜಿ ಮೈಗೆಲ್ಲ ಲೇಪಿಸಿ ಮೂಗಿಗೆ ಹಿಂಡಿ, ನಂತರ ಲೇಪನವನ್ನು ಬಟ್ಟೆಯಲ್ಲಿ ಸುತ್ತಿ ಕೈಗೆ ಕಟ್ಟಬೇಕು.

೧೨. **ಸೂಲುಬಳ್ಳಿ ಮತ್ತು ಅಗಲು ಶುಂಠಿ:** ತಲೆಯಲ್ಲಿ ಹೊಟ್ಟು ಆದರೆ ಈ ಬಳ್ಳಿಯ ಸೊಪ್ಪನ್ನು ಅರೆದು ನೆತ್ತಿಗೆ ಲೇಪಿಸಿದರೆ ತಲೆನೋವು ಶಮನವಾಗಿ ಹೊಟ್ಟು ನಿವಾರಣೆಯಾಗುತ್ತದೆ. ಇದು ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ.

ಈ ಬಳ್ಳಿಯ ಸೊಪ್ಪನ್ನು ತಂದು ಬೇಯಿಸಿ ಜೀರಿಗೆ ಅರೆದು ಅದರಲ್ಲಿ ಸೇರಿಸಿ ಕುಡಿಯುತ್ತಾ ಬಂದರೆ ಬಿಳಿಸೆರಗು ಕಡಿಮೆಯಾಗುತ್ತದೆ.

೧೩. **ಅಮೃತ ಬಳ್ಳಿ:** ಅಮೃತ ಬಳ್ಳಿಯ ರಸ ಅಥವಾ ಕಷಾಯ ಸೇವಿಸುವುದರಿಂದ ಜ್ವರ ನಿವಾರಣೆಯಾಗುತ್ತದೆ. ಅಮೃತ ಬಳ್ಳಿಯ ಎಲೆಯನ್ನು ಜಾಂಡೀಸ್ ರೋಗಕ್ಕೆ ರಸ ಮಾಡಿ ಕೊಡುತ್ತಾರೆ. ಅಮೃತ ಬಳ್ಳಿಯ ಸೋಂಕುನಿರೋಧಕ ಶಕ್ತಿಯನ್ನು ಹೊಂದಿರುತ್ತದೆ.

೧೪. **ನೀಲಗಿರಿ ಎಲೆ:** ನೀಲಗಿರಿ ಎಲೆಯನ್ನು ಅಮೃತ ಬಿಂದು ತೈಲ ಮಾಡಲು ಬಳಸುತ್ತಾರೆ. ಮತ್ತು ನೀರ್ಗುಂಡಿ ತೈಲ ಮಾಡಲು ಉಪಯೋಗಿಸುತ್ತಾರೆ.

೧೫. **ಮುಟ್ಟಿದರೆ ಮುನಿ(ನಾಚಿಕೆ ಗಿಡ):** ಅತಿಸಾರ ಭೇದಿಯಾದಾಗ ವಯೋಮಿತಿಯ ಭೇದವಿಲ್ಲದೆ ಈ ಗಿಡದ ಎಲೆಯನ್ನು ತೊಳೆದು, ನುಣ್ಣಗೆ ಅರೆದು ನೀರು ಸೇರಿಸದೆ ಹಾಲಿನಲ್ಲಿ ಮಿಶ್ರಣ ಮಾಡಿ ಕುಡಿಯಬೇಕು. ಕುಡಿದ ೩೦ ನಿಮಿಷಗಳ ನಂತರ ಆಹಾರ ಸೇವಿಸಬೇಕು.

೧೬. **ತುಂಬೆ ಗಿಡ:** ತಲೆನೋವು ಅಥವಾ ಅರ್ಧ ತಲೆನೋವು ಬಂದರೆ ಈ ಗಿಡದ ಸೊಪ್ಪಿಗೆ ಸ್ವಲ್ಪ ನೀರು ಸೇರಿಸಿ ಕೈಯಲ್ಲಿ ಉಜ್ಜಿ ಒಂದೆರಡು ಹನಿ ರಸವನ್ನು ಮೂಗಿಗೆ ಹಿಂಡಬೇಕು.ಇದರ ಹೂವನ್ನು ಜೇನುತುಪ್ಪದಲ್ಲಿ ಅರೆದು ಮಕ್ಕಳಿಗೆ ತಿನ್ನಿಸಿದರೆ ನೆಗಡಿಯಿಂದ ಬರುವ ಕೆಮ್ಮು ಗುಣವಾಗುತ್ತದೆ.

೧೭. **ದೊಡ್ಡಗರಿಕೆ ಮರದ ಎಲೆ:** ಕಾಮಾಲೆ ರೋಗಕ್ಕೆ ಈ ಗಿಡದ ಬೇರನ್ನು ಅರೆದು ಹಾಲು ಅಥವಾ ಮೊಸರಿನಲ್ಲಿ ಕಲೆಸಿ ಕುಡಿಸಬೇಕು. ಔಷಧಿ ಕುಡಿಸಿದ ನಂತರ ನೀರು ಸೇರಿಸದೆ ಹಸಿಹಾಲನ್ನು ಮೂರು ಹೊತ್ತು ಕುಡಿಸಬೇಕು.

೧೮. **ಬಸಳೆ ಸೊಪ್ಪು:** ಉಷ್ಣತೆಯಿಂದ ಉಂಟಾಗುವ ಬಾಯಿ ಹುಣ್ಣಿಗೆ ಈ ಬಳ್ಳಿಯ ಸೊಪ್ಪನ್ನು ಬೇಯಿಸಿ ತಿನ್ನಬೇಕು. ಹಸು, ಎಮ್ಮೆಗಳಿಗೆ ಗಾಯವಾಗಿ ಅದರಲ್ಲಿ ಹುಳುಗಳು ಕಾಣಿಸಿಕೊಂಡರೆ ಈ ಬಳ್ಳಿಯ ಬೇರನ್ನು ತೊಳೆದು ಅರೆದು ಲೇಪಿಸಬೇಕು.

೧೯. ತುಳಸಿ ಎಲೆ: ತುಳಸಿ ಎಲೆಯ ರಸವನ್ನು ಜೇನುತುಪ್ಪದೊಂದಿಗೆ ಸೇವಿಸುವುದರಿಂದ ಕೆಮ್ಮು ನಿವಾರಣೆಯಾಗುತ್ತದೆ. ತುಳಸಿಯ ಎಲೆಯನ್ನು ಉಪ್ಪಿನೊಂದಿಗೆ ಜಜ್ಜಿ ರಸ ಹಚ್ಚುವುದರಿಂದ ತುರಿಕೆ, ಕಜ್ಜಿ ಗುಣವಾಗುವುದು.

೨೦. ಎಕ್ಕದ ಗಿಡ: ಈ ಗಿಡದ ಹಾಲಿಗೆ ಸಮಪ್ರಮಾಣದಲ್ಲಿ ಅರಿಶಿನ ಪುಡಿಯನ್ನು ಬೆರೆಸಿ ಇಸಬು ಆದ ಜಾಗಕ್ಕೆ ಲೇಪಿಸಿದರೆ ಅದು ಕಾಯಿಲೆಯ ಮೂಲಕ್ಕೆ ತಲುಪಿ ಅದು ಇನ್ನಿಲ್ಲದಂತೆ ಗುಣಪಡಿಸುತ್ತದೆ.

ಜೇನುಕುರುಬರ ವೈದ್ಯಪದ್ಧತಿ: ಜೇನುಕುರುಬರ ವಕ್ತೃ ರಾಜಪ್ಪ(ವೈದ್ಯ) ಅವರು ಹೇಳುವಂತೆ ಕಣಿಶಾಸ್ತ್ರ, ಭೀತಿ, ಗಾಳಿ ಹಿಡಿದುಕೊಂಡರೆ ಪರಿಹಾರ ಮಾಡುತ್ತಾರೆ. ಮಾಟದಿಂದ ಕಾಲು ಊತ ಕಾಣಿಸಿ ಕೊಂಡಿದ್ದರೆ ಅದಕ್ಕೆ ಪರಿಹಾರ ಮಾಡಿಕೊಡುತ್ತಾರೆ. ಹಾವು ಕಡಿದಿದ್ದರೆ ಔಷಧಿಯನ್ನು ಕೊಡುತ್ತಾರೆ. ಹೊಟ್ಟೆನೋವಿಗೂ ಆಯುರ್ವೇದದ ಔಷಧಿಯನ್ನು ಕೊಡುತ್ತಾರೆ. ಹಾವು ಕಡಿದಂತಹ ಮನುಷ್ಯನನ್ನು ಉಳಿಸಲು ೧೦೧ ಮಂತ್ರವನ್ನು ಹೇಳಬೇಕು. ಇದಕ್ಕೆ ಬೇಕಾದಂತಹ ಗಿಡಮೂಲಿಕೆಯನ್ನು ಕಾಡಿನಿಂದ ತಂದು ಇಟ್ಟುಕೊಂಡಿರುತ್ತಾರೆ. ಮಂತ್ರ ಹೇಳುವಾಗ ಒಂದು ಮಂತ್ರವನ್ನು ಮರೆತರೆ ಅಥವಾ ತಪ್ಪಿದರೆ ವಿಷವೇರುತ್ತದೆ. ಕೈ, ಕಾಲು, ಕುತ್ತಿಗೆಯು ಉಳುಕಿದರೆ ಅದನ್ನು ಆಯುರ್ವೇದ ಔಷಧಿಯ ಮೂಲಕ ಸರಿಪಡಿಸುತ್ತಾರೆ. ಇವರು ಸಿದ್ಧಪಡಿಸಿದ ಆಯುರ್ವೇದ ಔಷಧಿಯನ್ನು ಹೆಚ್ಚಾಗಿ ಮನುಷ್ಯರ ಕಾಯಿಲೆಯನ್ನು ಗುಣಪಡಿಸುವುದಕ್ಕೆ ಬಳಸುತ್ತಾರೆ. ಕಡಿಮೆ ಪ್ರಮಾಣದಲ್ಲಿ ಪ್ರಾಣಿಗಳಿಗೂ ಚಿಕಿತ್ಸೆಯನ್ನು ನೀಡುತ್ತಾರೆ. ಇವರು ಸ್ಥಳೀಯವಾಗಿ ಸಿಗುವ ಮತ್ತು ಕೆಲವೊಂದು ಆಯುರ್ವೇದದ ಔಷಧಗಳನ್ನು ಕಾಡಿನಿಂದ ತಂದು ಸಿದ್ಧಗೊಳಿಸುತ್ತಾರೆ. ಈ ಆಯುರ್ವೇದ ಔಷಧಿಗೆ ಬೇಕಾದಂತಹ ಗಿಡಮೂಲಿಕೆಗಳನ್ನು ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಲ್ಲಿ ತಂದು ಔಷಧಿಯನ್ನಾಗಿ ಸಿದ್ಧಪಡಿಸುತ್ತಾರೆ. ಇನ್ನಾವುದೇ ದಿನಗಳಲ್ಲಿ ಈ ಗಿಡಮೂಲಿಕೆಗಳನ್ನು ತಂದು ಔಷಧಿಯನ್ನಾಗಿ ಮಾಡಿದರೆ ಅದರಲ್ಲಿ ರೋಗವನ್ನು ಗುಣಪಡಿಸುವ ಶಕ್ತಿಯಿರುವುದಿಲ್ಲ. ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನದಲ್ಲಿ ಸಂಗ್ರಹಿಸಿದ ಗಿಡಮೂಲಿಕೆಗಳನ್ನು ಔಷಧಿಯನ್ನಾಗಿ ಮಾಡಿ ಅದನ್ನು ಒಂದು ವರ್ಷದವರೆಗೂ ಶಕ್ತಿ ಇರುವಂತೆ ಕಾಪಾಡುತ್ತಾರೆ. ಇವರು ವರ್ಷಕ್ಕೆ ಮೂರು ಅಥವಾ ನಾಲ್ಕು ಬಾರಿ ಕಾಡಿಗೆ ಹೋಗಿ ಈ ಔಷಧಿಯ ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಾರೆ. ಈ ಗಿಡಮೂಲಿಕೆಗಳನ್ನು ಸಂಗ್ರಹಿಸಲು ಇವರು ಒಬ್ಬರೇ ಹೋಗುತ್ತಾರೆ. ಏಕೆಂದರೆ ಇವರು ತರುವ ಗಿಡಮೂಲಿಕೆ ವಸ್ತುಗಳು ಬೇರೊಬ್ಬರಿಗೆ ತಿಳಿದರೆ ಅದರ ಶಕ್ತಿ ಕುಂದುತ್ತದೆ ಎಂಬುದು ಇವರ ನಂಬಿಕೆಯಾಗಿದೆ. ಇವರು ಹಳ್ಳಿಯ ಸುತ್ತಮುತ್ತಲ ಪ್ರದೇಶ, ಕಾಡಿನಲ್ಲಿ ಹಾಗೂ ಗೋಪಾಲಸ್ವಾಮಿಯ ಕಾಡಿನಲ್ಲಿ ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಾರೆ.

ಸಕ್ಕರೆ ಕಾಯಿಲೆಗೆ ಸಂಬಂಧಿಸಿದಂತೆ: ಜೇನುಕುರುಬರ ವೈದ್ಯನು ನೀಡಿದ ಆಯುರ್ವೇದದ ಔಷಧಿಯನ್ನು ತೆಗೆದುಕೊಂಡ ನಂತರ ಸಕ್ಕರೆ ಕಾಯಿಲೆಯ ರೋಗಿಯು ತೆಗೆದುಕೊಳ್ಳಬೇಕಾದ ಪಥ್ಯ ಆಹಾರ ಏನೆಂದರೆ ಮುದ್ದೆ, ಚಪಾತಿ, ಸಿಹಿ ತಿನ್ನುವಂತಿಲ್ಲ. ಅವರು ನೀಡಿದ ಆಯುರ್ವೇದ ಔಷಧಿಯನ್ನು ದಿನಕ್ಕೆ ಮೂರು ಬಾರಿ ತೆಗೆದುಕೊಳ್ಳಬೇಕು. ಪ್ರತಿದಿನ ಬೆಳಗ್ಗೆ ತಿಂಡಿ ಅಥವಾ ಊಟಕ್ಕೂ ಮುಂಚೆಯೇ ಆಯುರ್ವೇದ ಔಷಧಿಯನ್ನು ತೆಗೆದುಕೊಳ್ಳಬೇಕು. ನಂತರ ಮಧ್ಯಾಹ್ನ ಊಟವಾದ ಮೇಲೆ ಹಾಗೂ ರಾತ್ರಿ ಊಟವಾದ ಮೇಲೆ ಔಷಧಿಯನ್ನು ತೆಗೆದುಕೊಳ್ಳಬೇಕು.

ನಾಗರಹಾವು ಕಡಿದವರಿಗೆ: ಜೇನುಕುರುಬರ ವೈದ್ಯ ಹೇಳುವಂತೆ ಒಬ್ಬ ವ್ಯಕ್ತಿಗೆ ನಾಗರಹಾವು ಕಡಿದ ಸಂದರ್ಭದಲ್ಲಿ ಅಂತಹ ವ್ಯಕ್ತಿಯನ್ನು ಒಂದು ಗಂಟೆಯ ಅವಧಿಯೊಳಗೆ ಇವರ ಬಳಿಗೆ ಕರೆದುಕೊಂಡು ಹೋಗಬೇಕು. ಏಕೆಂದರೆ ಹಾವಿನ ವಿಷ ಆ ಒಂದು ಗಂಟೆಯ ಅವಧಿಯೊಳಗೆ ಮನುಷ್ಯನ ಇಡಿ ದೇಹದ ತುಂಬಾ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆಗ ವಿಷವೇರಿದ ವ್ಯಕ್ತಿಯು ಮೂರು ದಿನಗಳವರೆಗೆ ಬದುಕಿರುತ್ತಾನೆ. ಆ ವ್ಯಕ್ತಿಯು ಸತ್ತಿರುವುದಿಲ್ಲ. ವಿಷವು ವ್ಯಕ್ತಿಯ ನೆತ್ತಿಯ ಕೂದಲ ಬಳಿ ಪಣಿ, ಪಣಿಯಾಗಿ ಇರುತ್ತದೆ. ಆಗ ಔಷಧಿಯನ್ನು ನೀಡುತ್ತಾರೆ. ಆದರೆ ವೈದ್ಯ ರಾಜಪ್ಪ ಹೇಳುವುದೇನೆಂದರೆ ವ್ಯಕ್ತಿಯ ಪ್ರಾಣ ಹಣೆಬರಹದ ಪ್ರಕಾರ ಹಾವು ಕಚ್ಚಿ ಸಾಯಬೇಕು ಎಂದಿದ್ದರೆ ಅವರು ಔಷಧಿಯನ್ನು ನೀಡಿದರೂ ಸಹ ಆ ಔಷಧಿಯ ಶಕ್ತಿ ಮಾಯವಾಗಿ ವ್ಯಕ್ತಿಯು ಸಾವನ್ನಪ್ಪಬಹುದು. ಇಲ್ಲವೇ ಹಣೆಬರಹ ಗಟ್ಟಿಯಾಗಿದ್ದರೆ ಅವರ ಆಯುಷ್ಯ ಇನ್ನೂ ಇದ್ದರೆ ಈ ಔಷಧಿಯಿಂದ ವ್ಯಕ್ತಿಯು ಬದುಕುಳಿಯುತ್ತಾನೆ ಎಂದು ಹೇಳುತ್ತಾರೆ. ಹಾವು ಕಚ್ಚಿದ ವ್ಯಕ್ತಿಯ ಆಯುಷ್ಯ ಮುಗಿದಿದ್ದರೆ ಅಂತಹ ವ್ಯಕ್ತಿಗಳಿಗೆ ವೈದ್ಯನು ಕಾಡಿನಲ್ಲಿನ ಗಿಡಮೂಲಿಕೆಗಳನ್ನು ಮುಟ್ಟಲು ಹೋದರೆ ಗಿಡಮೂಲಿಕೆಗಳು ವೈದ್ಯನನ್ನೇ ಬೆದರಿಸುತ್ತವೆ. ವೈದ್ಯನು ಗಿಡಮೂಲಿಕೆಗಳನ್ನು ಮುಟ್ಟಲು ಅವಕಾಶವೇ ಮಾಡಿಕೊಡುವುದಿಲ್ಲ ಎಂದು ಹೇಳುತ್ತಾರೆ. ಹಾವು ಕಚ್ಚಿದಾಗ ವಿಷವು ಮೈಯಲ್ಲಾ ಹರಡಿದಂತಹ ಸಂದರ್ಭದಲ್ಲಿ ವ್ಯಕ್ತಿಯ ನೆತ್ತಿಯ ಮೇಲಿನ ಕೂದಲು ಸುರುಳಿ ಸುರುಳಿಯಾಗಿ(ಫಣಿ, ಫಣಿ)ದ್ದರೆ ವ್ಯಕ್ತಿಯ ಜೀವ ಅಲ್ಲಿದೆ ಎಂದರ್ಥ.

ಜೇನುಕುರುಬರ ವೈದ್ಯ ರಾಜಪ್ಪನವರ ಬಳಿ ಹೋದರೆ ಹಾವು ಕಚ್ಚಿದ ವ್ಯಕ್ತಿಗೆ ಕೈಯ ಔಷಧಿಯನ್ನು ನೀಡಿ, ಮಂತ್ರ ಹಾಕಿ, ವ್ಯಕ್ತಿಯಿಂದ ವಾಂತಿ ಮಾಡಿಸುವ ಮುಖಾಂತರ ಹಾವಿನ ವಿಷವನ್ನು ದೇಹದಿಂದ ಹೊರ ಹಾಕಿಸುತ್ತಾರೆ. ಇವರು ಈ ಚಿಕಿತ್ಸೆಯನ್ನು ಕೇವಲ ಅರ್ಧಗಂಟೆಯಲ್ಲಿಯೇ ನೀಡಿ ವ್ಯಕ್ತಿಯನ್ನು ಬದುಕಿಸುತ್ತೇನೆ ಎಂದು ಹೇಳುತ್ತಾರೆ. ಇವರು ಗಿಡಮೂಲಿಕೆಯನ್ನು ಹಾವು ಕಚ್ಚಿರುವ ವ್ಯಕ್ತಿಯ ಬಾಯಲ್ಲಿ ಜಗಿಸುವುದರ ಮುಖಾಂತರ

ವಿಷವನ್ನು ವ್ಯಕ್ತಿಯ ಬಾಯಿಯಿಂದ ಹೊರ ಹಾಕಿಸುತ್ತಾರೆ. ಈ ವ್ಯಕ್ತಿಯು ಜಗಿದು ಉಗಿದಂತಹ ಗಿಡಮೂಲಿಕೆಯನ್ನು ಬೇರೆ ಯಾವುದಾದರೂ ಪ್ರಾಣಿ ತಿಂದರೂ ಅದು ಸಹ ಸಾವನ್ನಪ್ಪುತ್ತದೆ.

ಇವರು ಔಷಧಿ ನೀಡುವುದು, ಮಂತ್ರ ಹಾಕುವುದು, ಮಾಟ ತೆಗೆಯುವುದು ಭಾನುವಾರ, ಮಂಗಳವಾರ ಹಾಗೂ ಉಳಿದ ದಿನಗಳಲ್ಲಿ ಮಾಡುತ್ತಾರೆ. ಆದರೆ ಶನಿವಾರ ಮತ್ತು ಬುಧವಾರ ಅವರ ದೇವರ ವಾರವಾಗಿರುವ ಕಾರಣ ಯಾವುದೇ ಕೆಲಸ ಕಾರ್ಯಗಳನ್ನು ಅವರು ಅಂದು ಮಾಡುವುದಿಲ್ಲ. ಶನೀಶ್ವರ ಮತ್ತು ಬೈರೇಶ್ವರ ಇವರ ದೇವರುಗಳು. ಇವರನ್ನು ಕಾಣಲು ಬೆಂಗಳೂರು, ಮಂಡ್ಯ, ಮೈಸೂರು, ಚನ್ನಪಟ್ಟಣ, ಕೇರಳ, ದೆಹಲಿ ಹಾಗೂ ದುಬೈನಿಂದ ಜನರು ಬಂದಿದ್ದಾರೆ ಎಂದು ಹೇಳುತ್ತಾರೆ.

ಚಿಕ್ಕಮಕ್ಕಳಲ್ಲಿ ಕಂಡುಬರುವ ರೋಗಗಳು: ಹೊಟ್ಟೆನೋವು, ದಡಾರ, ಪೈತಗಾ(ಮೈ ತುಂಬಾ ಗಂಟು ಗಂಟು ಬೀಳುವ ರೋಗ) ಇವು ಚಿಕ್ಕಮಕ್ಕಳಲ್ಲಿ ಕಂಡುಬರುವ ಕಾಯಿಲೆಗಳು.

ಹೊಟ್ಟೆನೋವಿಗೆ: ಗಿಡಮೂಲಿಕೆಯ ಬೇರು ಹರಿದು ಬಿಸಿನೀರಲ್ಲಿ ಕುಡಿಸಿದಾಗ ಅರ್ಧಗಂಟೆಯಲ್ಲಿ ಹೊಟ್ಟೆನೋವು ಗುಣಮುಖವಾಗುತ್ತದೆ. ಇದಕ್ಕೂ ಕಾಯಿಲೆ ಗುಣಮುಖವಾಗಲಿಲ್ಲವೆಂದರೆ ಹಸಿರು ಔಷಧಿ ಅಂದರೆ, ಗಿಡಮೂಲಿಕೆಯನ್ನು ತಂದು ಹರಿದು ರಸವನ್ನು ಹಿಂಡಿ ಮಗುವಿಗೆ ಕುಡಿಸುತ್ತಾರೆ.

ದಮ್ಮಿಗೂ ಸಹ ಕೈ ಔಷಧಿಯನ್ನು ಕೊಡುತ್ತಾರೆ. ಇದನ್ನು ದಿನಕ್ಕೆ ಮೂರು ಬಾರಿ ಅಂದರೆ, ಬೆಳಗ್ಗೆ, ಮಧ್ಯಾಹ್ನ, ಸಂಜೆ ಕೊಡಬೇಕು.

ದಡಾರ ಮತ್ತು ಪೈತಗಾ ಇವೆರಡಕ್ಕೂ ಹಸಿರು ಔಷಧಿಯನ್ನು ಮೈಗೆ ಹಚ್ಚುವುದು ಮತ್ತು ಹೊಟ್ಟೆಗೆ ರಸವನ್ನು ನೀಡುವುದು.

ಕೈಗೆ ಅಥವಾ ಕಾಲಿಗೆ ಗಾಯವಾದರೆ ತೆಂಗಿನಕಾಯಿಯ ಕಂಟವನ್ನು ಹಾಗೂ ತೆಂಗಿನ ಎಣ್ಣೆಯನ್ನು ಹಚ್ಚುತ್ತಾರೆ. ತೆಂಗಿನಕಾಯಿಯ ಕಂಟವನ್ನು ಸುಟ್ಟು ಅದನ್ನು ತೆಂಗಿನ ಎಣ್ಣೆಯಲ್ಲಿ ಕಲಸಿ ಗಾಯಕ್ಕೆ ಹಚ್ಚುತ್ತಾರೆ. ಅಥವಾ ಕೊಬ್ಬರಿ ಎಣ್ಣೆಯಲ್ಲಿ ತೆಂಗಿನ ಕಾಯಿಯ ಕಂಟವನ್ನು ತೇಯ್ದು ಗಾಯಕ್ಕೆ ಹಚ್ಚುತ್ತಾರೆ.

ಜ್ವರಕ್ಕೆ ಮತ್ತು ತಲೆನೋವಿಗೆ 'ಮೆಣಸಿನ ಅಂಬು'(ಕಾಡು ಮೆಣಸಿನ ಬೇರು) ಬಳಸುತ್ತಾರೆ. ಮಕ್ಕಳಿಗೆ ಜ್ವರ ಬಂದಾಗ ಮನೆಯಲ್ಲಿ ೭ ದಿನಗಳ ಕಾಲ ಮೆಣಸಿನಕಾಯಿ ಅಥವಾ ಮೀನನ್ನು ಸುಡುವಂತಿಲ್ಲ. ೭ನೇ ದಿನಕ್ಕೆ ಕರಿಬೇವು ಮತ್ತು ಬೇವಿನ ಸೊಪ್ಪನ್ನು

ನೀರಲ್ಲಿ ನೆನೆ ಹಾಕಿ ಮಗುವಿಗೆ ಸ್ನಾನ ಮಾಡಿಸಿ ಮನೆಯನ್ನು ಶುಚಿಗೊಳಿಸಿ ಪೂಜೆ ಮಾಡುತ್ತಾರೆ. ಹಾಗೆ ಮಾಡಿದರೆ ಮಗುವಿಗೆ ಬಂದಂತಹ ಕಾಯಿಲೆ ವಾಸಿಯಾಗುತ್ತದೆ.

ಗರ್ಭಿಣಿಯರಿಗೆ ಬೆಳ್ಳುಳ್ಳಿ ಮತ್ತು ಮೆಣಸಿನ ಆಹಾರವನ್ನು ಕೊಡುತ್ತಿದ್ದರೆ ಯಾವುದೇ ಕಾಯಿಲೆಗಳು ಬರುವುದಿಲ್ಲ.

ಮಕ್ಕಳಿಗೆ ಏನಾದರೂ ಭಯಬೀತಿ ಆವರಿಸಿದರೆ, ಕಾಯಿಲೆಗಳು ಬಂದರೆ ಮಂತ್ರದ ಮೂಲಕ ಗುಣಪಡಿಸುತ್ತಾರೆ. ಮಂತ್ರಕ್ಕೆ ನಿಂಬೆಹಣ್ಣು, ಬೂದಿಯಿಂದ, ಕಕ್ಕೆ ಸೊಪ್ಪು, ಸೌದೆಯ ಮಸಿಯಿಂದ ಮಂತ್ರವನ್ನು ಪಠಿಸಿ ಇಳೆಯನ್ನು ತೆಗೆದು ಗುಣಪಡಿಸುತ್ತಾರೆ.

ಕಾಡುಕುರುಬರ ಉಡುಗೆ-ತೊಡುಗೆ: ಕಾಡುಕುರುಬರಲ್ಲಿ ಗಂಡಸರು ಶರ್ಟ್ ಮತ್ತು ಲುಂಗಿಯನ್ನು ಧರಿಸುತ್ತಾರೆ. ಹಾಗೆಯೇ ಹೆಣ್ಣಮಕ್ಕಳು ಎದೆಭಾಗವು ಸೇರಿದಂತೆ ಸೀರೆಯನ್ನು ಸುತ್ತುವುದು ಇಂದಿಗೂ ರೂಢಿಯಲ್ಲಿದೆ. ಕಾಡುಕುರುಬ ಹಿರಿಯ ಮಹಿಳೆಯರು ಈಗಲೂ ಸಹ ಕುಪ್ಪಸವನ್ನು ತೊಡುವುದಿಲ್ಲ. ಕಾರಣ ಅವರ ಹಿರಿಯರು ಹಿಂದೆ ಇದೆ ರೀತಿಯಾಗಿ ಉಟ್ಟುಕೊಳ್ಳುತ್ತಿದ್ದರು. ಆದರಿಂದ ನಾವು ಈಗಲು ಸಹ ಹಿಂದಿನವರಂತೆ ಸೀರೆಯನ್ನಷ್ಟೆ ಉಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇಂದು ಮುಂದುವರಿದ ನಾಗರಿಕ ಸಮಾಜದ ಪರಿಸರ, ಪಟ್ಟಣದ ಸಂಪರ್ಕ, ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಸೀರೆ, ಕುಪ್ಪಸ, ನೈಟಿ, ಸರಗಳು, ಓಲೆ, ಮೂಗುತಿ, ಲುಂಗಿಗಳು ಈ ಬುಡಕಟ್ಟು ಸಮುದಾಯಗಳನ್ನು ಪ್ರವೇಶಿಸಿವೆ. ಅಲ್ಲದೇ ಹುಡುಗರು ಟೀ ಶರ್ಟುಗಳನ್ನು, ಜೀನ್ಸ್ ಪ್ಯಾಂಟ್‌ಗಳನ್ನು, ಬಣ್ಣಬಣ್ಣದ ಉಡುಪುಗಳು ಇವರ ದೇಹವನ್ನು ಅಲಂಕರಿಸುತ್ತಿವೆ. ಇಂದು ಕಾಡುಕುರುಬ ಹೆಣ್ಣುಮಕ್ಕಳು ರೇಷ್ಮೆ ಸೀರೆ ಹಾಗೂ ಬಂಗಾರದ ಒಡವೆಗಳನ್ನು ಕೂಡ ಕೆಲವರು ಧರಿಸುತ್ತಿದ್ದಾರೆ.

ಜೇನುಕುರುಬರ ಉಡುಗೆ-ತೊಡುಗೆ: ಜೇನುಕುರುಬರ ಉಡುಪಿನ ಬಗ್ಗೆ ಹೇಳುವುದಾದರೆ ಗಂಡಸರು ಲುಂಗಿ ಮತ್ತು ಮೇಲಂಗಿಯನ್ನು ಧರಿಸುತ್ತಾರೆ. ಹೆಣ್ಣುಮಕ್ಕಳು ಸೀರೆ ಮತ್ತು ಕುಪ್ಪಸವನ್ನು ತೊಡುತ್ತಾರೆ. ಹಾಗೆಯೇ ಗಂಡುಮಕ್ಕಳು ಸಹ ಬಣ್ಣಬಣ್ಣದ ಶರ್ಟ್, ಟೀ ಶರ್ಟುಗಳು, ಜೀನ್ಸ್ ಪ್ಯಾಂಟ್‌ಗಳನ್ನು ಧರಿಸುತ್ತಿದ್ದಾರೆ. ಅಲ್ಲದೇ ಹೆಣ್ಣುಮಕ್ಕಳು ಸಹ ನೈಟಿ-ಚೂಡಿದಾರ್‌ಗಳನ್ನು ತೊಡುವುದನ್ನು ಕಾಣಬಹುದು. ಇವರು ಸಹ ಕಾಡುಕುರುಬರಂತೆ ನಾಗರಿಕ ಸಮಾಜದ ಪರಿಸರದ ಪ್ರಭಾವಕ್ಕೆ ಒಳಗಾಗಿ ಇವರಲ್ಲೂ ಸಹ ಉಡುಗೆ-ತೊಡುಗೆಗಳಲ್ಲಿ ಇಂದು ಬದಲಾವಣೆಯಾಗಿರುವುದನ್ನು ಕಾಣಬಹುದು.

ಕಾಡುಕುರುಬರ ಪಾರಂಪರಿಕ ಗ್ರಹಿಕೆ: ಕೆಂಪನಾಡಿಯ ಹಿರಿಯ ವಕ್ತೃವಿನ ಪ್ರಕಾರ ಕಾಡಿನಲ್ಲಿ ಹೋಗುವಾಗ ಪ್ರಾಣಿಗಳು ಎದುರಾದರೆ ಅವುಗಳಿಗೆ ತೊಂದರೆ ಕೊಡದೆ ನಮ್ಮ ಪಾಡಿಗೆ ನಾವು ಇರಬೇಕು. ಅವುಗಳ ಹತ್ತಿರ ಹೋಗುವಂತಹ ಕೆಲಸಕ್ಕೆ ಕೈ ಹಾಕಬಾರದು.

ಕಾಡಿನಲ್ಲಿ ಹೋಗುವಾಗ ಯಾರೊಡನೆಯು ಮಾತನಾಡದೆ ಮೆಲ್ಲಗೆ ಹೋಗಬೇಕು. ಅವುಗಳಿಗೆ ತೊಂದರೆ ಮಾಡಿದರೆ ಅವು ಮನುಷ್ಯನ ಮೇಲೆ ತಿರುಗಿಬೀಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಪ್ರಾಣಿಗಳು ದಿಢೀರ್ ದಾಳಿ ಮಾಡುವ ಸಂಭವವಿದೆ ಎಂದು ಅನಿಸಿದಾಗ ಮುಂದೆ ಹೋಗುವವರು ಬುದ್ಧಿವಂತಿಕೆಯಿಂದ ಮುಂದೆ ಆಗಬಹುದಾದ ಅಥವಾ ಎದುರಾಗಬಹುದಾದ ಅವಘಡಗಳ ಬಗ್ಗೆ ಹಿಂದಿರುವವರಿಗೆ ಸುಳಿವು ನೀಡುತ್ತಾ ಮುಂದೆ ಸಾಗಬೇಕು. ಕಾಡಿನಲ್ಲಿ ಹೋಗುವಾಗ ಮೊದಲು ಕಾಡಿನ ಬಗ್ಗೆ ತಿಳಿದಿರುವಂತಹ ಚಾಕಚಕ್ಯತೆಯಿಂದ ಇರುವ ವ್ಯಕ್ತಿಯು ಮೊದಲು ಮುಂದೆ ಹೋಗಬೇಕು. ಆ ನಂತರ ಒಬ್ಬೊಬ್ಬರೇ ಅವನ ಹಿಂದೆ ಸ್ವಲ್ಪ ಅಂತರದಲ್ಲಿ ಸಾಗಬೇಕು. ಗುಂಪಾಗಿ ಹೋಗಬಾರದು. ಇವರೆಲ್ಲರ ಜವಾಬ್ದಾರಿಯು ಮುಂದೆ ಹೋಗುವ ವ್ಯಕ್ತಿಯದ್ದಾಗಿರುತ್ತದೆ. ಪ್ರಾಣಿಗಳಿಂದ ತೊಂದರೆಯಾಗುವ ಸಂಭವದ ಸುಳಿವು ದೊರೆತ ತಕ್ಷಣವೇ ತನ್ನ ಹಿಂದೆ ಬರುವ ವ್ಯಕ್ತಿಗಳಿಗೆ ಸೂಚನೆ ನೀಡಿ ಅವರು ತಮ್ಮ ಪ್ರಾಣರಕ್ಷಣೆ ಮಾಡಿಕೊಳ್ಳಲು ಸೂಚನೆ ನೀಡಬೇಕು. ಕಾಡಿಗೆ ಹೋಗುವವರು ಕಾಡಿನಲ್ಲಿ ಓಡುವ ಮತ್ತು ಮರವನ್ನು ಹತ್ತುವ ಸಾಮರ್ಥ್ಯವನ್ನು ಹೊಂದಿರಬೇಕು. ಆಕಸ್ಮಿಕವಾಗಿ ಪ್ರಾಣಿಗಳು ದಿಢೀರ್ ದಾಳಿ ಮಾಡಿದಾಗ ಎಲ್ಲರೂ ಒಟ್ಟಿಗೆ ಒಂದೇ ಕಡೆ ಹೋಗಬೇಕು ಎಂದು ಮೊದಲೇ ತಿಳಿಸಲಾಗುತ್ತದೆ. ಏಕೆಂದರೆ ಪ್ರಾಣಿಗಳ ದಾಳಿಯ ಸಂದರ್ಭದಲ್ಲಿ ಎಲ್ಲರೂ ದಿಕ್ಕಾಪಾಲಾಗಿ ಓಡಿ ಹೋದರೆ ಕಾಡಿನಲ್ಲಿ ದಾರಿ ತಪ್ಪುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಆದ್ದರಿಂದ ಮೊದಲೇ ಕಾಡಿಗೆ ಹೋಗುವಾಗ ಎಲ್ಲರಿಗೂ ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡಲಾಗಿರುತ್ತದೆ.

ಜೇನುಕುರುಬರ ಮಾಟ-ಮಂತ್ರ: ಜೇನುಕುರುಬರ ರಾಜಪ್ಪನವರು ಹೇಳುವಂತೆ ಅವರು ಚಂಡಿ ಚೇಷ್ಟೆ ಭೂಮಿಯಲ್ಲಿ ಮಾಟ ಮಾಡಿಸಿದ್ದರೆ, ಯಾರಾದರೂ ಎಡವಿ ಭೀತಿಗೆ ಒಳಗಾಗಿದ್ದರೆ, ಹೆಣವನ್ನು ನೋಡಿ ಭಯಬೀತರಾಗಿದ್ದರೆ, ಯಾರಿಗಾದರೂ ದೆವ್ವ ಹಿಡಿದಿದ್ದರೆ ಈ ಎಲ್ಲಾ ಸಮಸ್ಯೆಗಳಿಗೆ ಮಾಟ-ಮಂತ್ರದ ಮೂಲಕ ಗುಣಪಡಿಸುತ್ತಾರೆ.

ಚಂಡಿಚೇಷ್ಟೆ: ಮಕ್ಕಳು ಬಿದ್ದಾಗ ಮತ್ತು ಎಡವಿದಾಗ ಚಂಡಿಚೇಷ್ಟೆ ಹಿಡಿಯುತ್ತದೆ. ಒಂದರಿಂದ ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಈ ಚಂಡಿಚೇಷ್ಟೆಯು ಹಿಡಿಯುತ್ತದೆ. ಈ ರೀತಿಯ ಚಂಡಿಚೇಷ್ಟೆಯಿರುವ ಮಕ್ಕಳನ್ನು ಗುಣಪಡಿಸಲು ಮೊದಲು ಅವರ ರಾಶಿಫಲವನ್ನು ನೋಡುತ್ತಾರೆ. ಅವರ ಹೆಸರು, ಕುಲ, ಗೋತ್ರ, ಹಾಗೂ ಅವರ ಮನೆಯ ದೇವರನ್ನು ನೋಡುತ್ತಾರೆ. ನಂತರ ಅಂಜನವನ್ನು ವೀಳ್ಯದೆಲೆಯಲ್ಲಿ ಹಾಕಿ ನೋಡುತ್ತಾರೆ. ಅದರಲ್ಲಿ ಮಕ್ಕಳಿಗೆ ಆಗಿರುವ ತೊಂದರೆಯ ಬಗ್ಗೆ ಯಾರಾದರೂ ಕಳ್ಳತನ ಮಾಡಿದ್ದರೆ ಮುಂತಾದವುಗಳನ್ನು ಈ ಅಂಜನ ಹಾಕುವುದರ ಮುಖಾಂತರ ತಿಳಿದುಕೊಳ್ಳುತ್ತಾರೆ. ಆಗ

ಆ ಅಂಜನದಲ್ಲಿ ಕಂಡುಬರುವ ಸಮಸ್ಯೆಯನ್ನು ಅವಲೋಕಿಸಿ ತಾಯಿತವನ್ನು ಹಾಕುವವರಿಗೆ ತಾಯಿತವನ್ನು ಹಾಕುತ್ತಾರೆ. ದೋಷ ಕಳೆಯುವುದಿದ್ದರೆ ಮಂತ್ರವನ್ನು ಹಾಕಿ ದೇವರಿಗೆ ಬಲಿಯನ್ನು ನೀಡುತ್ತಾರೆ. ದೇವರಿಗೆ ಕೋಳಿಯನ್ನು ಬಲಿ ಕೊಡುತ್ತಾರೆ. ಈ ಪೂಜೆಗೆ ಕುಂಕುಮ, ಅರಿಶಿನ, ಬಾಳೆಹಣ್ಣು, ಎಲೆ, ಅಡಿಕೆ, ಊದಿನಕಡ್ಡಿ, ಮಣ್ಣಿನ ಗೊಂಬೆಯನ್ನು ಹೊಳೆಯ ದಡದಲ್ಲಿಯೇ ಇಟ್ಟು ಪೂಜೆ ಮಾಡಿಸುತ್ತಾರೆ. ಕೋಳಿಯ ರಕ್ತವನ್ನು ಮಣ್ಣಿನ ಗೊಂಬೆಗೆ ಹಾಗೂ ಬಿಳಿ ಎಕ್ಕದ ಗಿಡದಿಂದ ತೆಗೆದಂತಹ ಬಿಲ್ಮಕ್ಕೆ ರಾವನ್ನು ಕೊಡುತ್ತಾರೆ. ಈ ರೀತಿಯಾಗಿ ಪೂಜೆಯನ್ನು ಮಾಡುವ ಮೂಲಕ ಜನರ ಸಮಸ್ಯೆಯನ್ನು ಬಗೆಹರಿಸುತ್ತಾರೆ. ಈ ಪೂಜೆಯನ್ನು ಒಂದೇ ದಿನದಲ್ಲಿ ಮಾಡುತ್ತಾರೆ. ನಂತರ ತಾಯಿತವನ್ನು ತಾಮ್ರದ ತಗಡಿನ ಮೇಲೆ ಮಂತ್ರವನ್ನು ಬರೆದು ಮಗುವಿಗೆ ಕಟ್ಟುತ್ತಾರೆ. ಅದರ ಜೊತೆಗೆ ಗಿಡಮೂಲಿಕೆಗಳನ್ನು ಸಹ ತಾಯಿತದ ಒಳಗೆ ಹಾಕುತ್ತಾರೆ. ಆಗ ಮಕ್ಕಳಿಗೆ ಬಂದಂತಹ ಚಂಡಿಚೇಷ್ಟೆಯ ಸಮಸ್ಯೆ ಪರಿಹಾರವಾಗುತ್ತದೆ.

ದೊಡ್ಡವರು ರಾತ್ರಿ ವೇಳೆಯಲ್ಲಿ ಬಿದ್ದು, ಎಡವಿ ಭೀತಿಯಾಗಿದ್ದರೆ ಅಥವಾ ಹೆಣವನ್ನು ನೋಡಿ ಭಯ ಭೀತರಾಗಿದ್ದರೆ ಇಂಥವರಿಗೆ ಹೊಳೆಯಲ್ಲಿ ಮಣ್ಣಿನ ಗೊಂಬೆಯನ್ನು ಮಾಡಿ ಅದಕ್ಕೆ ಅರಿಶಿನ, ಕುಂಕುಮವನ್ನು ಹಾಕಿ, ಬಾಳೆಹಣ್ಣು, ಕಾಯಿ, ಗಂಧದ ಕಡ್ಡಿಯನ್ನು ಇಟ್ಟು ಪೂಜೆ ಮಾಡಿ ಕೋಳಿಯನ್ನು ಬಲಿ ಕೊಟ್ಟು ಅಲ್ಲಿಯೇ ಅವರಲ್ಲಿರುವ ಭೀತಿಯನ್ನು ಹೋಗಲಾಡಿಸುತ್ತಾರೆ. ಮಣ್ಣಿನಿಂದ ಮಾಡಿದ ಗೊಂಬೆಗೆ ಹಾಗೂ ಬಲಿ ಎಕ್ಕದ ಬಿಲ್ಮಾಕ್ಕೆ ಕೋಳಿಯ ರಕ್ತವನ್ನು ಅವುಗಳಿಗೆ ನೈವೇದ್ಯ ಮಾಡುವುದರ ಮುಖಾಂತರ ಭಯ ಭೀತಿಯನ್ನು ಹೋಗಲಾಡಿಸುತ್ತಾರೆ.

ಭೂಮಿಯಲ್ಲಿ ಮಾಟ ಮಾಡಿಸಿದ್ದರೆ: ಯಾರಾದರೂ ವ್ಯವಸಾಯ ಭೂಮಿಯಲ್ಲಿ ಮಾಟ ಮಾಡಿಸಿ ಬೆಳೆ ಬರದಂತೆ ಹಾಗೂ ಬೆಳೆದಂತಹ ಬೆಳೆಯ ಕೈಗೆ ಸಿಗದಂತೆ ಮಾಟ ಮಾಡಿಸಿದ್ದರೆ ಅದನ್ನು ಅಂಜನವನ್ನು ಹಾಕಿ ಇಂತಹ ಜಾಗದಲ್ಲಿಯೇ ಮಾಟವನ್ನು ಮಾಡಿ ಮಾಟದ ವಸ್ತುಗಳನ್ನು ಇಂಥಲ್ಲಿಯೇ ಹೂಳಲಾಗಿದೆ ಎಂಬುದನ್ನು ಕಂಡುಹಿಡಿಯುತ್ತಾರೆ. ಅಂಜನ ಹಾಕಿ ನೋಡಿದ ಮೇಲೆ ಮಾಟವನ್ನು ತೆಗೆಯಲು ಆ ಜಮೀನಿನ ನಾಲ್ಕು ಮೂಲೆಯ ಕಲ್ಲನ್ನು ತರಿಸಿ ನೋಡುತ್ತಾರೆ. ನಂತರ ನಿಂಬೆಹಣ್ಣು, ಕಾಯಿ, ಗಿರಿಉಂಡೆ, ಗಂಧದಕಡ್ಡಿ, ಅರಿಶಿನ, ಕುಂಕುಮ, ಕೋಳಿಯನ್ನು ಬಲಿ ಕೊಟ್ಟು ಪೂಜೆಯನ್ನು ಮಾಡುತ್ತಾರೆ. ಈ ಪೂಜೆಯನ್ನು ರಾಜಪ್ಪನವರು ತಮ್ಮ ಮನೆಯಲ್ಲಿಯೇ ಮಾಡಿ ಪರಿಹಾರ ಮಾಡಿಕೊಡುತ್ತಾರೆ.

ಚಂಡಿಚೇಷ್ಟೆಯನ್ನು ಪರಿಹಾರ ಮಾಡಲು ಬಳಸುವ ಪೂಜಾಸಾಮಗ್ರಿಗಳು: ಹೊಳೆಯ ದಡದಲ್ಲಿನ ಎರೆ ಮಣ್ಣಿನಿಂದ ಗೊಂಬೆಯನ್ನು ಮಾಡಲಾಗುತ್ತದೆ. ನಂತರ ಅದಕ್ಕೆ ಅರಿಶಿನ ಮತ್ತು ಕುಂಕುಮದ ರಂಗನ್ನು ಹಾಕಿ ಹೂವನ್ನು ಹಾಕುತ್ತಾರೆ. ನಂತರ ಬಾಳೆಹಣ್ಣು, ನಿಂಬೆಹಣ್ಣು, ಕಾಯಿ, ಮೊಟ್ಟೆ, ಎಲೆ ಅಡಿಕೆ, ಕರ್ಪೂರ, ಗಂಧದ ಕಡ್ಡಿ ಹಚ್ಚಿ ಪೂಜೆಯನ್ನು ಮಾಡುತ್ತಾರೆ. ಕೆಲವರಿಗೆ ಅನ್ನ ಶಾಂತಿಯನ್ನು ಮಾಡಲು ಕೆಂಪು, ಕಪ್ಪು, ನೀಲಿ ಇವುಗಳಲ್ಲಿ ಯಾವುದಾದರೂ ಒಂದು ಬಣ್ಣದ ಬಟ್ಟೆಯನ್ನು ಗೊಂಬೆಗೆ ಕಟ್ಟುತ್ತಾರೆ. ಸಮಸ್ಯೆಗೆ ಒಳಗಾದ ವ್ಯಕ್ತಿಯು ಈ ಪೂಜೆಯ ಸಮಯದಲ್ಲಿ ಇರಬೇಕು.

ಜೇನುಕುರುಬರ ರಾಜಪ್ಪನವರು ಪೂಜಾ ಸಮಯದಲ್ಲಿ ಬಳಸುವ ಬಿಳಿ ಎಕ್ಕದ ಗಿಡದ ಬಿಲ್ಮಾವನ್ನು ಇವರು ಅಮಾವಾಸ್ಯೆಯ ದಿನದಂದು ಮಂತ್ರಶಕ್ತಿಯ ಮುಖಾಂತರ ಅದನ್ನು ಏಳಿಸುತ್ತಾರೆ ಹಾಗೂ ಅದನ್ನು ಅವರು ಸಂಗ್ರಹಿಸಿದ್ದಾರೆ. ಬಿಲ್ಮಾವನ್ನು ಅಮಾವಾಸ್ಯೆಯ ದಿನ ಎಕ್ಕದ ಗಿಡದ ಸುತ್ತಲೂ ಸಗಣಿ ನೀರನ್ನು ಹಾಕಿ ಸಾರಿಸಿ ಮಧ್ಯರಾತ್ರಿ ೧೨ ಗಂಟೆಗೆ ಪೂಜೆ ಮಾಡಿ ಆ ಬಿಲ್ಮಾವನ್ನು ಮಂತ್ರದ ಶಕ್ತಿಯಿಂದ ಹೊಡೆದಾಗ ಅದು ಮೇಲೆಳುತ್ತದೆ. ನಂತರ ಅದನ್ನು ಮನೆಗೆ ತಂದು ಪೂಜಿಸಿ ನೈವೇದ್ಯ ಮಾಡಿ ಅವರ ಬಳಿಯಲ್ಲಿಯೇ ಇಟ್ಟುಕೊಳ್ಳುತ್ತಾರೆ. ಅದನ್ನು ತೆಗೆಯುವಾಗ ಬಹಳ ಎಚ್ಚರಿಕೆಯಿಂದ ಬಿಲ್ಮವನ್ನು ತೆಗೆಯಬೇಕು. ಇಲ್ಲದಿದ್ದರೆ ಪ್ರಾಣಕ್ಕೆ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ಅದನ್ನು ಪೂಜಿಸಿ ಬಿಲ್ಮವನ್ನು ತೆಗೆಯುವಾಗ ಅವರಿಗೆ ವಿದ್ಯೆಯನ್ನು ಕಲಿಸಿದ ಗುರುಗಳನ್ನು, ದೇವರನ್ನು, ಹಿರಿಯರನ್ನು ನೆನೆಯುತ್ತಾರೆ.

ಕಾಡುಕುರುಬ ಮತ್ತು ಜೇನುಕುರುಬರ ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು

'ಪರಿವರ್ತನೆಯು ಪ್ರಕೃತಿಯ ನಿಯಮಗಳಲ್ಲೊಂದು. ಜಗತ್ತು ಮತ್ತು ಜಗತ್ತಿನ ಸಕಲ ವಿದ್ಯಮಾನಗಳೂ ಈ ನಿಯಮಕ್ಕೆ ಒಳಪಟ್ಟಿವೆ. ಸಮಾಜ ಹಾಗೂ ಸಾಮಾಜಿಕ ಜೀವನಗಳು ಸಹ ಈ ನಿಯಮದ ವ್ಯಾಪ್ತಿಗೆ ಒಳಪಟ್ಟಿವೆ. ಆ ಪರಿವರ್ತನೆಯ ವೇಗ. ಅದು ಹಿಡಿಯುವ ದಿಕ್ಕು ಮುಂತಾದವು ಕಾಲದಿಂದ ಕಾಲಕ್ಕೆ ಮಾರ್ಪಡಬಹುದಾದರೂ ಈ ಪ್ರಕ್ರಿಯೆ ಸ್ಥಗಿತಗೊಳ್ಳುವುದಿಲ್ಲ'.[೨] ಅಂತೆಯೇ ಮಾನವನ ಜೀವನವು ಸಹಜ ಪೂರಕವಾದ ಈ ನಿಯಮಕ್ಕೆ ಬದ್ಧವಾಗಿದೆ. 'ಸಾಮಾನ್ಯವಾಗಿ ಬದಲಾವಣೆ, ಭೌತಿಕ, ಜೈವಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗಿರುತ್ತದೆ'.[೩] ಭೂಕಂಪ, ಪ್ರವಾಹ, ಅತಿವೃಷ್ಟಿ, ಅನಾವೃಷ್ಟಿಗಳು ಭೌತಿಕ ಬದಲಾವಣೆಯನ್ನು ತಂದರೂ ಸಹ ಜನಸಂಖ್ಯೆ ಹೆಚ್ಚಳ, ಯುದ್ಧ, ಮುಷ್ಕರ, ಆರ್ಥಿಕತೆ, ರಾಜಕೀಯ, ಶೈಕ್ಷಣಿಕ ಮೊದಲಾದವು ವೈಜ್ಞಾನಿಕ ಬದಲಾವಣೆಗಳಾದರೆ, ಹೊರಗಿನ ಸಂಸ್ಕೃತಿಗಳ ಸಂಪರ್ಕದಿಂದ ಇಲ್ಲವೇ ಸಮಾಜ ಸುಧಾರಣೆಗಳಿಂದ ಜನರಲ್ಲಿ

ಆದರ್ಶ, ಧಾರ್ಮಿಕ ಭಾವನೆಗಳು ನೈತಿಕ ನಿಯಮಗಳು ಮೊದಲಾದವುಗಳಲ್ಲಿ ಉಂಟಾಗುವ ಪ್ರಕಿಯೆಗಳು, ಸಾಂಸ್ಕೃತಿಕ ಬದಲಾವಣೆಗಳು ಹೀಗೆ ಹಲವಾರು ಕಾರಣಗಳಿಂದ ಸಮಾಜದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು ಎಂದು ಕರೆಯಲಾಗುತ್ತದೆ.

'ಬದಲಾವಣೆ ಎಂಬ ಪದ ಇಂಗ್ಲೀಷ್ ಪದವಾದ Change ಎಂಬುದರ ಕನ್ನಡ ರೂಪಾಂತರ ಇಲ್ಲಿ Change ಎಂದರೆ ``A thing or A matter with a differentnce" ಎಂಬ ಅರ್ಥ ಕೊಡುತ್ತದೆ. ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಕಂಡುಬರುವ ಬದಲಾವಣೆಯೇ ಸಾಮಾಜಿಕ ಬದಲಾವಣೆ ಎನ್ನಬಹುದು. ಪ್ರಾಚೀನಾ ಕಾಲದಲ್ಲಿ ತೀರಾ ಸರಳವಾದ, ನಿರಾಡಂಬರ ಬುಡಕಟ್ಟಿನ ಸಮಾಜ ಅಸ್ತಿತ್ವದಲ್ಲಿತ್ತು. ಕಾಲಾಂತರದಲ್ಲಿ ಬುಡಕಟ್ಟು ಸಮಾಜವು ವಿಕಸನ ಹೊಂದಿ ಇಂದು ಅತ್ಯಂತ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಿಂದ ಕೂಡಿದ ನಾಗರಿಕ ಸಮಾಜವಾಗಿದೆ'.[೪] ಹೀಗೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಹಲವಾರು ಅಂಶಗಳಲ್ಲಿ ಬದಲಾವಣೆಗಳು ಸಂಭವಿಸಿರುವುದನ್ನು ನಾವು ಇಂದು ಈ ಬುಡಕಟ್ಟು ಸಮಾಜದಲ್ಲಿ ಕಾಣಬಹುದಾಗಿದೆ.

ಕಾಡುಕುರುಬ ಮತ್ತು ಜೇನುಕುರುಬರ ಬದುಕಿನ ಸ್ಥಿತ್ಯಂತರಗಳು

ಜಾಗತಿಕವಾಗಿ ಆಗುತ್ತಿರುವ ಪರಿವರ್ತನೆಯ ಪ್ರವಾಹಕ್ಕೆ ಸಿಕ್ಕ ಕಾಡುಕುರುಬ ಮತ್ತು ಜೇನುಕುರುಬರ ಸಮುದಾಯವು ಸ್ವಾತಂತ್ರ್ಯ ನಂತರ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಆಗುತ್ತಿರುವ ಬದಲಾವಣೆಗೆ ಸ್ಪಂದಿಸುವಂತ ಅನಿವಾರ್ಯತೆ ಸೃಷ್ಟಿಯಾಯಿತು. ಆಧುನಿಕತೆಗೆ ಸಿಲುಕಿಕೊಂಡ ಅನೇಕ ಬುಡಕಟ್ಟುಗಳು ತಮ್ಮ ಲಕ್ಷಣಗಳಿಂದ ಹೊರಬರುವಂತಾದವು. ಜಾಗತೀಕರಣದ ಪ್ರಭಾವದಿಂದಾಗಿ ಮತ್ತು ಅಕ್ಷರ ಮತ್ತು ಸಾಕ್ಷರತೆಯು ಕಾಡುಕುರುಬ ಮತ್ತು ಜೇನುಕುರುಬರ ಜೀವನ ಮಟ್ಟದಲ್ಲಿ ಸಾಕಷ್ಟು ಸುಧಾರಣೆಗೆ ಕಾರಣವಾಯಿತು. ಅನೇಕ ಬುಡಕಟ್ಟುಗಳು ಜಾಗತೀಕರಣದ ಪ್ರಭಾವದಿಂದಾಗಿ ತಮ್ಮ ಮೂಲ ಉಡುಗೆ-ತೊಡುಗೆಗಳಲ್ಲಿ, ವಾಸಸ್ಥಳ, ಮನೆಗಳ ನಿರ್ಮಾಣ, ಉದ್ಯೋಗ, ಆಹಾರ ಪದ್ಧತಿ, ಮಡಿಕೆ-ಕುಡಿಕೆ, ವೈದ್ಯ ಪದ್ಧತಿಯಲ್ಲಿ ಇದ್ದಂತಹ ಅವರ ಮೂಲ ಜ್ಞಾನ ಇಂದು ಜಾಗತೀಕರಣ, ಆಧುನಿಕರಣ, ಕೈಗಾರಿಕೀಕರಣದ ಪ್ರಭಾವಕ್ಕೆ ಸಿಲುಕಿ ಕಣ್ಮರೆಯಾಗಿವೆ.

ಕಸುಬು: ಆಧುನಿಕ ಜಗತ್ತಿನ ಪ್ರಭಾವಕ್ಕೆ ಸಿಲುಕಿಕೊಂಡಿರುವ ಕಾಡುಕುರುಬ ಮತ್ತು ಜೇನುಕುರುಬರು ತಮ್ಮ ಮೂಲ ವೃತ್ತಿಯಾದ ಜೇನು ಕೀಳುವುದು, ಬಿದಿರಿನ ವಸ್ತುಗಳನ್ನು ತಯಾರಿಸುವುದು ಇಂದು ಕಡಿಮೆಯಾಗಿದೆ. ಅವರು ಹಿಂದೆ ಕಾಡಿನಲ್ಲಿದ್ದಾಗ ಅಲ್ಲಿಯೇ

ಸಿಗುವ ಜೇನು, ಬಿದಿರು ಹಾಗೂ ಅರಣ್ಯೋತ್ಪನ್ನಗಳನ್ನು ಸಂಗ್ರಹಿಸಿ, ಅವುಗಳನ್ನು ಮಾರಾಟ ಮಾಡಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದರು. ಆದರೆ ಇಂದು ಸರ್ಕಾರ ಅನೇಕ ಅರಣ್ಯ ಕಾಯಿದೆಗಳನ್ನು ಜಾರಿಗೆ ತರುವ ಮೂಲಕ ಅವರ ಮೂಲಕ್ಕೆ ಪೆಟ್ಟುಕೊಟ್ಟು ಅವರನ್ನು ಅರಣ್ಯದಿಂದ ಒಕ್ಕಲೆಬ್ಬಿಸುತ್ತವೆ. ಕಾರಣ ಆಧುನಿಕತೆಯ ಪರಿಣಾಮ ಇಂದು ಈ ಎರಡು ಸಮುದಾಯದವರು ಪಾರಂಪರಿಕ ವೃತ್ತಿಯಾದ ಬೇಟೆ, ಆಹಾರ ಉತ್ಪನ್ನಗಳ ಸಂಗ್ರಹಣೆ, ಜೇನು ಕೀಳುವುದು, ಬಿದಿರಿನ ವಸ್ತುಗಳನ್ನು ತಯಾರಿಸುವ ವೃತ್ತಿಯನ್ನು ತ್ಯಜಿಸುವ ಮೂಲಕ ಕೂಲಿ ಜೀವನದಲ್ಲಿ ಸ್ಥಿರವಾಗಿ ನೆಲೆನಿಲ್ಲುವಂತೆ ಮಾಡಿದೆ. ಕೃಷಿ ಮತ್ತು ಕೃಷಿ ಕೂಲಿ ಮತ್ತು ಇತರೆ ಉಪ ಕಸುಬುಗಳಲ್ಲಿ ನಿರತರಾಗಿದ್ದಾರೆ. ಇಂದು ಜೀವನ ನಿರ್ವಹಣೆಗಾಗಿ ಹಲವಾರು ಕಸುಬುಗಳನ್ನು ಅವಲಂಬಿಸಿರುವುದು ಕಂಡು ಬಂದಿದೆ ಸರಕಾರಿ ನೌಕರಿ, ಕೃಷಿಯೇತರ ಕೂಲಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸಹ ಕಂಡುಬರುತ್ತಾರೆ.

ವಾಸಸ್ಥಳ: ಮೂಲತ ಅಲೆಮಾರಿಗಳಾಗಿ ಅರಣ್ಯದಿಂದ ಅರಣ್ಯಕ್ಕೆ ಅಲೆದಾಡುತ್ತಿದ್ದ ಕಾಡುಕುರುಬ ಮತ್ತು ಜೆನುಕುರುಬರು ಅರಣ್ಯದಲ್ಲಿಯೇ ಸಣ್ಣಪುಟ್ಟ ಗುಡಿಸಲುಗಳನ್ನು ನಿರ್ಮಿಸಿಕೊಂಡು ಗುಂಪಾಗಿ ವಾಸಿಸುತ್ತಿದ್ದರು. ಆದರೆ ಇಂದು ಈ ಎರಡು ಸಮುದಾಯಗಳಲ್ಲಿ ಆಗಿರುವ ಪ್ರಮುಖವಾದ ಬದಲಾವಣೆಯೆಂದರೆ ಈ ಸಮುದಾಯಗಳನ್ನು ಸರ್ಕಾರಗಳು ಕಾಡಿನಿಂದ ಹೊರಹಾಕಿ ನಾಗರಿಕ ಜಗತ್ತಿಗೆ ಹತ್ತಿರವಾಗಿರುವಂತಹ ಸ್ಥಳಗಳಲ್ಲಿ ಇವರಿಗೆ ವಸತಿ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಿ ಕೊಟ್ಟು ಅವರ ಸಂಪ್ರದಾಯಿಕ ಮನೆಗಳ ನಿರ್ಮಾಣವು ಬದಲಾವಣೆಗೆ ಒಳಪಟ್ಟಿದೆ. ಇಂದು ಈ ಎರಡು ಸಮುದಾಯಗಳ ಹಾಡಿಯಲ್ಲಿ ತುಂಬಾ ಆಧುನಿಕವಾಗಿ ರಚನೆಯಾದ ಮನೆಗಳು ಇಂದು ಇವರ ಹಾಡಿಯಲ್ಲಿ ತಲೆ ಎತ್ತಿವೆ. ಮನೆಯನ್ನು ಸಿಮೆಂಟ್‌ನಿಂದ ಕಟ್ಟಲಾಗಿದ್ದು, ಮನೆಯ ಮೇಲ್ಛಾವಣಿಯನ್ನು ಸಿಮೆಂಟಿನ ಹಂಚುಗಳು, ಮಂಗಳೂರು ಹಂಚುಗಳ ಮೂಲಕ ಮುಚ್ಚಿರುವುದನ್ನು ಕಾಣಬಹುದು. ಮನೆಯಲ್ಲಿ ಸುಸಜ್ಜಿತವಾದ ಕೋಣೆಗಳನ್ನು ಒಳಗೊಂಡು ಸ್ನಾನದ ಮನೆ, ಅಡುಗೆ ಮನೆ, ಒಂದು ಕಡೆ ನಿರ್ಮಾಣ ಮಾಡಿರುವುದು ಹಾಗೂ ಪ್ರತಿಯೊಂದು ಮನೆಗೆ ಶೌಚಾಲಯವನ್ನು ನಿರ್ಮಿಸಿಕೊಡಲಾಗಿದ್ದು ಆಧುನಿಕತೆಗೆ ಹಿಡಿದ ಕೈಗನ್ನಡಿಯಾಗಿದೆ.

ವೈದ್ಯಪದ್ಧತಿ: ಪ್ರಾಚೀನ ಕಾಲದಲ್ಲಿ ಜನತೆಯು ಆರೋಗ್ಯವೆಂದರೆ ದೇವರಿಂದ ಸಿಗುವುದು ಎಂಬ ನಂಬಿಕೆಯನ್ನು ಬುಡಕಟ್ಟು ಸಮುದಾಯದವರು ಹೊಂದಿದ್ದರು. ಭೂತ ಪ್ರೇತ, ಪಿಶಾಚಿಗಳ ಚೇಷ್ಟೆಗಳಿಂದ ಅಥವಾ ಕೆಟ್ಟ ದೃಷ್ಟಿಯಿಂದ ಅನಾರೋಗ್ಯ ಉಂಟಾಗುತ್ತಿದೆ

ಎಂದು ಬುಡಕಟ್ಟು ಜನರು ನಂಬಿದ್ದರು. ಅದಕ್ಕೆ ಪೂರಕವಾಗಿ ಅನಾದಿಕಾಲದಿಂದಲೂ ತಮ್ಮ ಪೂರ್ವಜರು ಕಂಡುಕೊಂಡಂತಹ ಮಾಟ, ಮಂತ್ರ, ಗಿಡಮೂಲಿಕೆ ಔಷಧಿಗಳನ್ನು ಮಾಡಿಕೊಳ್ಳುತ್ತಾ ಮತ್ತು ಕಾಡಿನ ಹಣ್ಣು ಹಂಪಲು, ಸೊಪ್ಪು, ತೊಗಟೆ, ಬೇರು, ಗೆಡ್ಡೆ-ಗೆಣಸುಗಳೇ ಅಂದು ಇವರ ಆಹಾರದ ಭಾಗವಾಗಿದ್ದು ಈ ಕಾಡಿನ ಆಹಾರೋತ್ಪನ್ನಗಳಿಂದ ತಮ್ಮ ದೇಹಕ್ಕೆ ಬೇಕಾದಂತಹ ಅಗತ್ಯವಾದ ಖನಿಜಾಂಶಗಳನ್ನು ಮತ್ತು ಪೋಷಕಾಂಶಗಳನ್ನು ಪಡೆಯುತ್ತಿದ್ದರು. ಆದರೆ ಇಂದು ಕಾಡುಕುರುಬ ಮತ್ತು ಜೇನುಕುರುಬರು ನಾಗರಿಕ ಪ್ರಪಂಚಕ್ಕೆ ಹತ್ತಿರವಾಗಿರುವುದರಿಂದ ಮತ್ತು ಕಾಡಿಗೆ ಹೋಗುವುದನ್ನು ನಿರ್ಬಂಧಿಸಿರುವುದರಿಂದ ಇವರು ಸರ್ಕಾರವು ಕೊಡುವಂತಹ ಅಕ್ಕಿ, ರಾಗಿ, ಗೋಧಿ, ಮೊಟ್ಟೆಯಂತಹ ಆಹಾರವನ್ನು ಇಂದು ಈ ಎರಡು ಸಮುದಾಯಗಳು ಬಳಕೆ ಮಾಡುತ್ತಿವೆ. ಆದರೆ ಇಂದು ಈ ಎರಡು ಸಮುದಾಯದಲ್ಲಿ ಪಾರಂಪರಿಕ ವೈದ್ಯಪದ್ಧತಿ ಇದೆ. ಅದು ಸಣ್ಣ ಪ್ರಮಾಣದ ಖಾಯಿಲೆಗಳನ್ನು ಅಷ್ಟೇ ಗುಣಪಡಿಸುತ್ತದೆ. ಇನ್ನುಳಿದಂತೆ ಈ ಎರಡು ಸಮುದಾಯದವರು ಆಧುನಿಕ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವುದನ್ನು ಕಾಣಬಹುದಾಗಿದೆ.

ಉಡುಗೆ-ತೊಡುಗೆ: ಕಾಡುಕುರುಬ ಮತ್ತು ಜೇನುಕುರುಬರ ಹಿಂದಿನ ಕಾಲದ ಉಡುಪು ಸಹ ವಿಶಿಷ್ಟವಾಗಿತ್ತು. ಕಾಡುಕುರುಬ ಹೆಂಗಸರು ಸೀರೆಯನ್ನು ಎದೆ ಭಾಗದವರೆಗೂ ಸುತ್ತಿಕೊಂಡು ಗಂಟು ಹಾಕುತ್ತಿದ್ದರು. ಹಾಗೆಯೇ ಗಂಡಸರು ಮೇಲಂಗಿ ಮತ್ತು ಪಂಚೆಯನ್ನು ತೊಡುತ್ತಿದ್ದರು. ಹಾಗೆಯೇ ಜೇನುಕುರುಬರ ಹೆಂಗಸರು ಸಹ ಸೀರೆ ಕುಪ್ಪಸವನ್ನು ತೊಡುತ್ತಿದ್ದರು. ಗಂಡಸರು ಮೇಲಂಗಿಯನ್ನು ಮತ್ತು ಪಂಚೆಯನ್ನು ತೊಡುತ್ತಿದ್ದರು. ಇವರ ಪೂರ್ವಜರು ಹಿಂದಿನ ಕಾಲದಲ್ಲಿ ಮರದ ತೊಗಟೆಯನ್ನು, ಮುತ್ತುಗದೆಲೆಯನ್ನು ಉಡುಪುಗಳಾಗಿ ಬಳಸುತ್ತಿದ್ದರು. ಆದರೆ ಇಂದು ಈ ಎರಡು ಸಮುದಾಯಗಳ ಮೇಲೆ ಆಧುನಿಕತೆಯ ಪ್ರಭಾವದಿಂದಾಗಿ ಇವರುಗಳು ಇಂದು ಬಣ್ಣ ಬಣ್ಣದ ಬಟ್ಟೆಗಳನ್ನು, ಜೀನ್ಸ್ ಫ್ಯಾಂಟ್‌ಗಳನ್ನು, ನೈಟಿಗಳನ್ನು ಟೀ ಶರ್ಟ್‌ಗಳು, ಈ ಸಮುದಾಯಗಳನ್ನು ಪ್ರವೇಶಿಸಿ ಅವರ ಬದಲಾವಣೆಯ ಗಾಳಿಯನ್ನು ಬೀಸಿದೆ. ಇಂದು ಹೆಂಗಸರು ಒಡವೆಗಳನ್ನು, ರೇಷ್ಮೆ ಸೀರೆಗಳನ್ನು ಉಡುವುದನ್ನು ಈ ಎರಡು ಸಮುದಾಯಗಳಲ್ಲಿ ಕಾಣಬಹುದಾಗಿದೆ.

ಅಡಿಟಿಪ್ಪಣಿ

೧. ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ ನಿಘಂಟು

೨. ಎನ್.ಪಿ. ಶಂಕರನಾರಾಯಣರಾವ್, ಪರಿವರ್ತನೆಯ ಕಿರು ಸಮುದಾಯಗಳು, ಕನ್ನಡ ಸಾಹಿತ್ಯ ಪರಿಷತ್ತು, ೨೦೦೦, ಪುಟ - ೨೦೧

೩. ನಂಜಮ್ಮಣಿ ಎಂ. ಭಾರತೀಯ ಸಾಮಾಜಿಕ ಸಂಸ್ಥೆಗಳು, ನಿರ್ದೇಶಕರು, ೨೦೦೩, ಪುಟ - ೩೩೨

೪. ನಾರಾಯಣ ಎಂ. ಸಮಾಜಶಾಸ್ತ್ರ, ೧೯೮೭, ಪುಟ - ೧೫೩

ಅಧ್ಯಾಯ ನಾಲ್ಕು

ಜೀವನಾವರ್ತಕ ಆಚರಣೆಗಳು

ಜನ್ಮ ಜನ್ಮಗಳಲ್ಲೆಲ್ಲ ಮಾನವ ಜನ್ಮವೇ ಶ್ರೇಷ್ಠವಾದುದೆಂಬುದು ಜನರ ನಂಬಿಕೆ. ಒಂದು ಜೀವ ಮಾನವ ಜನ್ಮವನ್ನು ಪಡೆಯಬೇಕಾದರೆ, ಹಲವಾರು ಜನ್ಮಗಳನ್ನೆತ್ತಿ ಸಂಸ್ಕಾರ ಹೊಂದಿರುತ್ತದಂತೆ. ಹಾಗಾಗಿಯೇ ಅದಕ್ಕೆ ಆ ಜನ್ಮವೇ ಕೊನೆಯದೆಂದು ನಂಬುತ್ತಾರೆ. ಆ ಕಾರಣಕ್ಕಾಗಿಯೇ ಹರಿದಾಸರು "ಮಾನವಜನ್ಮ ಬಲು ದೊಡ್ಡದಣ್ಣ" ಎಂದರು. ಇಂಥ ಒಂದು ಅಪರೂಪದ ಜನ್ಮ ತಳೆದ ಮಾನವ ತನ್ನದೇ ಆದ ನಂಬಿಕೆ, ರೀತಿರಿವಾಜು, ಆಚರಣೆಗಳನ್ನು ಹೊಂದಿರುತ್ತಾನೆ ಮತ್ತು ಆಚರಿಸುತ್ತಾನೆ.

ಕಾಡುಕುರುಬರು ಮತ್ತು ಜೇನುಕುರುಬರು ಕೂಡ ಇತರೆ ಸಮುದಾಯದವರಂತೆ ಜನನ ಸಂದರ್ಭದಲ್ಲಿ ಕೆಲವು ಸಂಪ್ರದಾಯಗಳು ಹಾಗೂ ಸಮಾರಂಭಗಳನ್ನು ನಡೆಸುತ್ತಾರೆ. ಒಬ್ಬ ಹೆಣ್ಣು ಗರ್ಭವತಿಯಾದಳು ಅಂದರೆ ಕೂಡಲೇ ಕೆಲವು ಕಟ್ಟುಪಾಡು ಹಾಗೂ ಆಚರಣೆಗಳು ಪ್ರಾರಂಭವಾಗುತ್ತವೆ. ಅವಳು ಅರಿತೋ ಅರಿಯದೆಯೋ ಕೆಟ್ಟ ಕೆಲಸಗಳನ್ನು ಮಾಡಬಾರದು. ಕೆಟ್ಟ ಯೋಚನೆ, ಕೋಪ ಆವೇಶಗಳಿಗೆ ಒಳಗಾಗದೆ ಶಾಂತಚಿತ್ತಳಾಗಿಯೇ ಇದ್ದು ದೇವರ ಪೂಜೆ, ಧ್ಯಾನ ಮಾಡುತ್ತಾ ಕಾಲ ಕಳೆಯಬೇಕು. ಏಕೆಂದರೆ ಈ ವೇಳೆಯಲ್ಲಿ ಆಕೆ ಮಾಡುವ ಪ್ರತಿಯೊಂದು ಒಳಿತು ಕೆಡುಕುಗಳು ಕೂಡ ಆಕೆ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿನ ಮೇಲೆ ಪ್ರಭಾವ ಬೀರುತ್ತದೆಂದು ನಂಬುತ್ತಾರೆ. ಗರ್ಬಿಣಿ ಗ್ರಹಣವನ್ನು ನೋಡಿದರೆ ಮಗು ಕುರುಡಾಗಿ ಹುಟ್ಟುತ್ತದೆಂದು ನಂಬುತ್ತಾರೆ. ಹಾಗಾಗಿ ಗ್ರಹಣ ಕಾಲದಲ್ಲಿ ಗರ್ಭಿಣಿಯರನ್ನು ಈಗಲೂ ಸಹ ಅವರ ಮೇಲೆ ಗ್ರಹಣದ ಬೆಳಕು ಬೀಳದಂತೆ ಅವರನ್ನು ಕತ್ತಲೆಯ ಕೋಣೆಯಲ್ಲಿ ಇಡುತ್ತಾರೆ. ಅವಳ ಆಹಾರ ಪದಾರ್ಥಗಳ, ಪಾನೀಯಗಳ ಸೇವನೆಯಲ್ಲಿಯೂ ಸಹ ನಿರ್ಬಂಧವಿರುತ್ತದೆ. ಹೀಗೆ ಗರ್ಭಿಣಿಯಾದ ಹೆಣ್ಣು ಅನೇಕ ರೀತಿಯ ನಿರ್ಬಂಧಗಳಿಗೆ ಒಳಪಡುವುದನ್ನು ಎಲ್ಲಾ ಸಮುದಾಯದ ಮಹಿಳೆಯರಲ್ಲಿ ಕಾಣಬಹುದು. ಈ ರೀತಿಯ ನಿರ್ಬಂಧಗಳು ತಾಯಿ ಮತ್ತು ಮಗುವಿನ ಕ್ಷೇಮದ ದೃಷ್ಟಿಯಿಂದ ಉಪಯುಕ್ತವಾದವು. ಎಲ್ಲಾ ಸಮುದಾಯಗಳಲ್ಲೂ ಸಹ ಇನ್ನೂ ಅನೇಕ ರೀತಿಯ ನಿರ್ಬಂಧಗಳನ್ನು ಹೇರಲಾಗಿರುತ್ತದೆ.

ಕಾಡುಕುರುಬರ ಜನನ ಸಂಬಂಧಿ ಆಚರಣೆಗಳು

ಹುಟ್ಟು ಮತ್ತು ಕರುಳಬಳ್ಳಿ ಬೇರ್ಪಡಿಸುವ ಕ್ರಿಯೆ: ಕಾಡುಕುರುಬರ ಮಗು ಹುಟ್ಟಿದ ತಕ್ಷಣ ಮಗುವಿನ ಕರುಳಬಳ್ಳಿಯನ್ನು ಕತ್ತರಿಸುತ್ತಾರೆ. ಹಿಂದಿನ ಕಾಲದಲ್ಲಿ ಕರುಳಬಳ್ಳಿಯನ್ನು ಚೂಪಾದ ಬಿದಿರಿನ ಹಚ್ಚೆಯಿಂದ ಕತ್ತರಿಸುತ್ತಿದ್ದರು. ಇಂದು ಹೆರಿಗೆಯು ಆಸ್ಪತ್ರೆಯಲ್ಲಿ ಆಗುವುದರಿಂದ ಬ್ಲೇಡ್‌ನಲ್ಲಿ ಕತ್ತರಿಸುತ್ತಾರೆ. ಹಾಡಿಯಲ್ಲಿಯೇ ಹೆರಿಗೆಯನ್ನು ಮಾಡಿಸಿದರೆ ಕರುಳಬಳ್ಳಿಯನ್ನು ಬ್ಲೇಡ್‌ನಿಂದ ಕತ್ತರಿಸುತ್ತಾರೆ. ಕತ್ತರಿಸಿದ ಕರುಳ ಬಳ್ಳಿಯನ್ನು ಹಾಗೂ ಹೆರಿಗೆಯ ಸಮಯದಲ್ಲಿ ಬಂದಂತಹ ಮಾಸನ್ನು ಎರಡನ್ನೂ ಒಟ್ಟಿಗೆ ಒಂದು ಮಡಿಕೆಯಲ್ಲಿ ಹಾಕಿ ಅದನ್ನು ಕಾಡಿಗೆ ತೆಗೆದುಕೊಂಡು ಹೋಗಿ ಕಾಡಿನಲ್ಲಿರುವ ಹುತ್ತಕ್ಕೆ ಹಾಕಿ ಕಲ್ಲನ್ನು ಹಾಕಿ ಬರುತ್ತಾರೆ. ಯಾವ ಕಾಡು ಪ್ರಾಣಿಗಳೂ ಈ ಮಾಸನ್ನು ತಿನ್ನಬಾರದು ಎಂಬ ಕಾರಣಕ್ಕೆ ಈ ವಿಧಾನ ಅನುಸರಿಸುತ್ತಾರೆ. ಹೊಕ್ಕಳ ಬಳ್ಳಿಯನ್ನು ಕತ್ತರಿಸಿದ ಜಾಗದಲ್ಲಿ ಆದಂತಹ ಗಾಯಕ್ಕೆ ಸೀಗೆಕಾಯಿಯ ಪ್ರತಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಹಾಕಿ ಕಲಿಸಿ ಹಚ್ಚುತ್ತಾರೆ ಅಥವಾ ಸೀಗೆಕಾಯಿಯನ್ನು ಸುಟ್ಟು ಮಸಿ ಮಾಡಿ ಗಾಯಕ್ಕೆ ಹಚ್ಚುತ್ತಾರೆ.

ನಾಮಕರಣ: ಕಾಡುಕುರುಬರು ಮಗುವಿಗೆ ನಾಮಕರಣವನ್ನು ೪, ೫, ೬ ತಿಂಗಳ ನಂತರ, ಇನ್ನೂ ಕೆಲವರು ೧ ವರ್ಷದ ನಂತರ ನಾಮಕರಣವನ್ನು ಮಾಡುತ್ತಾರೆ. ನಾಮಕರಣವನ್ನು ದೇವರ ಕಾರ್ಯ ಸಮಯದಲ್ಲಿ, ದೇವರ ಹಬ್ಬಗಳ ಸಂದರ್ಭದಲ್ಲಿ ಅಥವಾ ವ್ಯವಸಾಯಕ್ಕೆ ಸಂಬಂಧಿಸಿದ ಕಾರ್ಯಗಳು ಮಾಡುವ ಸಮಯದಲ್ಲಿ ಮಾಡುತ್ತಾರೆ. ಕನ್ನಾರು ಪೊತ್ತು ಮತ್ತು ತೊನ್ನಾರು ಪೊತ್ತು(ವ್ಯವಸಾಯಕ್ಕೆ ಸಂಬಂಧಿಸಿದ ಕಾರ್ಯಗಳು ಮಾಡುವ ಸಂದರ್ಭ) ವೇಳೆಯಲ್ಲಿ ಹೆಚ್ಚಾಗಿ ನಾಮಕರಣ ಶಾಸ್ತ್ರವನ್ನು ಮಾಡುತ್ತಾರೆ. ನಾಮಕರಣ ಶಾಸ್ತ್ರ ಮಾಡುವ ದಿನ ಹಾಡಿಯ ಎಲ್ಲಾ ಹೆಣ್ಣು ಮಕ್ಕಳಿಗೆ ಹೆಸರಿಡುವ ಶಾಸ್ತ್ರ ಮಾಡುತ್ತೇವೆ ಅದಕ್ಕೆ ತಾವು ಬರಬೇಕೆಂದು ತಿಳಿಸುತ್ತಾರೆ. ಇವರಲ್ಲಿ ತೊಟ್ಟಿಲು ಕಟ್ಟುವ ಶಾಸ್ತ್ರವಿಲ್ಲ. ಅಂದು ಮನೆಗೆ ಎಲೆ, ಅಡಿಕೆ, ೧೦ ಕೆ.ಜಿ. ಅಕ್ಕಿಯನ್ನು ತರಲಾಗುತ್ತದೆ. ಎಲ್ಲರೂ ಬಂದ ಮೇಲೆ ಜನ ವಯಸ್ಸಾದ ಹಿರಿಯ ಮಹಿಳೆಯರ ಮೇಲೆ ದೇವರನ್ನು ಕರೆಯಲಾಗುತ್ತದೆ. ದೇವರ ಮುಂದೆ ಎಡೆಯನ್ನು ಹಾಕಲಾಗುತ್ತದೆ (ಅನ್ನ, ಎಲೆ, ಅಡಿಕೆ, ಹೊಗೆಸೊಪ್ಪನ್ನು ದೇವರಿಗೆ ಎಡೆಯಾಗಿ ಇಡಲಾಗುತ್ತದೆ). ೭ ಜನ ಮುದುಕಿಯರ ಮೇಲೆ ಬಂದಂತಹ ದೇವರ ಜೊತೆಯಲ್ಲಿ ಇವರು ಮಾತನಾಡುತ್ತಾರೆ. ಆಗ ದೇವರುಗಳು ಬಂದು ಎಡೆಯನ್ನು ಮುಟ್ಟಿ ಹೆಸರನ್ನು ಸೂಚಿಸಿ ಹೋಗುತ್ತವೆ. ಈ ೭ ದೇವರುಗಳು ಸೂಚಿಸಿದ ಹೆಸರನ್ನು ಮಗುವಿಗೆ ಇಡಬೇಕು. ಆ ಹೆಸರನ್ನು ಯಜಮಾನರು ಕೂಗಬೇಕು.

ದೇವರ ಕಾರ್ಯದ ದಿನವೇ ನಾಮಕರಣವನ್ನು ಸಹ ಮಾಡುತ್ತಾರೆ. ಅಂದು ತಮ್ಮ ಮನೆಯ ದೇವರಿಗೆ ಹೋಗಿ, ದೇವರಿಗೆ ಪೂಜೆ ಮಾಡಿಸಿ ತಮ್ಮ ಎಲ್ಲಾ ಮನೆ ದೇವರುಗಳಿಗೆ ಒಂದೊಂದು ಎಡೆಯನ್ನು ಕೊಟ್ಟು ಬಂದು ಹಾಡಿಯಲ್ಲಿ ಅಂದು ರಾತ್ರಿಯಿಂದ ಬೆಳಗ್ಗೆಯವರೆಗೆ ಕುಣಿಯುವಾಟವನ್ನು ಮಾಡುತ್ತಾರೆ. ನಂತರ ಬೆಳಗ್ಗೆ ಅಂಬಾಲದಲ್ಲಿ ದೇವರನ್ನು ಕರೆದು 'ನಿನ್ನ ಬಲದಿಂದ ನಾವು ಜೀವನ ಮಾಡುತ್ತಿದ್ದೇವೆ. ನೀನೇ ಕಾಪಾಡಬೇಕು' ಎಂದು ದೇವರಲ್ಲಿ ಪ್ರಾರ್ಥಿಸಿ ನಂತರ ಅಂಬಾಲದಲ್ಲಿ ಯಜಮಾನನ ಹತ್ತಿರ ಮಕ್ಕಳಿಗೆ ಹೆಸರು ಬೇಕಿರುವವರು ಕರೆತಂದು ಬಿಡುತ್ತಾರೆ. ದೇವರ ಗುಡ್ಡಪ್ಪನ ಮೇಲೆ ದೇವರು ಬಂದು ಇಂಥವರ ಹೆಸರನ್ನು ಇಡಿ ಎಂದು ಹೇಳುತ್ತದೆ. ಗುಡ್ಡಪ್ಪನ ಮೇಲೆ ದೇವರು ಬರದೆ ಇದ್ದರೆ ಯಜಮಾನರು ಅಥವಾ ಶಾಸ್ತ್ರ ಗೊತ್ತಿರುವವರು ಒಂದು ದೇವರ ಹೆಸರು ಅಥವಾ ಹಳೆಯ ಹಿರಿಯರ ಹೆಸರನ್ನು ಕರೆಯುತ್ತಾರೆ.

ನಾಮಕರಣದ ದಿನ ಗಂಡುಮಕ್ಕಳಿಗೆ ಕಾಳ, ಸೋಮ, ಮಾರ, ಚಲ್ಲಾ, ಮಾದ, ಕಿರುಮಾದ ಇನ್ನೂ ಮೊದಲಾದ ಹೆಸರುಗಳನ್ನು ಇಡುತ್ತಾರೆ. ಹೆಣ್ಣು ಮಕ್ಕಳಿಗೆ ಬೊಮ್ಮಿ, ಮಾರಕ್ಕ, ಕಾಳಿ, ಮಹಾದೇವಿ ಇನ್ನೂ ಮೊದಲಾದ ಹೆಸರುಗಳನ್ನು ಇಡುತ್ತಾರೆ. ಅಲ್ಲದೇ ಇವರ ದೇವರಾದ ಬೊಮ್ಮದೇವರು, ಮಾರಮ್ಮ, ಕಾಳಮ್ಮ, ಕಾಳಿ, ಬಸವೇಶ್ವರ ಬೀರ ದೇವರುಗಳ ಹೆಸರುಗಳನ್ನು ಸಹ ಇಡುತ್ತಾರೆ. ಇಂದು ಮಕ್ಕಳು ಶಾಲಾ-ಕಾಲೇಜಿಗೆ ಹೋಗುತ್ತಿರುವುದರಿಂದ ಅವರಿಗೆ ಶಾಲೆಯಲ್ಲಿ ಇನ್ನೊಂದು ಅಡ್ಡ ಹೆಸರುಗಳನ್ನು ಇಡುತ್ತಾರೆ. ಅದು ಶಾಲೆಯವರು ಮಾತ್ರ ಆ ಅಡ್ಡ ಹೆಸರುಗಳನ್ನು ಕೂಗುತ್ತಾರೆ. ಉದಾ: ವಿನಯ್, ರಾಜ್, ಪ್ರಜ್ವಲ್ ಇನ್ನೂ ಮೊದಲಾದ ಹೆಸರುಗಳನ್ನು ಕೊಡುತ್ತಾರೆ. ಆದರೆ ಕಾಡುಕುರುಬರು ಯಾವುದೇ ಕಾರಣಕ್ಕೂ ಮನೆಯಲ್ಲಿಯೇ ಆಗಲಿ ಹೊರಗಡೆಯೇ ಆಗಲಿ ಅಡ್ಡ ಹೆಸರುಗಳನ್ನು ಹಿಡಿದು ಕರೆಯುವುದಿಲ್ಲ. ಅವರ ಮಕ್ಕಳಿಗೆ ಹುಟ್ಟಿದಾಗ ಕರೆದ ಹೆಸರನ್ನೇ ಕರೆಯುತ್ತಾರೆ.

ನಾಮಕರಣದ ದಿನದ ಪೂಜೆಗೆ ಹಣ್ಣು, ಕಾಯಿ, ಹೂ, ಅರಿಶಿನ ಕುಂಕುಮ ಎಲೆ, ಅಡಿಕೆ, ತೆಂಗಿನಕಾಯಿ, ಹೊಗೆಸೊಪ್ಪು ಹಾಗೂ ಮುಖ್ಯವಾಗಿ ನಾಮಕರಣ ಪೂಜೆಗೆ ಶ್ರೀಗಂಧದ ಚಕ್ಕೆ ಇರಲೇಬೇಕು. ಅಂದು ಮಗುವಿಗೆ ಹೊಸಬಟ್ಟೆಯನ್ನು ಹಾಕುತ್ತಾರೆ. ಆದರೆ ತಾಯಿಗೆ ಹೊಸಬಟ್ಟೆಯಿಲ್ಲ. ನಾಮಕರಣದ ದಿನ ಜವಳ ತೆಗೆಯುವುದಿಲ್ಲ. ಜವಳವನ್ನು ಯಾವಾಗ ಬೇಕಾದರೂ ತೆಗೆಸಬಹುದು. ಮಗುವಿನ ಆರೈಕೆ ಮಾಡಲು ಮತ್ತು ನೀರು ಹಾಕಲು ಬಂದಂತಹ ಅಜ್ಜಿಗೆ(ಸೂಲಗಿತ್ತಿ) ಎಲೆ, ಅಡಿಕೆ ಅಥವಾ ಉಳ್ಳಂತವರು ಅನ್ನ ಅಥವಾ ಸೀರೆಯನ್ನು ಕೊಡುತ್ತಾರೆ.

ದೂರದಲ್ಲಿರುವ ಸಂಬಂಧಿಕರನ್ನು ಇವರು ನಾಮಕರಣಕ್ಕೆ ಕರೆಯುವುದಿಲ್ಲ. ತಮ್ಮ ಹಾಡಿಯಲ್ಲಿಯೇ ಇರುವವರನ್ನು ಕರೆದು ನಾಮಕರಣ ಕಾರ್ಯವನ್ನು ಮಾಡುತ್ತಾರೆ. ಅವರ ಸಂಬಂಧಿಗಳು ಇರುವ ಹಾಡಿಗೆ ಯಾರಾದರು ಹೋಗುವವರಿದ್ದರೆ ಅವರ ಮೂಲಕ ಇಂತವರ ಮಗ ಅಥವಾ ಮಗಳಿಗೆ ಇಂತಹ ಕೂಸು ಹುಟ್ಟಿದೆ ಇಂಥಹ ಹೆಸರನ್ನು ಇಡಲಾಗಿದೆ ಎಂದು ಹೇಳುವಂತೆ ಹೋಗುವವರಿಗೆ ಹೇಳಿ ಕಳುಹಿಸುತ್ತಾರೆ.

ನಾಮಕರಣದ ದಿನ ದೇವರಿಗೆ ಇಟ್ಟ ಎಡೆಯನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಅಂದು ಸ್ಥಿತಿವಂತರು ಪಾಯಸ, ಅನ್ನ, ಸಾಂಬಾರು ಅಡುಗೆಯನ್ನು ಮಾಡಿಸುತ್ತಾರೆ. ಸ್ಥಿತಿವಂತರಲ್ಲದವರು ಎಲೆ, ಅಡಿಕೆ, ಹೊಗೆಸೊಪ್ಪನ್ನು ಕೊಡುತ್ತಾರೆ. ಹಿಂದಿನ ಕಾಲದಲ್ಲಿ ಹಿಟ್ಟು ಸಾರನ್ನು ಮಾಡಿಸುತ್ತಿದ್ದರು.

ಜೇನುಕುರುಬರ ಜನನಸಂಬಂಧಿ ಆಚರಣೆಗಳು

ಹುಟ್ಟು ಮತ್ತು ಕರುಳಬಳ್ಳಿ ಬೇರ್ಪಡಿಸುವ ಕ್ರಿಯೆ: ಜೇನುಕುರುಬರು ಮಗು ಹುಟ್ಟಿದ ತಕ್ಷಣ ಅದರ ಹೊಕ್ಕಳಬಳ್ಳಿಯನ್ನು ಕತ್ತರಿಸುತ್ತಾರೆ. ಹೊಕ್ಕಳಬಳ್ಳಿಯನ್ನು ತಾಯಿ ಅಥವಾ ಸೂಲಗಿತ್ತಿಯಾದರು ಕೊಯ್ಯಬಹುದು. ಹೊಕ್ಕಳಬಳ್ಳಿಯನ್ನು ಬಿದಿರಿನ ಹಚ್ಚೆಯಿಂದ ಕೊಯ್ಯುತ್ತಾರೆ. ಕತ್ತರಿಸಿ ಕರುಳ ಬಳ್ಳಿಯನ್ನು ಕೆಲವರು ಬಟ್ಟೆಯಲ್ಲಿ ಕಟ್ಟಿ ಮನೆಯಲ್ಲಿಯೇ ಇಡುತ್ತಾರೆ. ಇನ್ನೂ ಕೆಲವರು ಅದನ್ನು ತಿಪ್ಪೆಯಲ್ಲಿ ಇಲ್ಲವೇ ಮಣ್ಣಿನಲ್ಲಿ ಹೂಳುತ್ತಾರೆ. ಹೊಕ್ಕಳಬಳ್ಳಿಯನ್ನು ಕತ್ತರಿಸಿದ ಜಾಗದಲ್ಲಿ ಆದಂತಹ ಗಾಯಕ್ಕೆ ಅರಿಶಿನ ಪುಡಿಯನ್ನು ಹಚ್ಚುತ್ತಾರೆ. ಒಬ್ಬೊಬ್ಬರು ಹೊಕ್ಕಳಬಳ್ಳಿಯು ತಾನಾಗಿಯೇ ಉದುರುತ್ತದೆ ಎಂದು ೫ ದಿನಗಳವರೆಗೆ ಹಾಗೆಯೇ ಬಿಟ್ಟಿರುತ್ತಾರೆ. ತೆಂಗಿನಕಾಯಿಯನ್ನು ಸುಟ್ಟು ಅದರ ಮಸಿಯನ್ನು ಹಚ್ಚುತ್ತಾರೆ. ಅಥವಾ ದಪ್ಪನೆಯ ಗಟ್ಟಿ ಬಟ್ಟೆಯನ್ನು ಸುಟ್ಟು ಅದರ ಬೂದಿಯನ್ನು ಗಾಯಕ್ಕೆ ಹಚ್ಚುತ್ತಾರೆ. ಅಥವಾ ಮನೆಯಲ್ಲಿ ಹೊಗೆಯಿಂದ ಉಂಟಾದಂತಹ ಮಸಿಯನ್ನು ಅವರು ಗಾಯಕ್ಕೆ ಹಚ್ಚುತ್ತಾರೆ.

ನಾಮಕರಣ: ಜೇನುಕುರುಬರು ೪ನೇ ತಿಂಗಳಿನಲ್ಲಿ ಹೊಸ ಮಡಿಕೆ ಮತ್ತು ಬಟ್ಟೆಯನ್ನು ತಂದು ಜನರನ್ನೆಲ್ಲ ಕರೆಯಿಸಿ ಅಂದಿನ ದಿನವೇ ನಾಮಕರಣವನ್ನು ಮಾಡುತ್ತಾರೆ. ಅಂದು ನಾಮಕರಣದ ದಿನ ತಾಯಿ ಮತ್ತು ಮಗುವಿಗೆ ಹೊಸಬಟ್ಟೆಯನ್ನು ತೊಡಿಸುತ್ತಾರೆ. ಆಗ ಹಾಡಿಯ ಎಲ್ಲರನ್ನು ಕರೆಯಲಾಗುತ್ತದೆ. ಅವರ ಸಮುದಾಯದಲ್ಲೇ ಇರುವ ಪೂಜಾರಿಯನ್ನು ಕರೆದು ನಾಮಕರಣಶಾಸ್ತ್ರವನ್ನು ಮಾಡುತ್ತಾರೆ. ನಾಮಕರಣದ ದಿನ ಹಾಡಿಯಲ್ಲಿ ಇರುವವರೆಲ್ಲ ಅಲ್ಲಿ ಇರಬೇಕು. ಬೇರೆಯ ಊರಿನಲ್ಲಿರುವ ಸಂಬಂಧಿಕರನ್ನು ಮೂರು ದಿನ ಮುಂಚಿತವಾಗಿಯೇ ಹೋಗಿ ಕರೆದು ಬರುತ್ತಾರೆ. ಈಗ ಮೊಬೈಲ್‌ಗಳು ಬಂದಿರುವ ಕಾರಣ ಫೋನ್ ಮಾಡಿಯೇ ತಿಳಿಸುತ್ತಾರೆ. ನಾಮಕರಣವನ್ನು ಹೆಣ್ಣಿನ

ತಂದೆಯ ಮನೆಯವರು ಮಾಡಬೇಕು. ಅಂದು ಮಗುವಿಗೆ ಹೆಸರಿಡುವಾಗ ತಾಯಿ ಮತ್ತು ತಂದೆಯ ಕಡೆಯ ಹಿರಿಯರ ಹೆಸರುಗಳನ್ನು ಸೂಚಿಸಲಾಗುತ್ತದೆ. ನಂತರ ಹರಳನ್ನು ಬಿಡುತ್ತಾರೆ. ಮಂತ್ರವನ್ನು ಹೇಳುತ್ತಾರೆ. ಆಗ ಹರಳು ಸೂಚಿಸುವ ಹೆಸರನ್ನು ಅಂದು ಮಗುವಿಗೆ ಇಡುತ್ತಾರೆ. ಗಂಡುಮಕ್ಕಳಿಗೆ, ಮಾರ, ಮಾಸ್ತಿ, ಕೆಂಚ, ಕಾಳ, ಕರಿಯ, ಮೋಟ, ಚೆಲುವ, ಬಸವ ಎಂದು ಹೆಸರಿಡುತ್ತಾರೆ. ಹೆಣ್ಣು ಮಕ್ಕಳಿಗೆ ನೂರೆ, ಕೆಂಚಿ, ಮಾರೆ, ಕುಮಾರಿ ಎಂಬ ಹೆಸರುಗಳನ್ನು ಇಡುತ್ತಾರೆ. ಅಂದು ಸ್ಥಿತಿವಂತರು ಊಟ ಹಾಕಿಸುತ್ತಾರೆ. ಇಲ್ಲದವರು ಎಲೆ ಅಡಿಕೆ, ಹೊಗೆಸೊಪ್ಪು ಕೊಡುತ್ತಾರೆ. ಜೇನುಕುರುಬರು ಎರಡು ವರ್ಷಗಳ ನಂತರ ಮಗುವಿನ ತಲೆಗೂದಲನ್ನು ತೆಗೆಯುತ್ತಾರೆ. ತಲೆಗೂದಲನ್ನು ಸೋದರ ಮಾವನಿಂದ ತೆಗೆಸುತ್ತಾರೆ ಅಥವಾ ಯಾರಾದರು ಹರಕೆಯನ್ನು ಕಟ್ಟಿಕೊಂಡಿದ್ದರೆ ತಲೆಗೂದಲು ತೆಗೆಸುತ್ತಾರೆ.

ಋತುಮತಿ ಆಚರಣೆಗಳು

ಕಾಡುಕುರುಬರು ಹಿಂದಿನ ಕಾಲದಲ್ಲಿ ಹೆಣ್ಣು ಋತುಮತಿಯಾದರೆ ಯಾವುದೇ ರೀತಿಯ ಆರೈಕೆ ಮಾಡುತ್ತಿರಲಿಲ್ಲ. ಅವರ ಪಾಡಿಗೆ ಅವರನ್ನು ಇರಲು ಬಿಡುತ್ತಿದ್ದರು. ಕೆಲವರು ಆ ವಿಷಯವನ್ನೇ ಯಾರಿಗೂ ತಿಳಿಸುತ್ತಿರಲಿಲ್ಲ. ಹುಡುಗಿಯ ತಾಯಿಗೆ ಬಿಟ್ಟರೆ ಹುಡುಗಿಯ ತಂದೆಗೂ ಋತುಮತಿಯಾದ ವಿಷಯ ತಿಳಿಸುತ್ತಿರಲಿಲ್ಲ. ಋತುಮತಿಯಾದ ಯುವತಿಯು ಬೆಳಗ್ಗೆ ಸಾಯಂಕಾಲ ನೀರು ಹಾಕಿಕೊಳ್ಳುತ್ತಿದ್ದರು. ಕೊಬ್ಬರಿ ಮತ್ತು ಸಕ್ಕರೆಯನ್ನು ಋತುಮತಿಯಾದ ಹೆಣ್ಣುಮಗಳಿಗೆ ಕೊಡುತ್ತಿದ್ದರು. ಈ ವಿಷಯವನ್ನು ಯಾರಿಗೂ ಹೇಳುತ್ತಿರಲಿಲ್ಲ. ಹೆಣ್ಣನ್ನು ಮದುವೆಗೆ ಕೇಳುತ್ತಾರೆ ಹಾಗೂ ಹುಡುಗರು ಕಣ್ಣು ಹಾಕುತ್ತಾರೆ ಎಂಬ ಕಾರಣದಿಂದ ಯಾರಿಗೂ ಹೇಳುತ್ತಿರಲಿಲ್ಲ.

ಇತ್ತೀಚಿನ ದಿನಗಳಲ್ಲಿ ಕಾಡುಕುರುಬರು ಹೆಣ್ಣು ಋತುಮತಿಯಾದರೆ ಅವಳನ್ನು ವಿಶೇಷವಾಗಿ ಆರೈಕೆ ಮಾಡುತ್ತಾರೆ. ಋತುಮತಿಯಾದ ವಿಷಯವನ್ನು ಎಲ್ಲರಿಗೂ ತಿಳಿಸುತ್ತಾರೆ. ಋತುಮತಿಯಾದ ಹೆಣ್ಣನ್ನು ಒಂದು ದಿನ ವಿಶೇಷವಾಗಿ ಕೂರಿಸಿ ಶಾಸ್ತ್ರವನ್ನು ಮಾಡುತ್ತಾರೆ. ಕಾಡುಕುರುಬರು ಋತುಮತಿಯಾದ ಯುವತಿಯನ್ನು ೧೬ನೇ ದಿನಕ್ಕೆ ಕೂರಿಸಿ ಋತುಮತಿಶಾಸ್ತ್ರವನ್ನು ಮಾಡುತ್ತಾರೆ. ಅಂದು ನಾಲ್ಕೈದು ಜನ ಹೆಣ್ಣು ಮಕ್ಕಳು ಸೇರಿ ಅರಿಶಿನ, ಕುಂಕುಮ, ಕರ್ಪೂರ, ಕಾಯಿ, ಹಣ್ಣು, ಹೂಗಳನ್ನು ಇಟ್ಟು ಗಂಧದ ಕಡ್ಡಿಯನ್ನು ಹಚ್ಚಿ ಗಂಗಮ್ಮನನ್ನು ಪೂಜೆ ಮಾಡುತ್ತಾರೆ. ನಂತರ ಹುಡುಗಿಗೆ ನೀರನ್ನು ಹುಯ್ಯುತ್ತಾರೆ. ೧೬ನೇ ದಿವಸದವರೆಗೂ ಋತುಮತಿಯಾದ ಹೆಣ್ಣು ಮನೆಯಲ್ಲಿಯೇ ಇರಬೇಕು. ಋತುಮತಿಯಾದ ಯುವತಿಗೆ ಅಂದು ಹೊಸ ಬಟ್ಟೆಯನ್ನು ಹಾಕಲಾಗುತ್ತದೆ. ಅಂದು

ಋತುಮತಿಯಾದ ಯುವತಿಗೆ ಸೋದರಮಾವನಿಂದ ಸೀರೆ ಮತ್ತು ರವಿಕೆಯನ್ನು ಉಡುಗೊರೆಯಾಗಿ ನೀಡುತ್ತಾನೆ. ಅಂದು ಯುವತಿಗೆ ಯಾವುದೇ ಆಭರಣಗಳನ್ನು ತೊಡಿಸುವುದಿಲ್ಲ. ಅವರ ಹತ್ತಿರದ ಸಂಬಂಧಿಗಳು ಋತುಮತಿಯಾದ ಹೆಣ್ಣಿಗೆ ಹಣವನ್ನಾಗಲಿ ಅಥವಾ ಆರೈಕೆಯ ಪದಾರ್ಥವನ್ನಾಗಲಿ ತಂದುಕೊಡುತ್ತಾರೆ. ಅಂದು ಋತುಮತಿ ಶಾಸ್ತ್ರಕ್ಕೆ ಬಂದಂತ ಅತಿಥಿಗಳಿಗೆ ಉಳ್ಳವರು ಅಡುಗೆಯನ್ನು ಮಾಡಿಸುತ್ತಾರೆ(ಪಾಯಸ, ಅನ್ನ, ಸಾಂಬಾರು). ಇಲ್ಲದವರು ಎಲೆ–ಅಡಿಕೆಯನ್ನು ಕೊಡುತ್ತಾರೆ.

ಹೆಣ್ಣುಮಕ್ಕಳು ಋತುಮತಿಯಾದಾಗ ಮತ್ತು ಪ್ರತಿ ತಿಂಗಳು ಮುಟ್ಟಾದಾಗ ಅವರು ಮನೆಯಲ್ಲಿಯೇ ಇರಬೇಕು. ಅವರು ಹೊರಗೆ ಹೋಗುವಂತಿಲ್ಲ. ಅವರು ಮನೆಯಲ್ಲಿಯೇ ಎಲ್ಲರೊಡನೆ ಇರಬಹುದು. ಅವರು ಪ್ರತ್ಯೇಕ ಕೋಣೆಯಲ್ಲಿ ಇರಬೇಕು. ಋತುಮತಿಯಾದ ಮತ್ತು ಮುಟ್ಟಾದ ಹೆಣ್ಣು ಯಾವುದೇ ದೇವರ ಕಾರ್ಯಗಳಿಗೆ ಹೋಗುವಂತಿಲ್ಲ. ಮತ್ತು ಮನೆಯಲ್ಲಿ ಇರುವವರಿಗೂ ಹೊರಗಿನಿಂದ ಬಂದವರಿಗೂ ನೀರನ್ನು ಕೊಡುವುದು, ಊಟಕ್ಕೆ ಬಡಿಸುವುದು ಮಾಡುವಂತಿಲ್ಲ. ಹಾಗೇನಾದರೂ ತಂದುಕೊಟ್ಟರೆ ಸೂತಕವಿದ್ದಂತೆ. ಸೂತಕ ಕಳೆಯುವವರೆಗೂ ಬೇರೆಯವರು ಋತುಮತಿಯಾದ ಹೆಣ್ಣಿನ ಮನೆಗೆ ಹೋಗುವುದಿಲ್ಲ. ಸೂತಕ ಕಳೆಯುವವರೆಗೂ ಆ ಹುಡುಗಿಯ ಕೈಯಲ್ಲಿ ಯಾವುದೇ ಶುಭ ಮತ್ತು ದೇವರ ಕಾರ್ಯಗಳನ್ನು ಮಾಡಿಸುವುದಿಲ್ಲ.

ಬ್ರಹ್ಮಗಿರಿಯ ಕಾಡುಕುರುಬರಲ್ಲಿ ಋತುಮತಿಸಂಬಂಧಿ ಆಚರಣೆಗಳು ಇಲ್ಲ. ಋತುಮತಿಯಾದ ಹೆಣ್ಣು ಅಂದು ಸ್ನಾನ ಮಾಡುವುದೇ ಹೆಚ್ಚಿನ ಆಚರಣೆಯಾಗಿದೆ. ಮತ್ತಾವುದೇ ರೀತಿಯ ಋತುಮತಿಶಾಸ್ತ್ರಗಳು ಬ್ರಹ್ಮಗಿರಿ ಕಾಡುಕುರುಬರಲ್ಲಿ ಇಲ್ಲ.

ಋತುಮತಿ ಆಚರಣೆಗಳು

ಜೇನುಕುರುಬರು ಯುವತಿ ಋತುಮತಿಯಾದಾಗ ಮೊದಲು ಈ ವಿಷಯವನ್ನು ಹಾಡಿಯ ಯಜಮಾನರಿಗೆ ತಿಳಿಸುತ್ತಾರೆ. ಋತುಮತಿಯಾದ ಯುವತಿಗೆಂದು ಮನೆಯ ಪಕ್ಕದಲ್ಲಿಯೇ ಒಂದು ಸಣ್ಣ ಗುಡಿಸಿಲನ್ನು ಕಟ್ಟುತ್ತಾರೆ. ಆ ಗುಡಿಸಿಲನ್ನು ಹಾಡಿಯ ಯಜಮಾನನೇ ಹಾಕಿಕೊಡಬೇಕು. ಗುಡಿಸಿಲನ್ನು ತಾಳೆ ಸೊಪ್ಪು, ಮುತ್ತಿಗೆ ಸೊಪ್ಪು ಹಾಗೂ ಬಿದಿರಿನಿಂದ ಕಟ್ಟುತ್ತಾರೆ. ಋತುಮತಿಯಾದ ಹೆಣ್ಣನ್ನು ೪, ೫ ಅಥವಾ ೬ ತಿಂಗಳವರೆಗೆ ಗುಡಿಸಿಲಿನಲ್ಲಿಯೇ ಬಿಡುತ್ತಾರೆ. ಹಿಂದಿನ ಕಾಲದಲ್ಲಿ ಒಂದು ವರ್ಷಗಳವರೆಗೆ ಬಿಡುತ್ತಿದ್ದರು. ಋತುಮತಿ ಯವತಿಗೆ ಗುಡಿಸಿಲು ಕಟ್ಟುವ ಮುನ್ನ ಯಜಮಾನ ಪೂಜೆ ಮಾಡಬೇಕು. ಋತುಮತಿ ಯುವತಿಯನ್ನು ಗಂಡಸರು ನೋಡುವಂತಿಲ್ಲ. ಋತುಮತಿಯಾದ ಯುವತಿಯು

ಹೊರಗಡೆ ಬರುವಂತಿಲ್ಲ. ಹೊರಗಡೆ ಹೋಗಬೇಕಾದರೆ ರಾತ್ರಿ ವೇಳೆಯಲ್ಲಿ ಹೋಗಬಹುದು. ಅದೂ ಯಾರೂ ಇಲ್ಲದ ಸಮಯದಲ್ಲಿ ಹೋಗಬೇಕು. ಋತುಮತಿಯಾದಾಗ ಇಡೀ ಹಾಡಿಯೇ ಆ ಸೂತಕವನ್ನು ಆಚರಿಸುತ್ತದೆ. ಸೂತಕದ ಮನೆಯವರು, ಬೇರೆ ಯಾರ ಮನೆಗೂ ಹೋಗುವಂತಿಲ್ಲ. ಮಾಡಿದ ಅಡುಗೆಯನ್ನು ಬೇರೆ ಯಾರಿಗೂ ಕೊಡುವಂತಿಲ್ಲ. ಅಡುಗೆಯನ್ನು ಮನೆಯ ಹೊರಗಡೆಯೇ ಮಾಡಬೇಕು. ಬೇರೆಯವರು ಇವರ ಮನೆಗೆ ಹೋಗಬಹುದು. ಋತುಮತಿಯಾದ ಹುಡುಗಿಗೆ ಕಾಯಿ, ಉದ್ದು, ಬೆಲ್ಲವನ್ನು ಹಾಕಿ ದಿನಕ್ಕೆ ಮೂರು ಬಾರಿ ಕೊಡಬೇಕು. ಆ ನಂತರವೇ ಊಟವನ್ನು ಮಾಡಬೇಕು. ಇದನ್ನು ಸೂತಕ ಕಳೆಯುವವರೆಗೂ ಕೊಡುತ್ತಾರೆ. ಹುಡುಗಿಯ ಜೊತೆಯಲ್ಲಿ ಅವರ ಸಂಬಂಧಿಕರ ಚಿಕ್ಕ ಹುಡುಗಿಯನ್ನು ಬಿಡುತ್ತಾರೆ. ಋತುಮತಿಯಾದ ಹುಡುಗಿಯನ್ನು ಮನೆಯೊಳಕ್ಕೆ ಕರೆದುಕೊಳ್ಳುವಾಗ ಹುಡುಗಿಯ ತೊಡೆಯ ಮೇಲೆ ೩ ಅಥವಾ ೪ ವರ್ಷದ ಗಂಡು ಮಗುವನ್ನು ಮಲಗಿಸಿ ಸ್ನಾನ ಮಾಡಿಸಿ ಮನೆಯ ಒಳಗಡೆ ಕರೆಯಿಸಿಕೊಳ್ಳುತ್ತಾರೆ. ಈ ಶಾಸ್ತ್ರವನ್ನು ಋತುಮತಿಯಾದ ಹುಡುಗಿಯ ಜೊತೆ ಗುಡಿಸಿಲಲ್ಲಿ ಯಾರು ಇಲ್ಲದಾಗ ಮಾತ್ರ ಮಾಡುತ್ತಾರೆ. ಹುಡಗಿಯನ್ನು ಒಳಗಡೆ ಕರೆತಂದ ಮೇಲೆ ಮೊದಲು ಸ್ನಾನ ಮಾಡಿಸಿ ಇಬ್ಬರಿಗೂ ಹೊಸ ಬಟ್ಟೆಯನ್ನು ಹಾಕುತ್ತಾರೆ. ನಂತರ ಹಾಡಿಯ ಯಜಮಾನ ಮತ್ತು ಯಜಮಾನನ ಹೆಂಡತಿ ಇಬ್ಬರೂ ಹೆಣ್ಣುಮಕ್ಕಳಿಗೆ ಶಾಸ್ತ್ರವನ್ನು ಮಾಡುತ್ತಾರೆ. ನಂತರ ಹಾಡಿಯ ಹೆಣ್ಣು ಮಕ್ಕಳು ಶಾಸ್ತ್ರವನ್ನು ಮಾಡುತ್ತಾರೆ. ಶಾಸ್ತ್ರ ಮಾಡುವಾಗ ಅಕ್ಕಿ, ಬೆಲ್ಲ, ಎಲೆ, ಅಡಿಕೆ, ಹಣ್ಣು, ಕಾಯಿ ಮೊದಲಾದ ಸಾಮಾನುಗಳನ್ನು ಶಾಸ್ತ್ರಕ್ಕೆ ಬಳಸುತ್ತಾರೆ. ಮನೆಯಲ್ಲಿ ಈ ಶಾಸ್ತ್ರ ಮಾಡುವ ಮುಂಚೆ ತಮ್ಮ ದೇವರುಗಳ ದೇವಸ್ಥಾನಕ್ಕೆ ಹೋಗಿ ತೀರ್ಥವನ್ನು ತಂದು ಮನೆಯಲ್ಲಿ ಹಾಕಿ ಶುಚಿಗೊಳಿಸುತ್ತಾರೆ. ಆ ನಂತರ ಋತುಮತಿಶಾಸ್ತ್ರ ಮಾಡುತ್ತಾರೆ. ಅಂದಿನ ಶಾಸ್ತ್ರಕ್ಕೆ ತಮ್ಮ ಬಂಧು-ಬಾಂಧವರನ್ನು ಆಹ್ವಾನಿಸಿರುತ್ತಾರೆ. ಅಂದು ಬಂದಂತಹ ಅತಿಥಿಗಳು ಋತುಮತಿಯಾದ ಯುವತಿಗೆ ಹಣವನ್ನು ಹಾಗೂ ಉಡುಗೊರೆಗಳನ್ನು ನೀಡುತ್ತಾರೆ. ಅವರು ನೀಡಿದ ಹಣವನ್ನು ಇಬ್ಬರೂ ಸಮನಾಗಿ ಹಂಚಿಕೊಳ್ಳಬೇಕು. ಅಂದು ಶಾಸ್ತ್ರಕ್ಕೆ ಬಂದಂತಹವರಿಗೆ ಸ್ಥಿತಿವಂತರು ಪಾಯಸ, ಅನ್ನ, ಸಾಂಬಾರು ಮಾಡಿಸುತ್ತಾರೆ. ಸ್ಥಿತಿವಂತರಲ್ಲದವರು ಅಂಗಡಿಯಿಂದ ಸಿಹಿ ತಂದು ಹಂಚುತ್ತಾರೆ. ಋತುಮತಿಶಾಸ್ತ್ರ ಮಾಡುವಾಗ ಹಿರಿಯ ಹೆಣ್ಣುಮಕ್ಕಳು ಪದಗಳನ್ನು ಹಾಡುತ್ತಾರೆ. ಅಲ್ಲಿಗೆ ಗಂಡಸರು ಹೋಗುವಂತಿಲ್ಲ ಅಂದು ಯಾವುದೇ ಮಾಂಸಾಹಾರವನ್ನು ಮಾಡುವುದಿಲ್ಲ. ಈ ಶಾಸ್ತ್ರವನ್ನು ಸಾಯಂಕಾಲದ ಸಮಯದಲ್ಲಿ ಮಾಡುತ್ತಾರೆ. ಈ ಶಾಸ್ತ್ರ ಮುಗಿದ ಮೇಲೆ ಯಜಮಾನನೇ ಗುಡಿಸಿಲನ್ನು ಕೀಳಬೇಕು ಅಥವಾ ಸೋದರಮಾವನು ಕೀಳಬಹುದು. ಗುಡಿಸಲು ಕೀಳುವ ಮುಂಚೆ ಪೂಜೆ ಮಾಡಬೇಕು.

ಕಾಡುಕುರುಬರ ವಿವಾಹ

ಪ್ರಾಯಕ್ಕೆ ಬಂದ ಹೆಣ್ಣು ಗಂಡುಗಳನ್ನು ಕುಟುಂಬಜೀವನಕ್ಕೆ ಪ್ರವೇಶ ಮಾಡಿಸುವ ಪದ್ಧತಿಯೇ ಮದುವೆ. ಮಾನವನ ಜೀವನದಲ್ಲಿ ಇದೊಂದು ಮಹತ್ವದ ಘಟ್ಟ. ಮಾನವ ಸಮಾಜದ ಕೆಲವು ಮೂಲಭೂತ ಅವಶ್ಯಕತೆಯನ್ನು ಪೂರೈಸಲು ಕುಟುಂಬ ಮತ್ತು ವಿವಾಹ ಎಂಬ ಸಂಸ್ಥೆಗಳು ಅನಿವಾರ್ಯ. ಸ್ತ್ರೀ ಪುರುಷರು ಈ ಸಂಸ್ಥೆಗಳ ಆಧಾರಗಳು. ಸ್ತ್ರೀ ಪುರುಷರಿಗೆ ಏರ್ಪಡುವ ಧಾರ್ಮಿಕ ಮತ್ತು ಸಾಮಾಜಿಕ ಸಂಬಂಧವೇ ವಿವಾಹ. ಈ ಸಂಬಂಧ ನಿರ್ದಿಷ್ಟ ಧಾರ್ಮಿಕ ಮತ್ತು ಸಾಮಾಜಿಕ ಕಲಾಪಗಳ ಆಚರಣೆ, ಪದ್ಧತಿ, ವಿಧಿ–ವಿಧಾನಗಳ ಮೂಲಕ ಸಾಧ್ಯವಾಗುತ್ತದೆ. ಇದು ಮಾನವ ಸಮಾಜದಲ್ಲಿ ಮಾತ್ರ ಕಂಡುಬರುವ ಪ್ರಬಲ ಸಂಸ್ಥೆ. ಮಾನವನ ಲೈಂಗಿಕ ಸ್ವಚ್ಛಂದತೆಯನ್ನು ನಿವಾರಣೆ ಮಾಡಿ ಆತನ ಲೈಂಗಿಕ ಬಯಕೆಯ ಪೂರೈಕೆಗೆ ಕ್ರಮಬದ್ಧವಾದ ವ್ಯವಸ್ಥೆಯೊಂದನ್ನು ನಿರ್ಮಿಸಲೋಸುಗ ವಿವಾಹವು ಹುಟ್ಟಿಕೊಂಡಿತು. ವಿವಾಹವು ಸಂತಾನಾಪೇಕ್ಷೆಯುಳ್ಳ ಗಂಡು–ಹೆಣ್ಣುಗಳ ನಡುವೆ ಏರ್ಪಟ್ಟ ನಂಟು. ವಿವಾಹವೆಂಬುದು ಗಂಡು–ಹೆಣ್ಣುಗಳ ನಡುವಿನ ಕರಾರು ಅಥವಾ ಒಪ್ಪಂದ. ವಿವಾಹವು ಲೈಂಗಿಕ ಜೀವನ ನಡೆಸಲು ಮಾನವನಿಗೆ ನೀಡಲಾಗಿರುವ ಪರವಾನಗಿ ಎಂಬ ದೃಷ್ಟಿಕೋನದಿಂದ ವಿವಾಹವನ್ನು ವ್ಯಾಖ್ಯಾನಿಸುವುದು ಸಂಗತವೆನಿಸುವುದಿಲ್ಲ. ಹಿಂದೂ ಪರಂಪರೆಯಲ್ಲಿ ವಿವಾಹವನ್ನು ವ್ಯಾವಹಾರಿಕ ಅಥವಾ ಪ್ರಾಪಂಚಿಕ ದೃಷ್ಟಿಗಿಂತಲೂ ಆಧ್ಯಾತ್ಮಿಕ, ನೈತಿಕ ಹಾಗೂ ಪಾರಮಾರ್ಥಿಕ ದೃಷ್ಟಿಯಿಂದಲೇ ಅರ್ಥೈಷಿಸಲಾಗುವುದು. ಹಿಂದೂ ವಿವಾಹವು ಒಂದು ಪವಿತ್ರವಾದ ಧಾರ್ಮಿಕ ವಿಧಿ.

ಕಾಡುಕುರುಬರು ಹಿಂದಿನ ಕಾಲದಲ್ಲಿ ಒಂದು ಮನೆಯಲ್ಲಿ ಹೆಣ್ಣು ಇದ್ದರೆ ಹಿರಿಯರೆಲ್ಲಾ ಹೋಗಿ ಕರಿಮಣಿಯನ್ನು ಸಂತೆಯಲ್ಲಿ ತಂದು ಸೀರೆಯನ್ನು ಹುಡುಗಿಗೆ ಕೊಟ್ಟು, ಎಲೆ ಅಡಿಕೆಯನ್ನು ಕೊಟ್ಟು ಹೆಣ್ಣನ್ನು ಕರೆತರುತ್ತಾರೆ. ಅಲ್ಲದೇ ಹೆಣ್ಣಿನ ಕಡೆಯವರು ಗಂಡಿನ ಹಾಡಿಯ ಯಜಮಾನನ ಕಾಲನ್ನು, ಗಂಡಿನ ಕಡೆಯವರು ಹೆಣ್ಣಿನ ಕಡೆಯ ಯಜಮಾನನ ಕಾಲನ್ನು ಹಿಡಿಯುತ್ತಾರೆ. ಉಳ್ಳಂತವರು ಹಿಟ್ಟನ್ನು ಹಾಕಿಸಿದರೆ. ಇಲ್ಲದವರು ನಾನು ಬಡವ ಎಂದು ಹೇಳಿ ಎಲೆ, ಅಡಿಕೆ, ಹೊಗೆಸೊಪ್ಪು ಕೊಡುತ್ತಿದ್ದರು. ಬೇರೆ ಜಮ್ಮಾದ ಹುಡುಗಿಯನ್ನು ಕದ್ದು ತಂದರೆ ಅದು ಈ ಜಮ್ಮಾದ ವ್ಯಾಪ್ತಿಯ ದೇವರ ಜವಾಬ್ದಾರಿಯಾಗಿರುತ್ತದೆ. ಆದರಿಂದ ಹುಡುಗಿಯನ್ನು ಕದ್ದು ತಂದರೆ ತಪ್ಪನ್ನು ಕೊಡಬೇಕು. ದೇವರ ದಯೆ ಇರಬೇಕಾದರೆ ಹಾಗೂ ಬೇರೆ ಜಮ್ಮಾದ ದೇವರ ರಕ್ಷಣೆ, ದಯೆ ಇರಬೇಕಾದರೆ ತಪ್ಪು ತೀರಿಸಲೇ ಬೇಕು. ಹುಡುಗಿಯ ಕಡೆಯ ದೇವರಿಗೆ ಹುಡುಗನು ತಪ್ಪು ತೀರಿಸಲು ೧ ರೂಪಾಯಿ ಹಾಗೂ ಕಬ್ಬಿಣದ ಚೂರನ್ನು ದೇವರಿಗೆ ಒಪ್ಪಿಸಬೇಕು.

ಕಾಡುಕುರುಬರ ಕುಲ-ಬಳಿಗಳು: ಬಂಧುತ್ವ ಆಧಾರಿತ ಮಾನವ ಗುಂಪು ಕುಲ, ಕುಟುಂಬ ಮತ್ತು ವಂಶಗಳು ಬಂಧುತ್ವ ಆಧಾರಿತ ಗುಂಪುಗಳು ಕುಟುಂಬ ವಾಸಸ್ಥಾನದ ಆಧಾರದಲ್ಲಿ ರೂಪುಗೊಂಡಿದೆ. ಆದರೆ ವಂಶ ಮತ್ತು ಕುಲಗಳು ವಾಸಸ್ಥಾನವನ್ನು ಆಧರಿಸಿಲ್ಲ. ಕುಲವು ಕುಟುಂಬ ಮತ್ತು ವಂಶಗಳಿಗಿಂತ ಮೇಲಿನ ಹಂತದಲ್ಲಿದೆ. ಕುಟುಂಬದ ಸದಸ್ಯರಲ್ಲಿ ರಕ್ತಸಂಬಂಧ ಮತ್ತು ವಿವಾಹ ಸಂಬಂಧಗಳೆರಡೂ ಇವೆ. ಕುಟುಂಬದ ಅನಂತರದ ಪ್ರಮುಖವಾದ ಗುಂಪು ವಂಶ. ಇದು ವಂಶಾನುಕ್ರಮವನ್ನು ಆಧರಿಸಿದ್ದು. ಹಲವು ತಲೆಮಾರುಗಳ, ಆದರೆ ಗುರುತಿಸಲ್ಪಟ್ಟ ಪೂರ್ವಜರನ್ನು ಒಳಗೊಂಡ ರಕ್ತಸಂಬಂಧಿಗಳ ಗುಂಪೇ ವಂಶಬಂಧುತ್ವ ಆಧಾರಿತ ಗುಂಪುಗಳಲ್ಲಿ ಮೂರನೆಯ ಹಂತದ ಗುಂಪೇ ಕುಲ. ಎರಡು ಅಥವಾ ಎರಡಕ್ಕಿಂತಲೂ ಹೆಚ್ಚು ವಂಶಗಳು ಸೇರಿ ಒಂದು ಕುಲವಾಗಿರುತ್ತದೆ. ಆದರೆ ಕುಲದ ಮೂಲಪುರುಷ ಅಥವಾ ಸ್ತ್ರೀಯನ್ನು ಪೂರ್ವಜರ ವಂಶಾವಳಿಯ ಮೂಲಕ ಗುರುತಿಸುವುದು ಸಾಧ್ಯವಿಲ್ಲ. ಏಕೆಂದರೆ ಈ ಗುಂಪಿನಲ್ಲಿ ಹಲವಾರು ತಲೆಮಾರುಗಳಿಗೆ ಸೇರಿದ ಜನರಿರುತ್ತಾರೆ. ವಂಶದ ಮೂಲಪುರುಷ ಅಥವಾ ಸ್ತ್ರೀ ನಿಜವಾದ ವ್ಯಕ್ತಿಗಳೇ ಆಗಿರಬಹುದು. ಕೆಲವು ಸಮಾಜಗಳಲ್ಲಿ ಅವರು ಪ್ರಾಣಿಗಳು, ಸಸ್ಯಗಳು ಅಥವಾ ಪ್ರಕೃತಿಯಲ್ಲಿನ ಯಾವುದೇ ವಸ್ತುವು ಆಗಿರಬಹುದು.[೧]

ಕುಲದ ಕಾರ್ಯಗಳು: ಕುಲಗಳು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತವೆ. ಅವುಗಳಲ್ಲಿ ಸಾಮಾಜಿಕ, ವೈವಾಹಿಕ, ಧಾರ್ಮಿಕ ಮತ್ತು ರಾಜಕೀಯ ಕಾರ್ಯಗಳು ಪ್ರಮುಖವಾಗಿವೆ. ಕುಲದ ಎಲ್ಲ ಸದಸ್ಯರು ರಕ್ತಸಂಬಂಧಿಗಳಾದ್ದರಿಂದ ಅವರೊಳಗೆ ಲೈಂಗಿಕ ಅಥವಾ ವಿವಾಹ ಸಂಬಂಧಗಳನ್ನು ನಿಷೇಧಿಸಲಾಗಿದೆ. ಇವನ್ನು ಉಲ್ಲಂಘಿಸಿದವರನ್ನು ಸಾರ್ವಜನಿಕವಾಗಿ ಅವಹೇಳನ ಮಾಡಲಾಗುವುದು. ಬುಡಕಟ್ಟು ಸಮಾಜಗಳಲ್ಲಿ ಸಾರ್ವಜನಿಕ ಅವಹೇಳನವೇ ಅತಿ ದೊಡ್ಡ ಶಿಕ್ಷೆಯೆಂದು ಜನ ಪರಿಗಣಿಸಿದ್ದಾರೆ. ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿಯು ಕುಲದ ಮುಖ್ಯಸ್ಥನಿಗಿದೆ. ಬೇರೆ ಕುಲಗಳಿಗೆ ಅಥವಾ ಬುಡಕಟ್ಟುಗಳಿಗೆ ಸೇರಿದ ಜನ ಆಕ್ರಮಣ ಮಾಡಿದಲ್ಲಿ ಕುಲದ ಸದಸ್ಯರೆಲ್ಲರೂ ಒಟ್ಟಾಗಿ ಹೋರಾಡುತ್ತಾರೆ. ಬುಡಕಟ್ಟುಗಳಲ್ಲಿ ಕುಲಚಿಹ್ನೆಯು ಸಸ್ಯ ಅಥವಾ ಪ್ರಾಣಿ ಆಗಿದ್ದಲ್ಲಿ ಅದನ್ನು ಸಂರಕ್ಷಿಸುವ ಹೊಣೆಗಾರಿಕೆ ಕುಲದ ಸದಸ್ಯರಿಗಿದೆ. ಇವುಗಳನ್ನು ನಾಶ ಮಾಡುವುದನ್ನು ನಿಷೇಧಿಸಲಾಗಿದೆ. ಕುಲಪದ್ಧತಿಗಳು ಕಟ್ಟುನಿಟ್ಟಾಗಿರುತ್ತವೆ. ಕುಲದ ಚಿಹ್ನೆಗಳಿಗೆ ಹೆಚ್ಚಿನ ಮಹತ್ವವಿರುತ್ತದೆ. ಬುಡಕಟ್ಟುಗಳಲ್ಲಿ ಆಯಾ ಕುಲದ ಕುಲಸ್ಥರಿಗೆ ತಮ್ಮ ಕುಲದ ಬಗೆಗೆ ಅತಿಯಾದ ಗೌರವ ಭಾವನೆಯಿರುತ್ತದೆ. ಬುಡಕಟ್ಟುಗಳಲ್ಲಿ ಒಂದೇ ಕುಲದವರೊಡನೆ ವಿವಾಹ ಸಂಬಂಧವನ್ನು ನಿಷೇಧಿಸಲಾಗಿದೆ. ಈ ಒಂದೇ ಕುಲದವರು ಹೊರವಿವಾಹ ನಿಯಮವನ್ನು ಅನುಸರಿಸಬೇಕು.[೨]

ಕಾಡುಕುರುಬರಲ್ಲಿ ೩ ಕುಲದವರು, ೫ ಕುಲದವರು, ೭ ಕುಲದವರು ಎಂಬ ಮೂರು ರೀತಿಯ ಕುಲಗಳಿವೆ. ಒಂದೇ ಕುಲದಲ್ಲಿ ಒಂದೇ ಕುಟುಂಬದಲ್ಲಿ ಕಾಡುಕುರುಬರು ವಿವಾಹ ಸಂಬಂಧವನ್ನು ಬೆಳೆಸುವುದಿಲ್ಲ. ೭ ಕುಲದಲ್ಲಿ ಹುಡುಗ ಅಥವಾ ಹುಡುಗಿಯರ ವಿವಾಹ ಸಂಬಂಧವನ್ನು ಬೆಳೆಸುವುದಿಲ್ಲ. ೫ ಕುಲದವರು ೩ ಕುಲದವರಲ್ಲಿ ವಿವಾಹ ಸಂಬಂಧ ಬೆಳೆಸುತ್ತಾರೆ. ೩ ಕುಲದವರು ೫ ಕುಲದವರೊಡನೆ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ಈ ಎರಡು ಕುಲಗಳು ತಮ್ಮ ಕುಲದಲ್ಲಿಯೇ ಒಳಬಾಂಧವ್ಯ ವಿವಾಹವನ್ನು ಮಾಡಿಕೊಳ್ಳುವಂತಿಲ್ಲ. ಹೊರಬಾಂಧವ್ಯ ವಿವಾಹಪದ್ಧತಿಯನ್ನು ಅನುಸರಿಸಬೇಕು.

ಕಾಡುಕುರುಬರಲ್ಲಿ ೮೨ ಮಕ್ಕಲಗಳಿವೆ. ಈ ೮೨ ಮಕ್ಕಲಗಳಿಗೆ ಹೆಸರಿಟ್ಟಂತಹ ವ್ಯಕ್ತಿಯ ಕುಲದ ಹೆಸರು ಪ್ಯಾರಮಕ್ಕಲ ಎಂದು ಕರೆಯುತ್ತಾರೆ. ಈತನು ಎಲ್ಲಾ ಕುಲಗಳಿಗೆ ಹೆಸರು ಕೊಟ್ಟ ಕಾರಣ ಅವರ ದೇವರು ಈತನಿಗೆ ಪ್ಯಾರಮಕ್ಕಲ ಎಂದು ಹೆಸರು ಕೊಟ್ಟಿದ್ದಾನೆ ಎಂದು ಇತಿಹಾಸ ಹೇಳುತ್ತದೆ ಎಂದು ಹೇಳುತ್ತಾರೆ.

ಕಾಡುಕುರುಬರ ಕುಲಗಳು

೩ ಎಲಮಗೇ

೧. ಕೆಲ್ಕಕರ್ ಮಗೆ – ಬಹುವಚನ
೨. ಕಲ್ಕಕೀರ್ ಮಗೆ – ಬಹುವಚನ
೩. ಮುತ್ತಿಗ ಮಗೆ
೪. ಎತ್ತಿರ್ ಮಗೆ
೫. ವೈಯಲ್ ಮಂಜಿಲ್ ಮಗೆ
೬. ಕಣ್ಮೇನ್ ಜೀರಗಲ್ಲ ಮಗೆ
೭. ಕಳ್ಳನೈರ್ ಮಗೆ
೮. ಸೆರಗಲ್ಲ ಮಗೆ
೯. ಪೇರ್ ಕಾಡ್‌ಗೇರ್ ಮಗೆ
೧೦. ಪ್ಯಾರ್ ಮಗೆ
೧೧. ನಡುಮೆತ್ತ ಮಗೆ
೧೨. ಬೀರ್‌ಪುಲ್ಲ ಮಗೆ

೫ ಎಲಮಗೇ

೧. ಕೋಯ್ಲಿರ್ ಮಗೆ
೨. ಕೋಂಜೆರ್ ಮಗೆ
೩. ಜೀರ್‌ಗಲ್ಲ ಮಗೆ
೪. ಪಳ್ಳೆರ್ ಮಗೆ
೫. ವಾಳ ಮಗೆ
೬. ಸಿಂಕೀರ್ ಮಗೆ
೭. ದಡವೆಲ ಮಗೆ
೮. ಸೋಗುಂ ಮಗೆ
೯. ಸಾಂಬಳ ಮಗೆ
೧೦. ಓಸೆಲ್ ಮಗೆ
೧೧. ಪೇರ್ ಕಡುಗೇರ್ ಮಗೆ
೧೨. ಕಣ್ಮೇನ್ ಮಗೆ

೧೩. ಜೇಡಲ್ ಮಗೆ	೧೩. ಅಡ್ಮೇಲ್ ಮಗೆ(ಕೇರಳ)
೧೪. ನಾಣಸೀ ಮಗೆ(ಹೆಚ್.ಡಿ.ಕೋಟೆ)	೧೪. ಪ್ಯಾಲ್ಗಲ್ ಮಗೆ
೧೫. ಬಣ್‌ಗೋಡ್ ಮಗೆ(ಕೊಡುಗು)	೧೫. ಕೋಡಂ ಮಗೆ
೧೬. ಸರ್ಕಲ್ ಮಗೆ(ಕೊಡುಗು)	೧೬. ಪಾಂಬರ್ ಮಗೆ
೧೭. ತಿರುಮಂಗಲ್ ಮಗೆ	೧೭. ಬಳ್‌ಗೋಡ್ ಮಗೆ
೧೮. ಕುಪ್ಪೈರ್ ಮಗೆ	೧೮. ಕೈಪಾಟ್ ಮಗೆ
೧೯. ನಿಮಿಲ್ ಮಗೆ	೧೯. ಬಾಳಕೀರ್ ಮಗೆ
೨೦. ಬಗಲೇರ್ ಮಗೆ	೨೦. ಸಿಂಗೇರ್ ಮಗೆ(ಕೇರಳ)
೨೧. ಮನಿವಾಡ ಮಗೆ	೨೧. ಯಾನೆಲ್ಲ ಮಗೆ
೨೨. ಮತ್ತಿರ್ ಮಗೆ	೨೨. ಕಲಿಕೀನ್ ಮಗೆ(ತಮಿಳುನಾಡು)
	೨೩. ಕೇಮೇಲ್ ಮಗೆ

ಕಾಡುಕುರುಬರು ಹೆಣ್ಣು ಮತ್ತು ಗಂಡನ್ನು ಆಯ್ಕೆ ಮಾಡುವಾಗ ಒಂದೇ ಕುಲದೈವವನ್ನು ಹೊಂದಿರುವವರೊಡನೆ ವಿವಾಹವಾಗುವುದಿಲ್ಲ. ಕಾಡುಕುರುಬರಲ್ಲಿ ೩ ಎಲಮಗೇ ಮತ್ತು ೫ ಎಲಮಗೇ ಎಂಬ ಎರಡು ಕುಲಗಳಿವೆ. ಇವರಲ್ಲಿ ೩ ಎಲಮಗೇಯವರು ೫ ಎಲಮಗೇಯಲ್ಲಿ, ೫ ಎಲಮಗೇಯವರು ೩ ಎಲಮಗೇಯಲ್ಲಿ ಮಾತ್ರ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ೫ ಎಲಮಗೇಯಲ್ಲಿ ಹೆಣ್ಣು ಇದ್ದರೆ ೩ ಎಲಮಗೇಯವರು ಅವರ ಮನೆಗೆ ಹೋಗಿ ನಿಮ್ಮಲ್ಲಿ ಹೆಣ್ಣುಮಕ್ಕಳು ಇವೆಯೇ ಎಂದು ಕೇಳುತ್ತಾರೆ. ಮನೆಯಲ್ಲಿ ಹೆಣ್ಣುಮಕ್ಕಳು ಒಂದು ದಿನವನ್ನು ಎರಡು ಕುಟುಂಬದವರು ನಿಗದಿ ಮಾಡುತ್ತಾರೆ. ಅಂದು ಹುಡುಗಿಯ ಮನೆಗೆ ಹುಡುಗನ ಮನೆಯವರು, ಹಾಡಿಯ ಯಜಮಾನ ಹಾಗೂ ಗ್ರಾಮದ ಮುಖ್ಯಸ್ಥರು ಹೋಗುತ್ತಾರೆ.

ಕನ್ಯಾ ನಿಶ್ಚಯ: ಕಾಡುಕುರುಬರು ಹೆಣ್ಣು ನಿಶ್ಚಯಿಸಲು ಹೋಗುವಾಗ ಕಾಡುಕುರುಬರ ಯಜಮಾನರ ಕೈಯಲ್ಲಿ ಕೊಕ್ಕದ ಕಡ್ಡಿಯನ್ನು ಯಜಮಾನ ಹಿಡಿದಿರಬೇಕು (ಕೊಕ್ಕದ ಕಡ್ಡಿಯನ್ನು ಕೈಯಲ್ಲಿ ಹಿಡಿಯುವುದು ಒಂದು ನೆಪವಷ್ಟೆ). ಯಜಮಾನ ಆ ಕೊಕ್ಕದ ಕಡ್ಡಿಯನ್ನು ಹಿಡಿದು ಕಾಲೂರಿದರೆ ಅವರ ಹಿಂದೆ ಹುಡುಗನ ಕಡೆಯವರು ಹೋಗುತ್ತಾರೆ. ಹುಡುಗಿಯನ್ನು ನೋಡಲು ಹೋಗುವ ದಿನವೇ ಹುಡುಗ ಹುಡುಗಿ ಒಪ್ಪಿಕೊಂಡರೆ ಅದುವೇ ನಿಶ್ಚಿತಾರ್ಥ ಇದ್ದ ಹಾಗೆ. ನಿಶ್ಚಿತಾರ್ಥಕ್ಕೆಂದು ಬೇರೊಂದು ದಿನವನ್ನು ನಿಗದಿಪಡಿಸುವಂತಿಲ್ಲ.

ಹುಡುಗಿ ನಿಶ್ಚಯವಾದ ಮೇಲೆ ಹುಡುಗ ಮತ್ತು ಹುಡುಗಿಯ ಕಡೆಯವರೆಲ್ಲಾ ಯಜಮಾನರ ಕಾಲನ್ನು ಹಿಡಿಯುತ್ತಾರೆ.

ಕಾಡುಕುರುಬರು ಕನ್ಯಾನಿಶ್ಚಯಕ್ಕೆಂದು ಹುಡುಗಿಯ ಹಾಡಿಗೆ ಹೋಗುತ್ತಾರೆ. ಅಲ್ಲಿ ಅಂಬಾಲದಲ್ಲಿ ಹುಡುಗಿಯ ಮನೆಯವರು ಹಾಗೂ ಹಾಡಿಯ ಯಜಮಾನ ಮತ್ತು ಗ್ರಾಮದ ಮುಖ್ಯಸ್ಥರು, ಸಂಬಂಧಿಕರು ಎಲ್ಲರೂ ಅಂಬಾಲದಲ್ಲಿ ಸೇರಿರುತ್ತಾರೆ. ಅಂದು ನಡೆಯುವ ಸಭೆಯಲ್ಲಿ ಹುಡುಗ ಮತ್ತು ಹುಡುಗಿಯ ಅಭಿಪ್ರಾಯವನ್ನು ಹಾಡಿಯ ಯಜಮಾನರು ಎಲ್ಲರ ಸಮ್ಮುಖದಲ್ಲಿ ಕೇಳುತ್ತಾರೆ. ಹುಡುಗಿಗೆ ಹುಡುಗ ಇಷ್ಟವಿಲ್ಲ ಎಂದು ಹೇಳಿದರೆ ಯಾವುದೇ ಕಾರಣಕ್ಕೂ ಹುಡುಗಿಯನ್ನಾಗಲಿ ಅಥವಾ ಹುಡುಗನನ್ನಾಗಲಿ ಒಪ್ಪಿಕೊಳ್ಳಲೇ ಬೇಕೆಂದು ಯಾರೂ ಅವರಿಬ್ಬರನ್ನು ಬಲವಂತಪಡಿಸುವಂತಿಲ್ಲ. ಹಾಗೆಯೇ ಹುಡುಗ-ಹುಡುಗಿ ಇಷ್ಟಪಟ್ಟರೆ ಹಿರಿಯರೆಲ್ಲರೂ ಸೇರಿ ಒಂದು ದಿನ ನಾವು ಬರುತ್ತೇವೆ ಎಂದು ದಿನಾಂಕವನ್ನು ನಿಗಧಿಪಡಿಸುತ್ತಾರೆ.

ಮದುವೆ ಸಂಪ್ರದಾಯ: ಯಜಮಾನರು ನಿಗದಿ ಮಾಡಿದ ದಿನಾಂಕದಂದು ಹುಡುಗನ ಕಡೆಯವರು ಹುಡುಗಿಯ ಹಾಡಿಗೆ ಬರುತ್ತಾರೆ. ಹಾಗೆಯೇ ಹುಡುಗನ ಕಡೆಯವರು ಹುಡುಗಿಗೆ ಎಂದು ತಂದಂತಹ ಬಟ್ಟೆ, ಆಭರಣಗಳನ್ನು ಅಂಬಾಲದಲ್ಲಿ ಹುಡುಗಿಯ ಹಾಡಿಯ ಯಜಮಾನನ ಕೈಗೆ ಕೊಡುತ್ತಾರೆ. ಯಜಮಾನರು ಅದನ್ನು ಹುಡುಗಿಯ ತಾಯಿಗೆ ನೀಡುತ್ತಾರೆ. ಹುಡುಗಿಗೆ ಗಂಡಿನ ಕಡೆಯಿಂದ ಪತಿಗೆ ಬಿಳಿ ಪಂಚೆ, ಟೇಪು, ಸೀರೆ, ಲಂಗ, ರವಿಕೆಯನ್ನು ತೊಡುವುದಿಲ್ಲ. ಮಣಿ, ಕಿವಿಗೆ, ಮೂಗಿಗೆ ಬೇಕಾದಂತಹ ಆಭರಣಗಳನ್ನು ತಂದಿರುತ್ತಾರೆ. ನಂತರ ಹುಡುಗಿಯನ್ನು ಸಿಂಗರಿಸಿ ಅಂಬಾಲಕ್ಕೆ ಕರೆತರುತ್ತಾರೆ. ಕಾಡುಕುರುಬರು ಹುಡುಗಿಗೆ ಮದುವೆಯ ಸಮಯದಲ್ಲಿ ಮೂರು ರೀತಿಯ ಮಣಿಯನ್ನು ಕಟ್ಟುತ್ತಾರೆ. ಕಪ್ಪು, ಬಿಳಿ, ಹಸಿರು ಯಾವುದಾದರೂ ಒಂದನ್ನು ತಂದಿರುತ್ತಾರೆ. ಹಾಗೆಯೇ ಹುಡುಗನಿಗೆ ಹುಡುಗಿಯ ಕಡೆಯವರೂ ಬಿಳಿ ಪಂಜೆ ಮತ್ತು ಶರ್ಟನ್ನು ತಂದುಕೊಡುತ್ತಾರೆ. ಮದುವೆಯು ಹುಡುಗಿಯ ಹಾಡಿಯ ಅಂಬಾಲದಲ್ಲಿ ನಡೆಯುತ್ತದೆ. ಅಂದು ಹುಡುಗಿಯ ಕೊರಳಿಗೆ ಹುಡುಗನ ಹಾಡಿಯ ಯಜಮಾನ ಹಾಗೂ ಹುಡುಗಿಯ ಹಾಡಿಯ ಯಜಮಾನ ಮಣಿಯನ್ನು ಹಾಕುತ್ತಾರೆ. ನಂತರ ಸಾಕ್ಷಿಯಾಗಿ ಹುಡುಗಿಯ ತಲೆಗೆ ಸ್ವಲ್ಪ ನೀರು ಹಾಕುತ್ತಾರೆ. ಹಿಂದಿನ ಕಾಲದಲ್ಲಿಯೂ ಇದೇ ರೀತಿಯಾದ ಪದ್ಧತಿಯನ್ನು ಅನುಸರಿಸುತ್ತಿದ್ದರು. ಈಗಲೂ ಇದೇ ಪದ್ಧತಿ ಮುಂದುವರೆದಿದೆ. ಈ ಮಣಿಯೇ ಕಾಡುಕುರುಬ ಮಹಿಳೆಯ ತಾಳಿಯಾಗಿರುತ್ತದೆ.

ಕಾಡುಕುರುಬರು ದೂರದ ಹಾಡಿಯಲ್ಲಿ ಹೆಣ್ಣನ್ನು ಮದುವೆ ಮಾಡಿಕೊಂಡು ಬರಬೇಕಾದಾಗ ಅವರು ಒಂದು ದಿನ ಮುಂಚಿತವಾಗಿಯೇ ಹೋಗಿ ಹುಡುಗಿಯ ಹಾಡಿಯಲ್ಲಿ ಉಳಿದುಕೊಳ್ಳುತ್ತಾರೆ. ಅಂದು ಬಂದಂತಹ ಅತಿಥಿಗಳಿಗೆ ಹುಡುಗಿಯ ಮನೆಯಲ್ಲಿ ಅಕ್ಕಿಯಿದ್ದರೆ ಎಲ್ಲರಿಗೂ ಅಡುಗೆಯನ್ನು ಮಾಡಿಸುತ್ತಾರೆ. ಬಡವರಾಗಿದ್ದರೆ ಹಾಡಿಯ ಜನರೆಲ್ಲಾ ತಮ್ಮ ಮನೆಯಲ್ಲಿರುವ ಆಹಾರವನ್ನು ತಂದು ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ಅಂದು ರಾತ್ರಿ ಗಂಡಿನ ಮನೆಯವರೆಲ್ಲ ಅಲ್ಲಿಯೇ ಉಳಿದುಕೊಳ್ಳುತ್ತಾರೆ. ನಂತರ ರಾತ್ರಿಯಲ್ಲಾ ಕುಣಿಯುವಾಟ ಆಡುತ್ತಾ ಕಾಲ ಕಳೆಯುತ್ತಾರೆ. ಬಂದಂತಹ ಅತಿಥಿಗಳಿಗೆ ಎಲೆ, ಅಡಿಕೆಯನ್ನು ಕೊಡುತ್ತಾರೆ. ಹತ್ತಿರದ ಹಾಡಿಯಲ್ಲಿ ವಿವಾಹವಾದರೆ ಬೆಳಗ್ಗೆ ಹೋಗಿ ಸಂಜೆಯ ಹೊತ್ತಿಗೆ ಹೆಣ್ಣನ್ನು ಮದುವೆ ಮಾಡಿಕೊಂಡು ಕರೆತರುತ್ತಿದ್ದರು.

ಕಾಡುಕುರುಬರು ಮದುವೆಯಲ್ಲಿ ಅವರವರ ಶಕ್ತಿಯನುಸಾರ ಊಟದ ವ್ಯವಸ್ಥೆಯನ್ನು ಮಾಡುತ್ತಾರೆ. ಊಟದ ವ್ಯವಸ್ಥೆಯನ್ನು ಮಾಡಲು ಅಶಕ್ತರಾಗಿದ್ದರೆ ಅವರು ಮದುವೆಗೆ ಬಂದಂತಹ ಅತಿಥಿಗಳಿಗೆಲ್ಲರಿಗೂ ಬೆಳಗ್ಗೆ ಎಲೆ, ಅಡಿಕೆ, ಹೊಗೆಸೊಪ್ಪು ಕೊಡುತ್ತಾರೆ. ಈ ಎಲೆ, ಅಡಿಕೆಯನ್ನು ಹುಡುಗ ಹುಡುಗಿಯೇ ಕೊಡಬೇಕು. ಎಲೆಯನ್ನು ಹುಡುಗಿ ಕೊಟ್ಟರೆ ಅಡಿಕೆಯನ್ನು ಹುಡುಗ ಕೊಡುತ್ತಾನೆ. ಈ ಪದ್ಧತಿ ಕಾಡುಕುರುಬರಲ್ಲಿ ಮೊದಲಿನಿಂದಲೂ ನಡೆದು ಬಂದಂತಹ ಪದ್ಧತಿಯಾಗಿದೆ.

ಕಾಡುಕುರುಬರು ಮದುವೆಯಾದ ಮೇಲೆ ಹುಡುಗಿಯನ್ನು ಹುಡುಗನ ಹಾಡಿಗೆ ಕರೆದುಕೊಂಡು ಹೋಗುತ್ತಾರೆ. ಮದುವೆಯಾದ ಹುಡುಗಿಯ ಜೊತೆಗೆ ಅಕ್ಕ, ತಂಗಿ, ಅವ್ವ ಈ ಮೂವರಲ್ಲಿ ಯಾರಾದರೂ ಒಬ್ಬರು ಹೋಗಬೇಕು, ಮತ್ತ್ಯಾರೂ ಹೋಗುವಂತಿಲ್ಲ. ಅಂದು ಮದುವೆಯಾಗಿ ಗಂಡನ ಮನೆಗೆ ಬಂದಂತಹ ಹೆಣ್ಣಿಗೆ ಗಂಡನ ಮನೆಯಲ್ಲಿ ಹೊಸಲು ದಾಟಿಸುತ್ತಾರೆ. ಒಂದು ಸೇರಿನಲ್ಲಿ ಅಕ್ಕಿ ಬೆಲ್ಲವನ್ನು ಇಟ್ಟು ಬಲಗಾಲಿನಲ್ಲಿ ಒದ್ದು ಹೆಣ್ಣು ಮನೆಯ ಒಳಗೆ ಬರಬೇಕು. ಮನೆಯೊಳಗೆ ಬಂದ ಮೇಲೆ ಮದುವೆಯಾದ ಹೆಣ್ಣು ಮನೆಯಲ್ಲಿ ಅಂದು ಹಿಟ್ಟು ಮತ್ತು ಸೊಪ್ಪು ಮಾಡಿ ತಿನ್ನಬೇಕು. ಹಿಟ್ಟು, ಸೊಪ್ಪನ್ನೇ ತಿನ್ನಬೇಕು. ಮಾಂಸಾಹಾರವನ್ನು ಕೇಳುವಂತಿಲ್ಲ. ಆ ನಂತರ ಹೆಣ್ಣು ಗಂಡನ ಕುಟುಂಬದವರ ಜೊತೆಯಲ್ಲಿಯೇ ವಾಸಿಸುತ್ತಾಳೆ. ಬೇರೆ ಹೋಗುವುದಿಲ್ಲ. ಬೇರೆ ಹೋಗಲೇ ಬೇಕು ಎಂದಾದರೆ ಎರಡು ಅಥವಾ ಮೂರು ವರ್ಷಗಳ ನಂತರ ಅವರು ಬೇರೆ ಹೋಗಿ ವಾಸಿಸಬಹುದು. ಒಂದು ಕುಟುಂಬದಲ್ಲಿ ಒಬ್ಬನೇ ಮಗನಿದ್ದರೆ ಅಲ್ಲಿ ಗಂಡು ಹೆಣ್ಣು ಬೇರೆ ಹೋಗುವಂತಿಲ್ಲ. ಒಂದೇ ಕುಟುಂಬದಲ್ಲಿ ನಾಲ್ಕೈದು ಗಂಡುಮಕ್ಕಳು ಇರುವಂತಹವರು ಮದುವೆಯಾದ ಮೇಲೆ ಬೇರೆ ಹೋಗಬಹುದು.

ಕಾಡುಕುರುಬರು ಕದ್ದು ವಿವಾಹವಾಗುವಂತಿಲ್ಲ. ಬೇರೊಂದು ಹಾಡಿಯಲ್ಲಿ ದೇವತಾ ಕಾರ್ಯಗಳು ನಡೆಯುವ ವೇಳೆಯಲ್ಲಿ ಆ ಹಾಡಿಯಿಂದ ಹುಡುಗಿಯನ್ನು ಹುಡುಗನು ಕದ್ದು ತಂದರೆ ತಪ್ಪು ತೀರಿಸಬೇಕು. ತಪ್ಪು ತೀರಿಸಲು ಒಂದು ರೂಪಾಯಿ ಐವತ್ತು ಪೈಸೆ ಹಾಗೂ ಕಬ್ಬಿಣದ ಚೂರನ್ನು ಅಂಬಾಲಕ್ಕೆ ಕೊಡಬೇಕು. 'ನಿನ್ನ ಕಾರ್ಯದ ದಿನ ನಿನಗೆ ಸಂಬಂಧಿಸಿದವರನ್ನು ನಾನು ಕರೆತಂದಿದ್ದೇನೆ. ನನ್ನ ದೇವರು ನೀವು ನನ್ನ ಕಾಪಾಡಬೇಕು' ಎಂದು ಹೇಳಿ ತಪ್ಪನ್ನು ತೀರಿಸುತ್ತಾರೆ.

ಅಂತರಜಾತಿ ವಿವಾಹಗಳು: ಕಾಡುಕುರುಬರಲ್ಲಿ ಇತ್ತೀಚಿನ ದಿನಗಳಲ್ಲಿ ಅಂತರಜಾತಿ ವಿವಾಹಗಳು ಕಂಡು ಬರುತ್ತಿವೆ. ಅಂತರಜಾತಿ ವಿವಾಹವನ್ನು ಕಾಡುಕುರುಬರು ಒಪ್ಪುವುದಿಲ್ಲ. ಯಾರಾದರೂ ಅಂತರಜಾತಿ ವಿವಾಹವಾದರೆ ಹಿಂದಿನ ಕಾಲದಲ್ಲಿ ಅಂತವರನ್ನು ಹಾಡಿಗೆ ಬಿಡಿಸಿ ಕೊಳ್ಳುತ್ತಿರಲಿಲ್ಲ. ಇಂದು ಅಂತರಜಾತಿ ವಿವಾಹವಾದರೂ ಅದೇ ಹಾಡಿಯಲ್ಲಿಯೇ ಇರುತ್ತಾರೆ. ಅದಕ್ಕೂ ಮೊದಲು ಕಾಡುಕುರುಬರ ಅಂಬಾಲದಲ್ಲಿ ತಪ್ಪನ್ನು ತೀರಿಸಬೇಕು.

ಕಾಡುಕುರುಬರಲ್ಲಿ ವಿಧವೆಯಾದ ಮಹಿಳೆಯನ್ನು ಯಾರು ಬೇಕಾದರೂ ಇಷ್ಟವಿದ್ದರೆ ಕಟ್ಟಿಕೊಳ್ಳಬಹುದು ಅವರಿಗೆ ಮತ್ತೆ ಪುರ್ನವಿವಾಹ ನಡೆಯುವುದಿಲ್ಲ. ಯಾವುದೇ ರೀತಿಯ ಶಾಸ್ತ್ರಗಳನ್ನು ಇವರಿಗೆ ಮಾಡುವುದಿಲ್ಲ. ವಿಧವೆಯ ಮೊದಲ ಮಕ್ಕಳು ಮೊದಲ ಗಂಡನ ವಂಶಕ್ಕೆ ಸೇರುತ್ತಾರೆ. ಎರಡನೇ ಗಂಡನ ಮಕ್ಕಳು ಅವನ ವಂಶಕ್ಕೆ ಸೇರುತ್ತಾರೆ.

ಜೇನುಕುರುಬರ ವಿವಾಹ

ಜೇನುಕುರುಬರಲ್ಲಿ ಹೆಚ್ಚಾಗಿ ಪ್ರೇಮವಿವಾಹಗಳು ಕಂಡುಬರುತ್ತವೆ. ಒಬ್ಬರನ್ನೊಬ್ಬರು ಇಷ್ಟಪಟ್ಟು ವಿವಾಹವಾಗುತ್ತಾರೆ. ಇಷ್ಟಪಟ್ಟಂತಹ ಹುಡುಗ ಹುಡುಗಿ ಬೇರೊಬ್ಬರನ್ನು ನೋಡುವಂತಿಲ್ಲ. ಮನೆಯಲ್ಲಿ ಇಷ್ಟವಿಲ್ಲದಿದ್ದರೆ ಅವರು ಮನೆ ಬಿಟ್ಟು ಹೋಗಿ ದೂರದಲ್ಲಿ ಒಂದು ವಾರ ಅಥವಾ ಒಂದು ತಿಂಗಳು ಕಾಡಿನಲ್ಲಿಯೇ ಇದ್ದು ಬರುತ್ತಾರೆ. ಆಗ ಬಂದಾಗ ತಂದೆ-ತಾಯಿ ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ಹಾಡಿಯ ಯಜಮಾನ ಅದನ್ನು ಒಪ್ಪಿಕೊಂಡು ಅವರ ವಿವಾಹವನ್ನು ಅಧಿಕೃತವಾಗಿ ಒಪ್ಪಿಕೊಳ್ಳುತ್ತಿದ್ದರು. ನಂತರ ಅವರು ಅದೇ ಹಾಡಿಯಲ್ಲಿಯೇ ಬೇರೊಂದು ಮನೆಯನ್ನು ಮಾಡುತ್ತಾರೆ. ಅಲ್ಲಿಯೇ ಇದ್ದು ಅವರ ತಂದೆ ತಾಯಿಯ ಮನ ಗೆದ್ದು ಹಿರಿಯರ ಆಶೀರ್ವಾದ ಪಡೆಯುತ್ತಾರೆ.

ಇಂದು ಜೇನುಕುರುಬರು ಒಂದು ಮನೆಯಲ್ಲಿ ಹೆಣ್ಣು ಇದ್ದರೆ ಗಂಡಿನ ಕಡೆಯವರು ಹೋಗಿ ಕೇಳಬಹುದು. ಹುಡುಗ-ಹುಡುಗಿಗೆ ಇಷ್ಟವಾದರೆ ಮದುವೆಯನ್ನು ಏರ್ಪಡಿಸುತ್ತಾರೆ. ಮದುವೆಯನ್ನು ಯಜಮಾನನ ಸಮ್ಮುಖದಲ್ಲಿಯೇ ಏರ್ಪಡಿಸುತ್ತಾರೆ. ಹಾಗೆಯೇ ಮದುವೆಯನ್ನು ೧೫ ಅಥವಾ ೧ ತಿಂಗಳ ಒಳಗೆ ನಡೆಸುತ್ತಿದ್ದರು. ಹುಡುಗಿಯನ್ನು ನೋಡಲು ಇಂತಿಷ್ಟೇ

ಜನರು ಹೋಗಬೇಕೆಂದಿಲ್ಲ. ಮದುವೆಯ ಖರ್ಚನ್ನು ಎಂಡೂ ಕಡೆಯವರು ನೋಡಿಕೊಳ್ಳುತ್ತಾರೆ ಅಥವಾ ಹೆಣ್ಣಿನ ಕಡೆಯವರಾದರೂ ನೋಡಿಕೊಳ್ಳುತ್ತಾರೆ. ಮದುವೆಯ ದಿನ ೧೨ ಕಂಬದ ಚಪ್ಪರವನ್ನು ಹುಡುಗಿಯ ಮನೆ ಮುಂದೆ ಹಾಕುತ್ತಾರೆ. ಮದುವೆಗೆ ಚಪ್ಪರ ಹಾಕುವ ಮೊದಲು ಐದು ಜನ ಮುತ್ತೈದೆಯರು ಕಳಸವನ್ನು ತಂದು ಹಣ್ಣು, ಕಾಯಿ, ಹೂ, ಗಂಧದ ಕಡ್ಡಿಯಿಂದ ಪೂಜಿಸಿದ ಮೇಲೆ ಚಪ್ಪರವನ್ನು ಹಾಕುತ್ತಾರೆ. ಮದುವೆಯ ದಿನ ಹುಡುಗಿಗೆ ಸೀರೆ, ಬಳೆ, ಓಲೆಗಳನ್ನು ನೀಡುತ್ತಾರೆ. ಆಗ ಹುಡುಗನಿಗೆ ಪಂಚೆ ಮತ್ತು ಶರ್ಟನ್ನು ನೀಡುತ್ತಾರೆ. ಮದುವೆಯಲ್ಲಿ ಹುಡುಗಿಯ ಕೊರಳಿಗೆ ತಾಳಿಯನ್ನು ಕಟ್ಟಲಾಗುತ್ತದೆ. ಆ ತಾಳಿಯು ಕರಿಮಣಿ ಮತ್ತು ಬಂಗಾರದ ತಾಳಿ ಆಗಿರಬೇಕು. ಆ ತಾಳಿಯನ್ನೇ ಕಟ್ಟಬೇಕು. ಹೆಣ್ಣು ಮದುವೆಯಾದ ಬಳಿಕ ಗಂಡನ ಮನೆಗೆ ಹೋಗಬೇಕು. ಆಗ ಗಂಡನ ಮನೆಯಲ್ಲಿ ಹೆಣ್ಣನ್ನು ತುಂಬಿಸಿಕೊಳ್ಳುವಾಗ ಹೊಸ್ತಿಲ ಮೇಲೆ ಒಂದು ಸೇರಿನ ತುಂಬಾ ಅಕ್ಕಿಯನ್ನು ಹಾಕಿ ಅದರ ಮೇಲೆ ಬೆಲ್ಲವನ್ನಿಟ್ಟು ಬಲಗಾಲಿನಿಂದ ಒದೆಸಿ ಹೆಣ್ಣನ್ನು ಮನೆ ತುಂಬಿಸಿಕೊಳ್ಳುತ್ತಾರೆ.

ಗಂಡು ಮನೆಯ ಒಳಗೆ ಹೋಗಬೇಕೆಂದರೆ ಹುಡುಗಿಯನ್ನು ಎಡ ಭುಜದ ಮೇಲೆ ಹೊತ್ತುಕೊಂಡು ಬಲಗೈಯಲ್ಲಿ ಒಂದು ಬಿಂದಿಗೆ ನೀರು ಹಿಡಿದು ಒಳ ಹೋಗಬೇಕು. ಆಗ ಮನೆಯ ಒಳಗಡೆ ರಾಗಿಯನ್ನು ಚೆಲ್ಲಿ ಅದರ ಮೇಲೆ ಬಟ್ಟೆಯನ್ನು ಹಾಕಲಾಗಿರುತ್ತದೆ. ಇದನ್ನು ತಿಳಿಯದ ಹುಡುಗ ಜಾರಿ ಬಿದ್ದಾಗ ಅವನನ್ನು ಎಲ್ಲರೂ ಗೇಲಿ ಮಾಡುತ್ತಾರೆ. ಕೆಲವರು ಚೆಂಡು ಆಟವನ್ನು ಆಡಿಸುತ್ತಾರೆ. ಹೆಣ್ಣು ಮದುವೆಯಾದ ಬಳಿಕ ಗಂಡನ ಮನೆಗೆ ಹೋಗಿ ಐದು ದಿನಗಳ ಕಾಲ ಇರಬೇಕು. ಆ ನಂತರ ತಾಯಿಯ ಮನೆಗೆ ಬಂದು ಐದು ದಿನಗಳ ಕಾಲ ಇರಬೇಕು. ಆ ನಂತರ ತನ್ನ ಗಂಡನ ಮನೆಯಲ್ಲೆ ಇರಬೇಕು.

ಮದುವಿಗೆ ಬಂದಂತಹ ಬಂಧು-ಬಾಂಧವರಿಗೆ ಮದುವೆಯ ದಿನ ಪಾಯಸ, ಅನ್ನ, ಸಾಂಬಾರು ಅಡುಗೆಯನ್ನು ಮಾಡಿಸುತ್ತಾರೆ. ಮದುವೆಯು ಹೆಣ್ಣಿನ ಮನೆಯಲ್ಲಿ ನಡೆದಂತಹ ಸಂದರ್ಭದಲ್ಲಿ ಗಂಡಿಗೆ ಮನೆಯಲ್ಲಿ ಬೀಗದ ಊಟವನ್ನು ಹಾಕಿಸುತ್ತಾರೆ. ಇರುವಂತಹವರು ಮಾಂಸಾಹಾರವನ್ನು ಹಾಕುತ್ತಾರೆ.

ವಿಧವ-ವಿವಾಹ: ಗಂಡ ಸತ್ತವರು ಅಥವಾ ಗಂಡನ ಬಿಟ್ಟವರು ಮರುವಿವಾಹವನ್ನು ಆಗುತ್ತಾರೆ. ಇವರ ವಿವಾಹಕ್ಕೆ ಯಾವುದೇ ರೀತಿಯ ಶಾಸ್ತ್ರಗಳು ಇರುವುದಿಲ್ಲ. ವಿಧವೆಯವರು ಇಷ್ಟಪಟ್ಟಂತಹ ವ್ಯಕ್ತಿಗಳ ಜೊತೆ ಕೂಡಿ ಬಾಳಬಹುದು. ವಿಧುರರು ಸಹ ಅಷ್ಟೇ. ಹಿಂದಿನ ಕಾಲದಲ್ಲಿ ಅಂತರಜಾತಿ ವಿವಾಹವಿರಲಿಲ್ಲ. ಒಂದು ವೇಳೆ ಆದರೆ ಅಂಥವರಿಗೆ ಹುಣಸೆ ಕಡ್ಡಿ ಅಥವಾ ತುರಸೆ ಕಡ್ಡಿಯಿಂದ ಹೊಡೆದು ಶಿಕ್ಷೆ ವಿಧಿಸುತ್ತಿದ್ದರು. ಈಗ ಅಂತರ ಜಾತಿ ವಿವಾಹವಾಗುತ್ತಾರೆ.

ಕಾಡುಕುರುಬರ ಹೆರಿಗೆಸಂಬಂಧಿ ಆಚರಣೆಗಳು

ಇನ್ನು ಹೆಣ್ಣು ಗರ್ಭ ದರಿಸಿದಾಗ ರೂಢಿಯಲ್ಲಿರುವ ಸಂಪ್ರದಾಯವನ್ನು ಗಮನಿಸಿದರೆ ತಾಯಿ ಮತ್ತು ಗರ್ಭದಲ್ಲಿರುವ ಮಗುವಿನ ಆರೋಗ್ಯಕ್ಕಾಗಿ ಗರ್ಭಿಣಿ ಸ್ತ್ರೀಗೆ ಕಾಡುಕುರುಬರಲ್ಲಿ ಅವರ ಶಕ್ತಿಯನುಸಾರ ಕೆಲವು ವಿಚಾರಗಳು ನಡೆದುಹೋಗುತ್ತವೆ. ಕಾಡುಕುರುಬರಲ್ಲಿ ಗರ್ಭವತಿಗೆ ಹೆರಿಗೆ ನೋವು ಪ್ರಾರಂಭವಾದಾಗ ಹೆರಿಗೆ ಮಾಡಿಸಲು ಅನುಭವ ಇರುವ ಹಿರಿಯ ಮಹಿಳೆಯನ್ನು(ಸೂಲಗಿತ್ತಿ) ಕರೆಯಲಾಗುತ್ತದೆ. ಹೆರಿಗೆಯನ್ನು ಎಲ್ಲಿ ಬೇಕಾದರೂ ಮಾಡಿಸಬಹುದು. ಆದರೆ ತಂದೆ ಮನೆಯಲ್ಲಿ ಹೆರಿಗೆಯಾದರೆ ತಪ್ಪು ತೀರಿಸಬೇಕು. ಹಾಗೆಯೇ ಗಂಡನ ಅಪ್ಪನ ಮನೆಯಲ್ಲಿಯೂ ಹೆರಿಗೆಯಾದರೆ ತಪ್ಪು ತೀರಿಸಬೇಕು. ಹಾಗಾಗಿ ಹೆರಿಗೆಯನ್ನು ಗಂಡ-ಹೆಂಡತಿ ಬೇರೆ ಮನೆ ಮಾಡಿ ಆ ಮನೆಯಲ್ಲಿ ಗರ್ಭಿಣಿ ಹೆಂಗಸಿಗೆ ಹೆರಿಗೆಯನ್ನು ಮಾಡಿಸಬಹುದು. ಆಗ ಅಲ್ಲಿ ಹೆರಿಗೆಯಾದರೆ ಯಾವುದೇ ರೀತಿಯ ತಪ್ಪು ತೀರಿಸುವಂತಿಲ್ಲ. ನಂತರ ಗರ್ಭಿಣಿಯನ್ನು ಎರಡು ಕುಟುಂಬದವರು ಸೇರಿ ಆರೈಕೆ ಮಾಡಬಹುದು ಹಾಗೂ ಹಾಡಿಯವರು ಸಹ ನೋಡಿಕೊಳ್ಳಬಹುದು. ಹೆರಿಗೆ ಮತ್ತು ಬಾಣಂತನವನ್ನು ಗಂಡನ ಮನೆಯಲ್ಲಿಯೇ ಮಾಡಬೇಕು.

ಕಾಡುಕುರುಬರಲ್ಲಿ ಎಷ್ಟೇ ಹೆರಿಗೆಗಳಾದರೂ ಗಂಡ-ಹೆಂಡತಿ ಪ್ರತ್ಯೇಕವಾಗಿ ವಾಸ ಮಾಡುವ ಮನೆಯಲ್ಲಿಯೇ ಆಗಬೇಕು. ತಾಯಿಯ ಮನೆಯಲ್ಲಿ ಯಾವುದೇ ಕಾರ್ಯಗಳಾಗುವಂತಿಲ್ಲ. ಕಾಡುಕುರುಬರಲ್ಲಿ ಗರ್ಭಿಣಿ ಹೆಂಗಸಿಗೆ ಯಾವುದೇ ರೀತಿಯ ಸೀಮಂತ ಕಾರ್ಯವನ್ನು ಮಾಡುವುದಿಲ್ಲ. ಹೆರಿಗೆಯ ನಂತರ ಮಗು ಮತ್ತು ತಾಯಿಗೆ ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ.

ಕಾಡುಕುರುಬರಲ್ಲಿ ಇಂದು ಹೆರಿಗೆಯನ್ನು ಗಂಡನ ಮನೆಯಲ್ಲಿಯೇ ಮಾಡಿಸುತ್ತಾರೆ. ಆದರೆ ಇಂದು ಅವರು ನಗರಗಳಿಗೆ ಹತ್ತಿರ ಬಂದಿರುವ ಕಾರಣ ಆಸ್ಪತ್ರೆಯಲ್ಲಿ ಹೆರಿಗೆಯಾಗುತ್ತದೆ. ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಈಗಲೂ ಸಹ ಕಾಡುಕುರುಬರು ತಮ್ಮ ದೇವರಿಗೆ ತಪ್ಪು ಕೊಡುತ್ತಾರೆ.

ಬಾಣಂತಿ ಆರೈಕೆ: ಹೆರಿಗೆಯಾದ ನಂತರ ಬಾಣಂತಿಗೆ ಮೊದಲು ಆಡಿನ ಮಾಂಸವನ್ನು ಕೊಡುತ್ತಾರೆ. ಹಿಂದಿನ ಕಾಲದಲ್ಲಿ ಕಪ್ಪುಮೂತಿಯ ಕೋತಿಯ ಮಾಂಸವನ್ನು ನೀಡುತ್ತಿದ್ದರು ಮತ್ತು ಕೋಳಿಯ ಮಾಂಸವನ್ನು ಸಹ ನೀಡುತ್ತಿದ್ದರು. ಅಲ್ಲದೇ ಮಗು ಚೆನ್ನಾಗಿ ಬೆಳೆಯಲು ಮೂಲಗೆಣಸು, ಅಕ್ಕಿಗೆಣಸು, ನಾರಗೆಣಸು, ನಾಲ್ಕೈದು ತರಹದ ಗೆಣಸನ್ನು ಬಾಣಂತಿಗೆ ನೀಡುತ್ತಾರೆ.

ಬಾಣಂತಿಗೆ ಅನ್ನ, ಕಾಳುಮೆಣಸಿನ ಪುಡಿ ಅಥವಾ ದಪ್ಪಮೆಣಸಿನ ಕಾಯಿಯನ್ನು ಉರಿದು ಪುಡಿ ಮಾಡಿ ಅನ್ನದ ಜೊತೆಗೆ ಕೊಡುತ್ತಾರೆ. ಏಳು ದಿನದವರೆಗೆ ಈ ಆಹಾರವನ್ನು ಬಾಣಂತಿಯು ತಿನ್ನಬೇಕು.

ಬಾಣಂತಿಗೆ ಕುಚ್ಚಲಕ್ಕಿಯನ್ನು ಸಹ ಕೊಡುತ್ತಾರೆ. ತಿಂಗಳವರೆಗೂ ಅನ್ನವನ್ನೇ ನೀಡುತ್ತಾರೆ. ಬಾಣಂತಿಗೆ ಮತ್ತು ಮಗುವಿಗೆ ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ಬಿಸಿ ನೀರು ಹಾಕುತ್ತಾರೆ.

ಕಾಡುಕುರುಬರ ಸೂತಕ ಕಳೆಯುವ ಆಚರಣೆ: ಕಾಡುಕುರುಬರು ಮಗು ಹುಟ್ಟಿದ ೭ ದಿನಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ೭ ದಿನಗಳವರೆಗೂ ಆ ಮನೆಯಲ್ಲಿ ಯಾರೂ ಅಡುಗೆ ಮಾಡುವಂತಿಲ್ಲ. ಊಟ ಮಾಡುವಂತಿಲ್ಲ ಮತ್ತು ನೀರು ಕುಡಿಯುವಂತಿಲ್ಲ. ಹಣವಂತರು ಏಳು ದಿನ ಕಳೆದ ನಂತರ ಸೂತಕ ತೆಗೆಯಲು ಬೇಕಾದ ಎಲ್ಲಾ ಪೂಜಾಸಾಮಗ್ರಿಗಳನ್ನು ತರುತ್ತಾರೆ. ಹಣ್ಣು, ಹೂ, ಕಾಯಿ, ಗಂಧದ ಕಡ್ಡಿ, ಮಗುವಿಗೆ ಹೊಸ ಬಟ್ಟೆಯನ್ನು ಸಹ ತರುತ್ತಾರೆ. ಅಂದು ಹಾಡಿಯ ಹೆಣ್ಣು ಮಕ್ಕಳೆಲ್ಲ ಸೇರಿ ಸೂತಕದ ಮನೆಯನ್ನು ಸಾರಿಸಿ ಶುಚಿಗೊಳಿಸುತ್ತಾರೆ. ನಂತರ ಧೂಪವನ್ನು ಹಾಕಿ ಹಾಡಿಯ ಎಲ್ಲಾ ಹೆಣ್ಣು ಮಕ್ಕಳಿಗೆ ಸುದ್ದಿಯನ್ನು ಮುಟ್ಟಿಸುತ್ತಾರೆ. ಇವರಲ್ಲಿ ತೊಟ್ಟಿಲು ಕಟ್ಟುವ ಶಾಸ್ತ್ರವಿಲ್ಲ.

ಹಾಗೆಯೇ ಕಾಡುಕುರುಬರಲ್ಲಿ ಹೆಣ್ಣಾಗಲಿ ಅಥವಾ ಗಂಡಾಗಲಿ ಜನಿಸಿದರೆ ಇವರು ಏಳು ದಿನಗಳವರೆಗೆ ಸೂತಕವನ್ನು ಆಚರಿಸುತ್ತಾರೆ.

ನಂತರ ಹಾಡಿಯಲ್ಲಿ ಈ ಸುದ್ದಿಯನ್ನು ಎಲ್ಲರಿಗೂ ತಿಳಿಸಿ ಪ್ರತಿಯೊಂದು ಮನೆಗೂ ಧೂಪವನ್ನು ಕೊಡಬೇಕು. ಇದನ್ನು ಅಜ್ಜ ಅಡಗ ಎನ್ನುತ್ತಾರೆ. ಅಂಬಾಲವನ್ನು ಶುಚಿ ಮಾಡಿ ಇಟ್ಟಿರುತ್ತಾರೆ. ತಂದೆ–ತಾಯಿ ಅಥವಾ ಅತ್ತೆ–ಮಾವನ ಮನೆಯಲ್ಲಿ ಹೆರಿಗೆಯಾದರೆ ದೇವರು ಬರುವುದಿಲ್ಲ. ಅಂಬಾಲದಲ್ಲಿ ಮೆಣಸಿನ ಪುಡಿಯನ್ನು ಮತ್ತು ಒಂದೊಂದು ಹಿಡಿ ಅಕ್ಕಿಯನ್ನು ಹಾಕಿ ಅನ್ನ ಮಾಡಿರುತ್ತಾರೆ. ಅದನ್ನು ಮಕ್ಕಳಿಗೆ ತಿನ್ನಿಸುತ್ತಾರೆ. ಅಂಬಾಲದಲ್ಲಿ ೧೦ರಿಂದ ೮ ಕಟ್ಟು ಎಲೆ ಮತ್ತು ಅಡಿಕೆಯನ್ನು ಇಟ್ಟಿರುತ್ತಾರೆ. ಅದನ್ನು ಅಂಬಾಲದಲ್ಲಿ ಯಜಮಾನನ ಕೈಗೆ ಕೊಡುತ್ತಾರೆ. ಇನ್ನೂ ಉಳಿದ ಎಲೆ ಅಡಿಕೆಯನ್ನು ಸೂತಕದ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಅಂಬಾಲದಲ್ಲಿ ಹಾಕಿರುವ ಎಲೆ ರಾಶಿಯಲ್ಲಿ ಕಾಡುಕುರುಬರ ಎಲ್ಲಾ ಮನೆತನಗಳಿಗೆ ಒಂದೊಂದು ಎಡೆಯನ್ನು ಇಡುತ್ತಾರೆ. ೫ ಎಲ ಮಗೆಯವರು ೫ ಎಲೆಯ ಎಡೆಯನ್ನು ಮತ್ತು ೩ ಎಲ ಮಗೇಯವರು ೩ ಎಲೆಯ ಎಡೆಯನ್ನು ತೆಗೆದುಕೊಳ್ಳುತ್ತಾರೆ. ನಂತರ ಅಜ್ಜಿಗೆ ಒಂದು ಎಡೆಯನ್ನು ಇಟ್ಟಿರುತ್ತಾರೆ. ಅದನ್ನು ಸೂತಕದ ಮನೆಗೆ ಕಳುಹಿಸುತ್ತಾರೆ. ಸೂತಕದ ಮನೆಯಲ್ಲಿಯೂ ಸಹ ಅದೇ ರೀತಿಯಾಗಿ ಅಜ್ಜಿಯ

ಎಡೆಯನ್ನು ಸೂತಕದ ಮನೆಗೆ ಕಳುಹಿಸಿದ ನಂತರ ಅಜ್ಜನ ಎಡೆಯನ್ನು ಅಂಬಾಲಕ್ಕೆ ಕಳುಹಿಸುತ್ತಾರೆ.

ಸೂತಕ ಕಳೆಯುವ ದಿವಸ ನಾಲ್ಕು ಬಾಟಲಿ ಎಣ್ಣೆಯನ್ನು(ಕೊಬ್ಬರಿ ಎಣ್ಣೆ ಮತ್ತು ಅರಳೆ ಎಣ್ಣೆ) ತಂದಿರುತ್ತಾರೆ. ಎರಡು ಬಾಟಲಿ ಎಣ್ಣೆಯನ್ನು ಸೂತಕದ ಮನೆಯಲ್ಲಿ ಮತ್ತೆರಡು ಬಾಟಲಿ ಎಣ್ಣೆಯನ್ನು ಅಂಬಾಲದಲ್ಲಿ ಇಟ್ಟಿರುತ್ತಾರೆ. ಯಾರಿಗೆ ಯಾವುದು ಇಷ್ಟವೋ ಅದನ್ನು ತಲೆಗೆ ಹಾಕಿಕೊಳ್ಳುತ್ತಾರೆ. ಅದಕ್ಕೂ ಮುಂಚೆ ಅವರು ನೀರನ್ನು ಮೀಯದು ಬಂದಿರಬೇಕು. ಅದೇ ರೀತಿ ಅಲ್ಲಿ ಹೆಣ್ಣುಮಕ್ಕಳು ಸಹ ಸೂತಕದ ಮನೆಯಲ್ಲಿ ತಮಗೆ ಇಷ್ಟವಾದ ಎಣ್ಣೆಯನ್ನು ಹಚ್ಚಿಕೊಳ್ಳುತ್ತಾರೆ. ನೀರನ್ನು ಮೀಯದೆ ಇರುವವರು ಎಣ್ಣೆಯನ್ನು ಹಾಕುವುದಿಲ್ಲ. ಅಂದು ಎಲ್ಲರ ಮನೆ ಮುಂದೆ ಸಗಣಿ(ತೊಪ್ಪೆ) ನೀರನ್ನು ಹಾಕಿರುತ್ತಾರೆ. ಎಲ್ಲರ ಮನೆಗೂ ಧೂಪವನ್ನು ತೆಗೆದುಕೊಂಡು ಹೋಗಿ ಇಡಬೇಕು. ಅದನ್ನು ಇಟ್ಟಾಗ ಅಲ್ಲಿಗೆ ಸೂತಕ ಕಳೆಯಿತು ಎಂದಾಗುತ್ತದೆ. ನಂತರ ಚಾವಡಿಯಲ್ಲಿರುವವರಿಗೆಲ್ಲ ಎಲೆ, ಅಡಿಕೆಯನ್ನು ಹಂಚಲಾಗುತ್ತದೆ. ಎಲೆ, ಅಡಿಕೆಯನ್ನು ಎಲ್ಲರಿಗೂ ಕೊಡಬೇಕು. ಬರದೇ ಇದ್ದರೂ ಸಹ ಎಲೆ, ಅಡಿಕೆಯನ್ನು ಅವರ ಮನೆಗೆ ತೆಗೆದುಕೊಂಡು ಹೋಗಿ ಕೊಡಬೇಕು. ಹಾಡಿಯ ಯಾರಾದರೂ ಸಹ ಎಲೆ-ಅಡಿಕೆಯನ್ನು ಹಂಚಬಹುದು.

ಜೇನುಕುರುಬರ ಹೆರಿಗೆ ಆಚರಣೆ

ಜೇನುಕುರುಬರಲ್ಲಿ ಹಿಂದಿನ ಕಾಲದಲ್ಲಿ ಹೆರಿಗೆಗಳು ಮನೆಯಲ್ಲಿಯೇ ಆಗುತ್ತಿದ್ದವು. ಗರ್ಭಿಣಿ ಹೆಂಗಸನ್ನು ಮನೆಯಲ್ಲಿಯೇ ಬೇರೊಂದು ಕೋಣೆಯಲ್ಲಿ ಇಟ್ಟಿರುತ್ತಾರೆ. ಹೆರಿಗೆ ಸಮಯದಲ್ಲಿ ಮನೆಯ ಹೊರಗೆ ಗುಡಿಸಲು ಹಾಕಿ ಹೆರಿಗೆಯನ್ನು ಸೂಲಗಿತ್ತಿಯಿಂದ ಇಲ್ಲವೇ ಅನುಭವಿ ಹಿರಿಯ ಮಹಿಳೆಯರಿಂದ ಮಾಡಿಸುತ್ತಿದ್ದರು. ತುರ್ತಾಗಿ ಹೆರಿಗೆ ಆಗಬೇಕಾದ ಸಂದರ್ಭದಲ್ಲಿ ಸೀರೆಯಲ್ಲೆ ಗುಡಿಸಿಲ ಹಾಗೇ ನಿರ್ಮಿಸಿಕೊಂಡು ಹೆರಿಗೆಯನ್ನು ಮಾಡಿಸುತ್ತಾರೆ. ಹೆರಿಗೆಯಾದ ನಂತರ ಬಾಣಂತಿ ಮತ್ತು ಮಗುವನ್ನು ಬೇರೊಂದು ಕೋಣೆಯಲ್ಲಿ ಇರಿಸುತ್ತಾರೆ. ಮನೆಯೊಳಗೂ ಸಹ ಹೆರಿಗೆಯನ್ನು ಮಾಡುತ್ತಾರೆ. ಬಾಣಂತಿ ಮತ್ತು ಮಗುವನ್ನು ನೋಡಿಕೊಳ್ಳಲು ಹಿರಿಯರು ಇರುತ್ತಾರೆ.

ಬಾಣಂತಿ ಆರೈಕೆ: ಜೇನುಕುರುಬರು ಬಾಣಂತಿಗೆ ೮ ಅಥವಾ ೧೦ ದಿನದವರೆಗೆ ಉಂಡೆ ಮೆಣಸು, ಬೆಳ್ಳುಳ್ಳಿ, ಜೀರಿಗೆ, ಕೈಸುಂಡೆ, ಹಸಿಶುಂಠಿ ಇವಿಷ್ಟನ್ನು ಹಾಕಿ ಅರೆದು ಬೇಯಿಸಿ, ರಾಗಿ ಹುಳಿಯನ್ನು ಬೇಯಿಸಿ ಪುನಃ ಅದನ್ನು ಸಾಂಬಾರಿಗೆ ಹಾಕಲಾಗುತ್ತದೆ. ಈ ಸಾಂಬಾರನ್ನು ಹಿಟ್ಟು ಮತ್ತು ಅನ್ನದ ಜೊತೆಗೆ ಕೊಡುತ್ತಾರೆ. ಕೈಸುಂಡೆ ಕಾಯಿಯ ಸಾರು ಬಾಣಂತಿಗೆ ಆಗಿ ಬರದೇ ಇದ್ದರೆ ಉಂಡೆ ಮೆಣಸು, ಬೆಳ್ಳುಳ್ಳಿ, ಉಪ್ಪನ್ನು ಹಾಕಿ

ಕುಟ್ಟಿ ಪುಡಿ ಮಾಡಿ ಕೊಡಲಾಗುತ್ತದೆ. ಈ ಪುಡಿಯೂ ಆಗದೇ ಇದ್ದರೆ ೧೦ ಅಥವಾ ೧೫ ದಿನದ ನಂತರ ಬೇಳೆ ಸಾರನ್ನು ಕೊಡುತ್ತಾರೆ ಹಾಗೂ ಹುರುಳಿ ಸಾರನ್ನು ನೀಡುತ್ತಾರೆ. ಭತ್ತದ ಅಕ್ಕಿ, ಸ್ಟೀಮ್ ಅಕ್ಕಿ, ಸೊಸೈಟಿ ಅಕ್ಕಿ, ಯಾವ ಅಕ್ಕಿ ಬಾಣಂತಿಗೆ ಆಗಿ ಬರುತ್ತವೆಯೋ ಆ ಅಕ್ಕಿಯನ್ನು ಅನ್ನ ಮಾಡಿ ಕೊಡುತ್ತಾರೆ.

ಬಾಣಂತಿಗೆ ಹೊಟ್ಟೆನೋವು ಬಂದರೆ ಕೈಬೇರನ್ನು ಕೊಡುತ್ತಾರೆ. ಗಾಳಿಸೊಪ್ಪನ್ನು ಸಹ ಹೊಟ್ಟೆನೋವಿಗೆ ಕೊಡುತ್ತಾರೆ. ಗಾಳಿಸೊಪ್ಪಿನ ಜೊತೆಗೆ ನಾಗದಾಳಿ ಸೊಪ್ಪನ್ನು ಸೇರಿಸಿ ಕಷಾಯ ಮಾಡಿ ಬಾಣಂತಿಗೆ ಕುಡಿಸಿದರೆ ಹೊಟ್ಟೆನೋವು ಗುಣಮುಖವಾಗುತ್ತದೆ. ಮಕ್ಕಳಿಗೂ ಸಹ ಈ ಕಷಾಯವನ್ನು ಕೊಡುತ್ತಾರೆ. ಜ್ವರ, ಕೆಮ್ಮು, ನೆಗಡಿಗೂ ಸಹ ಈ ಔಷಧಿಯನ್ನು ನೀಡುತ್ತಾರೆ.

ಜೇನುಕುರುಬರ ಹೆರಿಗೆಯ ಸೂತಕದ ಆಚರಣೆ: ಜೇನುಕುರುಬರು ಹೆರಿಗೆಯಾದ ಮೇಲೆ ಮೂರು ತಿಂಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ನಾಲ್ಕನೇ ತಿಂಗಳಲ್ಲಿ ಸೂತಕ ತೆಗೆಯುತ್ತಾರೆ. ನಾಲ್ಕನೇ ತಿಂಗಳಿನಲ್ಲಿ ಹೊಸ ಮಡಿಕೆ ಮತ್ತು ಬಟ್ಟೆಯನ್ನು ತಂದು ಜನರನ್ನೆಲ್ಲ ಕರೆಯಿಸಿ ಅಂದಿನ ದಿನವೇ ನಾಮಕರಣವನ್ನು ಮಾಡುತ್ತಾರೆ. ಮಗುವಿಗೆ ಈ ಸಮಯದಲ್ಲಿ ತೊಂದರೆ ಕಾಣಿಸಿಕೊಂಡರೆ ದೇವರನ್ನು ಕರೆಯಿಸಿ ಶಾಸ್ತ್ರವನ್ನು ಕೇಳಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ.

ಕೆಲವು ಜೇನುಕುರುಬರಲ್ಲಿ ೩ ತಿಂಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ಆ ಸಮಯದಲ್ಲಿ ಬಾಣಂತಿಯು ಮನೆಯ ಒಳಗಡೆ ಇರುವಂತಿಲ್ಲ. ಮನೆಯ ಹೊರಗಡೆ ಗುಡಿಸಿಲು ಹಾಕಿ ಇರಿಸಲಾಗುತ್ತದೆ. ಹಾಡಿಯ ಯಜಮಾನ ಪೂಜೆ ಮಾಡಿ ಗುಡಿಸಿಲನ್ನು ಹಾಕಿ ಕೊಡುತ್ತಾನೆ.

ಕಾಡುಕುರುಬರಲ್ಲಿ ಸಾವಿಗೆ ಸಂಬಂಧಿಸಿದ ಆಚರಣೆಗಳು

ಮರಣವೆಂಬುದು ಯಾವುದೇ ಒಂದು ಜೀವಿಯ ಜೀವಿತದ ಕೊನೆಯ ಘಟ್ಟ. ಜೀವಿಯೊಂದು ಜನಿಸಿದ ಮೇಲೆ ಅದು ಸಾಯಲೇಬೇಕಾದ್ದು ಪ್ರಕೃತಿಯ ನಿಯಮ. ಇದು ಮನುಷ್ಯನಿಗೂ ಅನ್ವಯವಾಗುವಂಥದ್ದು. ವ್ಯಕ್ತಿಯು ಸತ್ತ ನಂತರ ಬುಡಕಟ್ಟುಗಳಲ್ಲಿ ಹಲವಾರು ವಿಧಿ-ವಿಧಾನಗಳನ್ನು, ವಿಶಿಷ್ಟ ಆಚರಣೆಗಳನ್ನು ಅನುಸರಿಸುತ್ತಾರೆ. ಇದು ಭಾರತೀಯ ಸಮುದಾಯಗಳಲ್ಲಿ ಒಂದು ಸಮುದಾಯಕ್ಕಿಂತ ಇನ್ನೊಂದು ಸಮುದಾಯಕ್ಕೆ ಭಿನ್ನವಾಗಿರುತ್ತದೆ.

ಕಾಡುಕುರುಬರಲ್ಲಿ ವ್ಯಕ್ತಿಯು ಸತ್ತಾಗ ಶವವನ್ನು ಮಣ್ಣಿನಲ್ಲಿ ಹೂಳುವ ಸಂಪ್ರದಾಯ ರೂಢಿಯಲ್ಲಿದೆ. ಹಾಡಿಯಲ್ಲಿ ಸಾವು ಸಂಭವಿಸಿದಾಗ ಹಾಡಿಯವರೆಲ್ಲರಿಗೂ ತಿಳಿಸಲಾಗುತ್ತದೆ.

'ನಮ್ಮ ಮನೆಯಲ್ಲಿ ಸಾವು ಆಗಿದೆ ಬನ್ನಿ' ಎಂದು ಕರೆಯುತ್ತಾರೆ. ಬರುವವರು ಸಾವಿನ ಮನೆಗೆ ಬರುತ್ತಾರೆ. ನಂತರ ಕಾಡಿಗೆ ಹೋಗಿ ಬಿದಿರನ್ನು ಕಡಿದುಕೊಂಡು ಬರಬೇಕು. ಒಂದೇ ಬಿದಿರಿನ ಬೊಂಬಿನಲ್ಲಿ ಚಟ್ಟವನ್ನು ಕಟ್ಟಬೇಕು. ಬಿದಿರನ್ನು ಕಡಿಯಲು ಹೋಗುವಾಗ ಕೇವಲ ಕಬ್ಬಿಣದ ಕೊಡಲಿಯನ್ನು ಮಾತ್ರ ಒಯ್ಯುತ್ತಾರೆ. ಕಾವನ್ನು ಅಲ್ಲಿಯೇ ಬಿಟ್ಟು ಹೋಗುತ್ತಾರೆ. ಕಾರಣ ಅದಕ್ಕೂ ಸೂತಕದ ಛಾಯೆ ಬೀಳುತ್ತದೆ ಎಂಬ ನಂಬಿಕೆ. ಕಾವನ್ನು ಕಾಡಿನಲ್ಲಿಯೇ ತೆಗೆದುಕೊಳ್ಳಬೇಕು. ಬಿದಿರನ್ನು ಕಡಿಯುವಾಗ ಗಾಯವಾಗಬಾರದು ಗಾಯವಾದರೆ ಬೇಗನೇ ವಾಸಿಯಾಗುವುದಿಲ್ಲವೆಂಬ ನಂಬಿಕೆಯಿದೆ. ಆಗಾಗಿ ಬಿದಿರು ತರಲು ತುಂಬಾ ಚಾಕಚಕ್ಯತೆಯಿಂದ ಇರುವ ವ್ಯಕ್ತಿಯನ್ನು ಕಳುಹಿಸಲಾಗುತ್ತದೆ. ಈ ಎಲ್ಲ ಸಾಮಗ್ರಿಗಳನ್ನು ಕಾಡಿನಿಂದಲೇ ತರಬೇಕು. ತಂದ ನಂತರ ಎರಡು ದೊಡ್ಡ ಬೊಂಬುಗಳಿಗೆ ಅಡ್ಡವಾಗಿ ಒಂಬತ್ತು ಬಿದಿರಿನ ಹಚ್ಚೆಗಳನ್ನು ನಾರಿನಿಂದ ಕಟ್ಟಲಾಗುತ್ತದೆ. ಒಪ್ಪ ಮಾಡದೇ ಯಾರೂ ನೀರು ಮೀಯುವಂತಿಲ್ಲ. ದೊಡ್ಡ ಮಕ್ಕಳಿಗೂ ಸಹ ಇದೇ ರೀತಿಯ ೭ ಹಚ್ಚೆಯ ಚಟ್ಟವನ್ನು ಕಟ್ಟುತ್ತಾರೆ. ಆದರೆ ಎಳೆಯ ಮಕ್ಕಳು ಸತ್ತರೆ ಅವರನ್ನು ಬಿಳಿಯ ಬಟ್ಟೆಯಲ್ಲಿ ಸುತ್ತಿ ಕೈಯಲ್ಲಿ ಎತ್ತಿಕೊಂಡು ಹೋಗುತ್ತಾರೆ. ನಂತರ ಅರಿಶಿನ ನೀರನ್ನು ಕಾಯಿಸಲಾಗುತ್ತದೆ. ಹಣ್ಣು, ಕಾಯಿ, ಗಂಧದ ಕಡ್ಡಿ, ಹೂ ತಂದು ಶವವನ್ನು ಪೂಜೆ ಮಾಡಲಾಗುತ್ತದೆ. ಅದಕ್ಕೂ ಮೊದಲು ಶವಕ್ಕೆ ಬಿಳಿಯ ಪಂಚೆಯನ್ನು ಹೊದಿಸಲಾಗುತ್ತದೆ. ನಂತರ ಹೆಣವನ್ನು ಹೊತ್ತೊಯ್ಯುವಾಗ ಅರಿಶಿನದ ನೀರಿನಿಂದ ತೊಳೆದು ಬಟ್ಟೆಯನ್ನು ಹೊದಿಸಿ ಮಸಣಕ್ಕೆ ಹೊತ್ತೊಯ್ಯುವಾಗ ಯಜಮಾನ ಮುಂದೆ, ಅವನ ಹಿಂದೆ ಗಂಡಸರು, ಗಂಡಸರ ಹಿಂದೆ ಶವ, ಶವದ ಹಿಂದೆ ಹೆಣ್ಣು ಮಕ್ಕಳು ಬರುತ್ತಾರೆ.

ನಂತರ ಯಜಮಾನ ಜಾಗವನ್ನು ತೋರಿಸಿ ಶಾಸ್ತ್ರಕ್ಕೆ ಜಾಗದಲ್ಲಿ ಒಂದು ಸಲ ಗಿಡಗಂಟೆಗಳನ್ನು ಸ್ವಲ್ಪ ಶುಚಿಗೊಳಿಸುತ್ತಾನೆ. ನಂತರ ಬೇರೆಯವರು ಆ ಜಾಗವನ್ನು ಶುಚಿಗೊಳಿಸಿ ಗುಂಡಿಯನ್ನು ತೋಡುತ್ತಾರೆ. ಸತ್ತ ವ್ಯಕ್ತಿಯ ಉದ್ದದ ಅಳತೆಯನ್ನು ತೆಗೆದುಕೊಂಡು ಗುಂಡಿಯನ್ನು ತೆಗೆಯುತ್ತಾರೆ. ಮೂರು ಅಡಿ ಆಳವಾಗಿ ಗುಂಡಿಯನ್ನು ತೋಡುತ್ತಾರೆ. ಅಥವಾ ಆರು ಅಡಿಯ ಆಳಕ್ಕೆ ಗುಂಡಿಯನ್ನು ತೆಗೆಯುತ್ತಾರೆ. ಉದ್ದ ಅಗಲ ಇಂತಿಷ್ಟೇ ಇರಬೇಕು ಎಂದೇನೂ ಇಲ್ಲ. ಸತ್ತವನನ್ನು ಯಜಮಾನ ಪೂಜೆ ಮಾಡಿದ ಬಳಿಕ ಶವವನ್ನು ಗುಂಡಿಯಲ್ಲಿ ಇಡಲಾಗುತ್ತದೆ. ಹಾಗೆಯೇ ಸತ್ತವನು ಬಳಸುತ್ತಿದ್ದ ಎಲ್ಲಾ ವಸ್ತುಗಳನ್ನು ಗುಂಡಿಯಲ್ಲಿ ಇಡಲಾಗುತ್ತದೆ. ಗುಂಡಿಯಲ್ಲಿ ಇಟ್ಟ ಮೇಲೆ ಯಜಮಾನ ೫ ಇಡಿ ಮಣ್ಣು ಕೊಟ್ಟ ಮೇಲೆ ಉಳಿದವರು ಮಣ್ಣನ್ನು ಕೊಡುತ್ತಾರೆ. ನಂತರ ಎಲ್ಲಾ ಮಣ್ಣನ್ನು ಎಳೆದು ಮುಳ್ಳು ಅಥವಾ ಕಲ್ಲನ್ನು ಇಟ್ಟು ಬರುತ್ತಾರೆ. ತೆಗೆದುಕೊಂಡು ಹೋಗಿದ್ದ ನಾರು ಎಲ್ಲವನ್ನು ಸಮಾಧಿ ಮೇಲೆಯೇ ಹಾಕಬೇಕು. ಶವವನ್ನು ಮಣ್ಣು ಮಾಡಿ ಬಂದ ಮೇಲೆ

ಎಲ್ಲರೂ ನೀರು ಮೀಯುತ್ತಾರೆ. ಮೊದಲೆಲ್ಲ ಕೆರೆ ಅಥವಾ ನದಿಯಲ್ಲಿ ನೀರು ಮೀಯುತ್ತಿದ್ದರು. ಇಂದು ಮನೆಯ ಹೊರಗಡೆಯೇ ನೀರು ಮೀಯುತ್ತಾರೆ.

ಕಾಡುಕುರುಬರಲ್ಲಿ ಒಬ್ಬ ವ್ಯಕ್ತಿಯು ಅಂದರೆ ೫ ಎಲಮಗೇಯ ವ್ಯಕ್ತಿಯು ೩ ಎಲಮಗೇಯ ವ್ಯಾಪ್ತಿಯಲ್ಲಿ ಬರುವ ಜಮ್ಮಾದಲ್ಲಿ ಒಂದು ವೇಳೆ ಸಾವನ್ನಪ್ಪಿದರೆ ಆ ಸಾವಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು ಆ ಜಮ್ಮಾದಲ್ಲಿ ಬರುವಂತಹ ೩ ಎಲಮಗೇಯವರು ವಹಿಸಿಕೊಳ್ಳಬೇಕು.

ದುರ್ಮರಣಕ್ಕೆ ಈಡಾದವರ ಆಚರಣೆ: ಕಾಡಿನಲ್ಲಿ ಪ್ರಾಣಿಗಳ ದಾಳಿಗೆ ಬಲಿಯಾದವರನ್ನು ಸಹ ಹೂಳಲಾಗುತ್ತದೆ. ಆದರೆ ಅಂಥವರ ಗಾಳಿಯನ್ನು ಹಿಡಿಯಲು ಕಾಡುಕುರುಬರಲ್ಲಿ ಪ್ರತ್ಯೇಕವಾದಂತಹ ದೇವರಿದೆ. ಅದುವೇ 'ಅರಗೆಲ್ಲ ದೇವರು.' ಇದು ಅವರ ನೂರು ಇನ್ನೂರು ವರ್ಷಗಳ ಹಿಂದೆ ಸತ್ತಂತಹ ವ್ಯಕ್ತಿಗಳ ಆತ್ಮವಾಗಿದೆ. ಕಾಯಿಲೆ ಬಿದ್ದಂತಹ ವ್ಯಕ್ತಿಗಳನ್ನು ಮನೆಯಲ್ಲಿಯೇ ಇಟ್ಟುಕೊಳ್ಳುತ್ತಾರೆ. ಅವರು ಮನೆಯಲ್ಲಿಯೇ ಸತ್ತರೆ ಏನು ಅಂಜುವುದಿಲ್ಲ. ಏಕೆಂದರೆ ಆ ವ್ಯಕ್ತಿಯು ತಾನು ಕಟ್ಟಿರುವ ಮನೆಯಲ್ಲಿಯೇ ಉಸಿರು ಬಿಡಬೇಕು ಎಂಬುದಾಗಿದೆ. ಇಂಥವರ ಆತ್ಮಗಳನ್ನು ಅವರ ಧೇಯಗಳಿಗೆ ಒಪ್ಪಿಸುತ್ತಾರೆ. ಸತ್ತವರು ಏನಾದರೂ ಹರಕೆಯನ್ನು ಮಾಡಿಕೊಂಡಿದ್ದರೆ ಅದನ್ನು ಅವರ ಅಣ್ಣ-ತಮ್ಮಂದಿರು ತೀರಿಸಬೇಕು. ಇಲ್ಲದೇ ಇದ್ದರೆ ತೊಂದರೆಯನ್ನು ಕೊಡುತ್ತದೆ. ಸತ್ತ ವ್ಯಕ್ತಿಗೆ ಅಂಬಾಲದಲ್ಲಿ ದೇವರನ್ನು ಕರೆಯಿಸಿ ಶಾಂತಿ ಮಾಡಿಸುತ್ತಾರೆ. ಕಾಡುಕುರುಬರ ಮನೆಯಲ್ಲಿ ಗಂಧದ ಕಡ್ಡಿಯನ್ನು ಹಚ್ಚಿ ಯಾವ ದೇವರನ್ನೂ ಪೂಜಿಸುವ ಪದ್ಧತಿ ಇಲ್ಲ. ದೇವರ ಮೂಲಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಬಹುದು. ಕಾಡುಕುರುಬರು ಗುಡ್ಡಪ್ಪನನ್ನು ಕರೆಯಲು, ನೂರೊಂದು ನಾಮವನ್ನು ಕಲಿತಿದ್ದರೆ ಮಾತ್ರ ಎಲ್ಲಾ ದೇವರನ್ನು ಕರೆಯಬಹುದು. ಆದರೆ ನಾಡ ಜನರಲ್ಲಿ ಒಂದೇ ದೇವರನ್ನು ಮಾತ್ರ ಕರೆಯುತ್ತಾನೆ. ಗಾಳಿಯನ್ನು ಅಥವಾ ದೇವರನ್ನು ಕರೆಯುವಾಗ ಅಂಬಾಲದಲ್ಲಿ ಸ್ವಲ್ಪವಾದರೂ ಬೆಂಕಿ ಇರಲೇಬೇಕು. ಹಿಂದೆ ವ್ಯಕ್ತಿ ಮನೆಯಲ್ಲಿ ಸತ್ತರೆ ಅವರು ಮನೆಯನ್ನು ಬಿಡುತ್ತಿದ್ದರು. ಆದರೆ ಇಂದು ಆ ಪದ್ಧತಿ ಇಲ್ಲ.

ಸೂತಕದ ಆಚರಣೆ: ಕಾಡುಕುರುಬರು ಮಣ್ಣು ಕೊಟ್ಟ ೯ನೇ ದಿನಕ್ಕೆ ಸೂತಕವನ್ನು ಆಚರಿಸುತ್ತಾರೆ. ಆದರೆ ಸಣ್ಣಮಕ್ಕಳು ಸತ್ತರೆ ಅವರಿಗೆ ೨ ದಿನದಲ್ಲಿ ಸೂತಕವನ್ನು ತೆಗೆಯುತ್ತಾರೆ. ಒಂಬತ್ತನೇ ದಿನ ಅಂಬಾಲದಲ್ಲಿ ಎಲ್ಲರನ್ನು ಕರೆದು ಅಂಬಾಲದ ಕಾಯಿನೇ ಕಂಬದ ಹತ್ತಿರ ಹಾಗೂ ಯಜಮಾನರು ಕುಳಿತುಕೊಳ್ಳುವ ಜಾಗದ ಹಿಂದೆ ಈ ಎರಡು ಕಡೆಯೂ ಬೆಂಕಿಯನ್ನು ಹಾಕಲಾಗುತ್ತದೆ. ನಂತರ ಗುಡ್ಡಪ್ಪನು ದೇವರನ್ನು ಕರೆಯುತ್ತಾನೆ. ಗುಡ್ಡಪ್ಪನು ಮಂತ್ರ ಹೇಳುವಾಗ ಹೆಣ್ಣುಮಕ್ಕಳು ಸೊಲ್ಲನ್ನು ಹಾಕುತ್ತಾರೆ. ಗಂಡಸರು ಮತ್ತು ಹೆಂಗಸರ ನಡುವೆ ಬೆಂಕಿಯಿರುತ್ತದೆ. ಯಜಮಾನನ ಮುಂದೆ ಗಂಡಸರು. ಯಜಮಾನನ

ಹಿಂದೆ ಹೆಂಗಸರು ಕುಳಿತ್ತಿರುತ್ತಾರೆ. ಗುಡ್ಡಪ್ಪನ ಮೇಲೆ ದೇವರು ಬಂದು ಸತ್ತ ವ್ಯಕ್ತಿಯ ಸಾವಿಗೆ ಕಾರಣವೇನೆಂದು ಹೇಳುತ್ತದೆ. ಅದಾದ ನಂತರ ಕಾಡುಕುರುಬರ ದೊಡ್ಡ ದೇವರುಗಳು ಅವರ ಹಿರಿಯರ ಆತ್ಮಗಳನ್ನು ಕರೆಯಿಸಿ ೫ ಮೆಗಾಳದವನು ಸತ್ತರೆ ೫ ಮೆಗಾಳದ ಹಿರಿಯರನ್ನು ಕರೆಯಿಸಿ ಇವನನ್ನು ನಿಮ್ಮ ಜಮ್ಮಾಕ್ಕೆ ಕರೆದುಕೊಂಡು ಹೋಗಬೇಕು. ಹಾಗೆಯೇ ೩ ಮೆಗಾಳದವನು ಸತ್ತರೆ ಅವರ ಹಿರಿಯರನ್ನು ಕರೆಯಿಸಿ 'ಇವನನ್ನು ನಿಮ್ಮ ಜಮ್ಮಾಕ್ಕೆ ಕರೆದುಕೊಂಡು ಹೋಗಬೇಕು. ಇದು ನಿಮ್ಮ ಆಳು. ಕನಸಿನಲ್ಲಿ ಎಲ್ಲಿಯೂ ಕಾಣಿಸಿಕೊಳ್ಳಬಾರದು. ಅದು ನಿಮ್ಮ ಜವಾಬ್ದಾರಿ. ಇದು ಇನ್ನು ಮುಂದೆ ಯಾರಿಗೂ ಕಾಣಿಸಬಾರದು' ಎಂದು ಹೇಳಿ ಅವರ ವಶಕ್ಕೆ ಒಪ್ಪಿಸಲಾಗುತ್ತದೆ. ಅಂಬಲಿಯನ್ನು ಸತ್ತ ವ್ಯಕ್ತಿಯ ತಿಥಿಯ ದಿನ ನೀಡಲಾಗುತ್ತದೆ.

ಕಾಡುಕುರುಬರ ಸಾವಿನ ನಂತರದ ಆಚರಣೆಗಳು: ಕಾಡುಕುರುಬರಲ್ಲಿ ವ್ಯಕ್ತಿಯು ಸತ್ತ ಒಂಬತ್ತನೇ ದಿವಸಕ್ಕೆ ತಿಥಿಯನ್ನು ಮಾಡುತ್ತಾರೆ. ಸಣ್ಣಮಕ್ಕಳು ಸತ್ತರೆ ಎರಡು ದಿನದಲ್ಲಿ ಸೂತಕವನ್ನು ತೆಗೆಯುತ್ತಾರೆ. ಕಾಡುಕುರುಬರಲ್ಲಿ ಒಂಬತ್ತನೇ ದಿನಕ್ಕೆ ತಿಥಿ ಆಚರಿಸದಿದ್ದರೆ ಅವನು ಗಾಳಿಯಾಗಿ ಬಿಡುತ್ತಾನೆ ಎಂಬ ನಂಬಿಕೆಯಿದೆ. ಒಂಬತ್ತನೇ ದಿನಕ್ಕೆ ತಿಥಿ ಮಾಡದೆ ಹೋದಲ್ಲಿ ಇವರಿಗೆ ತೊಂದರೆ ಕೊಡುತ್ತಾನೆ ಹಾಗೂ ಸತ್ತ ವ್ಯಕ್ತಿಯ ಆತ್ಮವನ್ನು ಕಾಡುಕುರುಬರ ಹಿರಿಯರ ಆತ್ಮಗಳು ಅವರೊಂದಿಗೆ ಸೇರಿಸಿಕೊಳ್ಳುವುದಿಲ್ಲ ಎನ್ನುವ ನಂಬಿಕೆಯಿದೆ. ತಿಥಿಯ ದಿನ ಮಡಿಯಾಗಿ ಸತ್ತ ವ್ಯಕ್ತಿಯ ತಿಥಿಯನ್ನು ಮಾಡಲಾಗುತ್ತದೆ. ಅಂದು ಯಾವುದೇ ಪ್ರಾಣಿ ಬಲಿಯನ್ನು ಕೊಡುವುದಿಲ್ಲ. ಅಂದು ಅವನಿಗೆ ಅನ್ನ, ನೀರು, ತೋರಿಸಿದರೆ ಅವನ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂಬ ನಂಬಿಕೆ. ಯಾವುದೇ ವಯಸ್ಸಿನವರು ಸತ್ತರು ೯ನೇ ದಿನಕ್ಕೆ ತಿಥಿಯನ್ನು ಮಾಡಲಾಗುತ್ತದೆ. ಸತ್ತ ವ್ಯಕ್ತಿಗಳಿಗೆ ಅನ್ನ, ನೀರು ಕೊಡದೇ ಹೋದರೆ ತೊಂದರೆಯುಂಟು ಮಾಡುತ್ತಾರೆ. ಆಗ ಅವನಿಗೆ 'ಅನ್ನ, ನೀರು ಕೊಟ್ಟು ಅವರ ಹಿರಿಯ ಆತ್ಮ ೫ ಎಲಮೆಗಾಳನ್ನು ಕರೆಯಿಸಿ ಅಂದು ಸತ್ತವನನ್ನು ನಿಮ್ಮ ಜಮ್ಮಾಕ್ಕೆ ಯಾಕೆ ಕರೆದುಕೊಂಡು ಹೋಗಿಲ್ಲ ನೀನು. ಅವನು ನಮಗೇ ಭಾರೀ ತೊಂದರೆ ಕೊಡುತ್ತಾನೆ. ಯಾಕೆ ಎಂದು ೫ ಎಲ ಅಜ್ಜನನ್ನು ಕೇಳಲಾಗುತ್ತದೆ. (೫ ಎಲಮೆಗಾಳನು ಸತ್ತಾಗ ೫ ಎಲ ಮಗನಿಗೆ ತೊಂದರೆಕೊಟ್ಟರೆ ೫ ಎಲಮೆಗಾಳನನ್ನೇ ಕರೆಯಿಸಬೇಕು.) ೫ ಎಲಮೆಗಾಳನನ್ನು ಕರೆಯಿಸಿ ಇಷ್ಟೆಲ್ಲ ಕಟ್ಟುನಿಟ್ಟು ಮಾಡಿದರು 'ಯಾಕೆ ಇವನನ್ನು ಕರೆದುಕೊಂಡು ಹೋಗಿಲ್ಲ' ಎಂದು ಆ ಹಿರಿಯ ಆತ್ಮಕ್ಕೆ ಪ್ರಶ್ನೆ ಹಾಕಲಾಗುತ್ತದೆ. ಆಗ ಗುಡ್ಡಪ್ಪನನ್ನು ಕೇಳಲಾಗುತ್ತದೆ. ಆಗ ಗುಡ್ಡಪ್ಪ 'ನಿಮ್ಮಿಂದ ಇಂತಹ ತೊಂದರೆಯಾಗಿದೆ' ಎಂದು ಹೇಳಿದಾಗ ಅವರು ಮಾಡಿರುವ ತಪ್ಪನ್ನು ಕ್ಷಮಿಸಿ ಪಣವನ್ನು ತೀರಿಸುತ್ತಾರೆ. ಯಜಮಾನನ ಹತ್ತಿರ ಮಾತಲ್ಲಿ ಕ್ಷಮೆ ತೀರಿಸುವುದಾದರೆ ಅದನ್ನು ಸಹ ನಡೆಸಬಹುದು.

ಕಾಡುಕುರುಬರು ಸತ್ತ ಹಿರಿಯರ ಆತ್ಮಗಳಿಗೆಂದೇ ವರ್ಷಕ್ಕೆ ಒಂದು ಬಾರಿ 'ಅಲಿವು' ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವನ್ನು ಆಯುಧಪೂಜೆ ಮಾಡುವ ತಿಂಗಳಲ್ಲಿಯೇ ಈ ಅಲಿವು ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬಕ್ಕೆ ಎಲ್ಲರನ್ನು ಕರೆಯಲಾಗುತ್ತದೆ. ಈ ಹಬ್ಬಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನುಗಳು ಯಜಮಾನನ ಗುಂಪಿನವರೇ ತೆಗೆದುಕೊಳ್ಳಬೇಕು. ಬೇರೆ ಜಮ್ಮಾದವರು ತೆಗೆದುಕೊಳ್ಳುವಂತಿಲ್ಲ. ಅಂದು ಅನ್ನ, ಸಾರು ಅಡಿಗೆಯನ್ನು ಮಾಡಲಾಗುತ್ತದೆ. ಅನ್ನವನ್ನು ಮಾಡಬೇಕಾದರೆ ಹಳ್ಳವನ್ನು ಹೊಡೆದು ಗುಡಿಸಿ ಸಾರಿಸಿ ಇಬ್ಬರೂ ಅಥವಾ ಮೂವರು ಸೇರಿ ಭತ್ತವನ್ನು ಕುಟ್ಟಬೇಕು. ಅಕ್ಕಿಯ ಕಾಳನ್ನು ಯಾರೂ ಬಾಯಿಗೆ ಹಾಕುವಂತಿಲ್ಲ. ಈ ಹಬ್ಬದಲ್ಲಿ ಕೋಳಿಯನ್ನು ಸಹ ತಿನ್ನುವಂತಿಲ್ಲ, ಉಗುಳು ಕೂಡ ತಗಲುವಂತಿಲ್ಲ. ಹೀಗೆ ಕಟ್ಟುನಿಟ್ಟಾಗಿ ಅಡುಗೆಯನ್ನು ಮಾಡಿ ಎಲ್ಲ ಆತ್ಮಗಳಿಗೂ ಎಡೆಯನ್ನು ಮಾಡಿ ನಂತರ ಬಂದವರಿಗೆ ಒಂದು ಹೊತ್ತಿನ ಊಟವನ್ನು ಪ್ರಸಾದದ ರೂಪದಲ್ಲಿ ನೀಡಬೇಕು. ಈ ಹಬ್ಬಕ್ಕೆ ಬೇಕಾಗುವ ಬಿದಿರು ಮೊದಲಾದ ವಸ್ತುಗಳನ್ನು ಕಾಡಿನಿಂದಲೇ ತರಬೇಕು. ಯಾರಾದರೂ ಎಂಜಲು ಮಾಡಿದರೆ ತಪ್ಪಾಗುತ್ತದೆ. ಆಗ ದೇವರನ್ನು ಕರೆಯಿಸಲಾಗುತ್ತದೆ. ಅಲ್ಲಿ ಆ ಹಿರಿಯ ಆತ್ಮಗಳು ಅವರು ಮಾಡಿರುವ ತಪ್ಪನ್ನು ಹೇಳುತ್ತವೆ. ಈ ಹಬ್ಬಕ್ಕೆ ತಂದಂತಹ ವಸ್ತುಗಳಿಂದ ಬರುವಂತಹ ಹೊಟ್ಟು, ಈರುಳ್ಳಿ ಸಿಪ್ಪೆ, ಯಾವುದೇ ತರಹದ ತ್ಯಾಜ್ಯವನ್ನು ಅಥವಾ ಕಸವನ್ನು ಹಬ್ಬ ಮುಗಿಯುವವರೆಗೂ ಎಲ್ಲಿಯೂ ಬಿಸಾಡುವಂತಿಲ್ಲ. ಅದನ್ನೂ ಸಹ ದೇವರು ನೋಡುವ ರೀತಿಯಲ್ಲೇ ನೋಡಲಾಗುತ್ತದೆ. ದೇವರ ಕಾರ್ಯ ಮುಗಿದ ಮೇಲೆಯೇ ಅಲ್ಲಿನ ಕಸವನ್ನು ಬಿಸಾಡಬೇಕು. ಈ ಹಬ್ಬ ಮಾಡುವಾಗ ಅಲ್ಲಿ ಯಾವುದೇ ರೀತಿಯ ಕೆಟ್ಟ ಪದಗಳನ್ನು ಆಡಬಾರದು ಮತ್ತು ಕೆಟ್ಟದಾಗಿ ನಡೆದುಕೊಳ್ಳಬಾರದು. ನಡೆದು ಕೊಂಡಿದ್ದೇ ಆದಲ್ಲಿ ಅಂದಿನ ಕಾರ್ಯಕ್ರಮ ಹಾಳಾದಂತೆ. ಆ ಕಾರ್ಯ ಮಾಡುವಾಗ ತಪ್ಪಾದಲ್ಲಿ ಆ ಕಾರ್ಯವನ್ನು ಅಲ್ಲಿಗೇ ನಿಲ್ಲಿಸಬೇಕು. ಇಲ್ಲದಿದ್ದರೆ ದೇವರು ಅವರಿಗೆ ಕಾಟವನ್ನು ಕೊಡಲು ಪ್ರಾರಂಭಿಸುತ್ತದೆ. ಆಗ ಅವರು ದೇವರಲ್ಲಿ ತಪ್ಪಾಯಿತೆಂದು ಕ್ಷಮೆ ಕೇಳುತ್ತಾರೆ. ಆಗ ದೇವರು '೬ ತಿಂಗಳವರೆಗೂ ನಿಮ್ಮನ್ನು ನಾನು ರಕ್ಷಿಸುತ್ತೇನೆ' ಎಂದು ಅವರ ಬೆನ್ನು ತಟ್ಟುತ್ತದೆ. ಯುಗಾದಿಗೆ ದೇವರನ್ನು ಕರೆಯಲಾಗುತ್ತದೆ. ದೇವರು ಕರೆಯುವ ದಿನ ಗುಡ್ಡಪ್ಪನಿಗೆ ಒಂದು ಹೊಸ ಬಿಳಿಯ ಪಂಚೆಯನ್ನು ಕೊಡುತ್ತಾರೆ.

ಕಾಡುಕುರುಬರಲ್ಲಿ ಸತ್ತ ವ್ಯಕ್ತಿಗಳಿಂದ ತೊಂದರೆ ಬಂದರೆ ಅವರು ದೇವರನ್ನು ಕರೆದು ಕಾರಣವನ್ನು ಕೇಳುತ್ತಾರೆ. ಅವರು ಅಂಬಾಲದಲ್ಲಿ ಎಡಗಡೆ ಮತ್ತು ಬಲಗಡೆ ಬೆಂಕಿಯನ್ನು ಹಾಕಿ ಸುತ್ತಲೂ ಮೂರು ಚಾಪೆಯನ್ನು ಹಾಕಿ ಕುಳಿತುಕೊಂಡು ಕಾಯಿನೆ ಮತ್ತು ನಾಡನೆ ಎಂಬ ದೇವರುಗಳನ್ನು ಕರೆಯುತ್ತಾರೆ. ಇಲ್ಲಿ ಕಾಯಿನೆ ನ್ಯಾಯಮೂರ್ತಿಯ ಸ್ಥಾನದಲ್ಲಿದ್ದರೆ

ನಾಡನೆ ವಕೀಲನ ಸ್ಥಾನದಲ್ಲಿರುತ್ತಾನೆ. ಕಾಡುಕುರುಬ ನಾಡನೆ ಹತ್ತಿರ ಹೋಗಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಾರೆ. ಆಗ ನಾಡನೆ ಕಾಯಿನೆಗೆ ಹೇಳಿ ಇವರ ಕಷ್ಟಗಳಿಗೆ ಪರಿಹಾರವನ್ನು ಸೂಚಿಸುತ್ತದೆ. ಇವರಿಗೆ ಯಾವುದಾದರೂ ಕಷ್ಟಗಳು ಬಂದಲ್ಲಿ ಹಿರಿಯರ ಆತ್ಮಗಳನ್ನು ಕರೆಯಿಸಿ 'ಈ ರೀತಿಯ ಕಷ್ಟಗಳನ್ನು ಕೊಡಬೇಡ' ಎಂದು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಪ್ರಾರ್ಥಿಸಿಕೊಂಡ ಮೇಲೂ ಕೆಲ ಆತ್ಮಗಳು ಮತ್ತೆ ಬಂದು ತೊಂದರೆ ಕೊಟ್ಟರೆ ಅವರು ಇನ್ನೂ ಹಳೆಯ ಹಿರಿಯರ ಆತ್ಮಗಳನ್ನು ಕರೆಯಿಸಿ 'ಇವನು ಹೀಗೆ ತೊಂದರೆಯನ್ನು ಕೊಡುತ್ತಾನೆ. ನಮ್ಮನ್ನು ಕಷ್ಟದಿಂದ ಪಾರುಮಾಡಿ' ಎಂದು ಕೇಳಿಕೊಳ್ಳುತ್ತಾರೆ. ಆಗ ಅವರು ಭರವಸೆಯನ್ನು ನೀಡಿ ಅವರನ್ನು ರಕ್ಷಿಸುತ್ತಾರೆ. ಕಾಡುಕುರುಬರ ದೇವರಿಂದ ಕಷ್ಟಗಳು ಬಂದರೆ ದೇವರನ್ನು ಕರೆಯಿಸಿ ಕಾರಣ ಕೇಳುತ್ತಾರೆ. ಆಗ ಅವರು ದೇವರಿಗೆ ಹರಕೆಯನ್ನು ಮಾಡಿಕೊಂಡು ಆ ಹರಕೆಯನ್ನು ತೀರಿಸುತ್ತಾರೆ. ಕಾಡುಕುರುಬರು ದೇವರಿಗಾಗಿ ಕುರಿ ಅಥವಾ ಆಡನ್ನು ಬಲಿ ಕೊಡುವ ಹರಕೆಯನ್ನು ಹೊರುತ್ತಾರೆ.

ಸಾವಿನ ನಂತರದ ಪರಿಕಲ್ಪನೆ: ಕಾಡುಕುರುಬರಲ್ಲಿ ವ್ಯಕ್ತಿ ಸತ್ತ ೯ ದಿನ ಕಳೆದ ಮೇಲೆ ದೇವರ ಗುಡ್ಡಪ್ಪನನ್ನು ಕರೆತಂದು ಶಾಸ್ತ್ರವನ್ನು ಕೇಳುತ್ತಾರೆ. 'ಏಕೆ ಈ ಸಾವು ಸಂಭವಿಸಿತು' ಎಂದು ಕೇಳುತ್ತಾರೆ. ಈ ದೇವರು ಕರೆಯುವ ಶಾಸ್ತ್ರವನ್ನು ಸೂತಕದ ಕೊನೆಯ ದಿನ ಒಂಬತ್ತನೇ ರಾತ್ರಿ ಕರೆಯಲಾಗುತ್ತದೆ. ಅಂದು ಸತ್ತ ವ್ಯಕ್ತಿಗೆ ಅನ್ನ ನೀರನ್ನು ಕೊಡಲಾಗುತ್ತದೆ. ಅಂದು ಸತ್ತ ವ್ಯಕ್ತಿಗೆಂದು ಯಾವುದೇ ರೀತಿಯ ಹೊಸ ಬಟ್ಟೆಯನ್ನು ಇಡುವುದಿಲ್ಲ. ಅಂದು ಸತ್ತ ವ್ಯಕ್ತಿಗೆ ಮನೆಯಲ್ಲಿ ಅನ್ನವನ್ನು ಮಾಡಬೇಕು. ಅದನ್ನು ಯಾರೂ ತಿನ್ನುವಂತಿಲ್ಲ. ಅಂದು ಮನೆಯನ್ನೆಲ್ಲ ಶುಚಿಗೊಳಿಸಿ ಇಡಲಾಗುತ್ತದೆ. ಅಂದು ರಾತ್ರಿ ಸತ್ತಂತಹ ವ್ಯಕ್ತಿಗೆ ಅನ್ನವನ್ನು ಇಟ್ಟು ಎಲ್ಲರೂ ಹೊರ ಹೋಗುತ್ತಾರೆ. ಅಲ್ಲಿ ಯಾರೂ ಇರುವಂತಿಲ್ಲ. ಆರು ಗಂಟೆಗೆ ಎಲ್ಲರೂ ಮನೆಯಿಂದ ಹೊರ ಹೋಗಬೇಕು. ಅಂದು ಮನೆಗೆ ಬೀಗವನ್ನು ಹಾಕುವುದಿಲ್ಲ. ಅಂದು ರಾತ್ರಿ ಸತ್ತ ವ್ಯಕ್ತಿಯು ಮನೆಗೆ ಬಂದು ಯಾವುದಾದರೂ ಒಂದು ವಿಧದಲ್ಲಿ ಸದ್ದು ಮಾಡಿದರೆ ಸತ್ತ ವ್ಯಕ್ತಿಯ ಆತ್ಮ ಬಂದಿದೆ ಎಂದು ತಿಳಿಯುತ್ತಾರೆ. ಅಂದು ರಾತ್ರಿ ಯಾವುದೇ ಸದ್ದು ಆಗದೆ ಇದ್ದರೆ ಅವನಿಗೆ ಯಾರೋ ಮಾಟವನ್ನು ಮಾಡಿಸಿದ್ದಾರೆ. ಅದರಿಂದಲೇ ಸಾವು ಸಂಭವಿಸಿದೆ ಎಂದು ತಿಳಿಯುತ್ತಾರೆ. ಅಂದು ರಾತ್ರಿ ದೇವರನ್ನು ಕರೆಯಿಸಿ ಸತ್ತ ವ್ಯಕ್ತಿಗೆ ಶಾಂತಿಯನ್ನು ಮಾಡಿಸುತ್ತಾರೆ.

ದೆವ್ವ-ಭೂತಗಳ ಪರಿಕಲ್ಪನೆ: ಕಾಡುಕುರುಬರು ಯಾರಾದರೂ ವ್ಯಕ್ತಿಗೆ ದೆವ್ವಗಳು ಹಿಡಿದಂಹ ಸಂದರ್ಭದಲ್ಲಿ ಅಂಬಾಲದಲ್ಲಿ ದೇವರನ್ನು ಕರೆದು ವಾಸಿ ಮಾಡುತ್ತಾರೆ. ಈ ಸಮಯದಲ್ಲಿ ಯಾವುದೇ ಬಲಿಯನ್ನು ಕೊಡುವುದಿಲ್ಲ. ಮಂತ್ರವನ್ನು ಹೇಳುತ್ತಾರೆ. ಗಾಳಿ ಹಿಡಿದವರು ಹರಕೆಯನ್ನು ಮಾಡಿಕೊಳ್ಳುತ್ತಾರೆ. ನಿಮಗೆ ಇಂತಹುದನ್ನು ಕೊಡುತ್ತಾನೆ ಎಂದು

ದೆವ್ವ-ಭೂತಗಳು ಬಂದಂತಹ ವ್ಯಕ್ತಿಗಳನ್ನು ಇವರು ಮನೆಯಲ್ಲಿಯೇ ಇಟ್ಟುಕೊಳ್ಳುತ್ತಾರೆ. ದೆವ್ವ-ಭೂತಗಳು ಇಂಥವರ ಮೇಲೆಯೇ ಬರುತ್ತವೆ ಎಂದು ಹೇಳಲಾಗುವುದಿಲ್ಲ. ಅವರಿಗೆ ಇಷ್ಟ ಬಂದಂತಹ ವ್ಯಕ್ತಿಯ ಮೇಲೆ ಬರುತ್ತವೆ. ತಪ್ಪು ಮಾಡಿದವರ ಮೇಲೆಯೂ ಗಾಳಿ ಬರುತ್ತದೆ. ನೀರುಗಾಯಿಲೆ, ಬಟ್ಟಲುಗಾಯಿಲೆ, ಮೆಕ್ಕಲುಗಾಯಿಲೆ, ಕಲ್ಲುಗಾಯಿಲೆ, ಕಿಚ್ಚಗಾಯಿಲೆ ಈ ರೀತಿಯ ಗಾಳಿಗಳನ್ನು ನೋಡಬಹುದು. ಎಳೆಮಕ್ಕಳು ಮತ್ತು ಸಣ್ಣಮಕ್ಕಳು, ಗರ್ಭಿಣಿಯರ ಮೇಲೂ ಗಾಳಿಗಳು ಬರುತ್ತವೆ. ಆಗಲೂ ಯಜಮಾನನಿಗೆ ತಿಳಿಸಿ ದೇವರನ್ನು ಕರೆಯಿಸಿ ಕೇಳಲಾಗುತ್ತದೆ.

ದೆವ್ವ-ಭೂತಗಳಿಂದ ಪರಿಹಾರೋಪಾಯಗಳು: ದೆವ್ವವನ್ನು ಬಿಡಿಸಲು ಯಂತ್ರ-ಮಂತ್ರದ ಮೊರೆ ಹೋಗುತ್ತಾರೆ. ತಾಯಿತವನ್ನು ಕಟ್ಟಿಸುತ್ತಾರೆ. ಮಕ್ಕಳು ಊಟ ಮಾಡದೆ ಹೋದಾಗ ಯಾರ ಹೆಸರನ್ನು ಮಗುವಿಗೆ ಇಟ್ಟಿರುತ್ತಾರೋ ಅವರನ್ನು ಕರೆಯಿಸಿ 'ನಿನ್ನ ಹೆಸರನ್ನು ಕೊಟ್ಟೆಯಾ? ಯಾಕೆ ಮಗು ಊಟ ಮಾಡುತ್ತಿಲ್ಲವೆಂದು' ದೇವರನ್ನು ಕರೆಯಿಸಿ ಕೇಳುತ್ತಾರೆ. ಆಗ ದೇವರು ಮಾತು ಕೊಟ್ಟು ಹೋಗುತ್ತದೆ.

ಜೇನುಕುರುಬರ ಸಾವಿಗೆ ಸಂಬಂಧಿಸಿದ ಆಚರಣೆ

ಜೇನುಕುರುಬರಲ್ಲಿ ಯಾರಾದರೂ ಸಾವನ್ನಪ್ಪಿದರೆ ಅವರು ಮನೆಯಲ್ಲಿ ಯಾವುದೇ ಕೆಲಸ ಕಾರ್ಯವನ್ನು ಮಾಡುವುದಿಲ್ಲ. ಅಡುಗೆ ಮಾಡುವುದು, ನೀರು ತರುವುದು ಈ ರೀತಿಯ ಯಾವ ಕೆಲಸವನ್ನೂ ಮಾಡುವುದಿಲ್ಲ. ಸತ್ತವರನ್ನು ಮಣ್ಣು ಮಾಡಿದ ನಂತರವೇ ಇವರ ಕೆಲಸಗಳು ಪ್ರಾರಂಭವಾಗುತ್ತವೆ. ಜೇನುಕುರುಬರಲ್ಲಿ ಪ್ರಾಣಿಗಳ ದಾಳಿಗೆ ಒಳಗಾಗಿ ಸಾವನ್ನಪ್ಪಿದರೆ, ಕಾಯಿಲೆಗೆ ತುತ್ತಾಗಿ ಸತ್ತವರನ್ನು ಹೂಳುತ್ತಾರೆ. ಅಲ್ಲದೇ ಪೋಸ್ಟ್‌ಮಾರ್ಟಂ ಮಾಡಿದಂತಹ ಶವವನ್ನು ಮತ್ತು ನೇಣು ಹಾಕಿಕೊಂಡು ಸತ್ತವರ ಶವವನ್ನು ಇವರು ಬೆಂಕಿಯಲ್ಲಿ ಸುಡುತ್ತಾರೆ.

ಜೇನುಕುರುಬರಲ್ಲಿ ಯಾರಾದರು ಸತ್ತರೆ ಮೊದಲು ಯಜಮಾನನಿಂದ ಪೂಜೆ ಮಾಡಿಸುತ್ತಾರೆ. ನಂತರ ಯಜಮಾನ ಹಚ್ಚೆಯಿಂದ ಚಟ್ಟವನ್ನು ಕಟ್ಟಲು ಪ್ರಾರಂಭಿಸಿ ಕೊಡುತ್ತಾನೆ. ಆಗ ಉಳಿದವರು ಚಟ್ಟವನ್ನು ಕಟ್ಟುತ್ತಾರೆ. ನಂತರ ಶವವನ್ನು ಚಟ್ಟದ ಮೇಲೆ ಇರಿಸಿ ಹೊಸ ಬಟ್ಟೆಯನ್ನು ಹಾಕುತ್ತಾರೆ. ಗಂಡಸರಿಗೆ ಟವೆಲ್, ಪಂಚೆ, ಶರ್ಟನ್ನು ಹಾಕುತ್ತಾರೆ. ಹೆಣ್ಣುಮಕ್ಕಳಿಗೆ ಸೀರೆಯನ್ನು ಹಾಕುತ್ತಾರೆ. ನಂತರ ಚಟ್ಟವನ್ನು ಸತ್ತಂತಹ ವ್ಯಕ್ತಿಯ ಅಣ್ಣ ತಮ್ಮಂದಿರು ಹೊರಬೇಕು. ಅಣ್ಣ ತಮ್ಮಂದಿರು ಇಲ್ಲದಿದ್ದರೆ ಸಂಬಂಧಿಕರು ಅಥವಾ ನೆರೆಹೊರೆಯವರು ಹೊರಬೇಕು. ಚಟ್ಟವನ್ನು ಎತ್ತಲು ಇಷ್ಟ ಇರುವವರು ಹೋಗಿ ಎತ್ತಿದರೆ ಅದು ಹೂವಿನಂತೆ ಸುಲಭವಾಗಿ ಎತ್ತಲು ಸಾಧ್ಯವಾಗುತ್ತದೆ. ಆಗ ಅವರಿಗೆ

ಯಾವುದೇ ಭಾರವನ್ನು ತೋರಿಸುವುದಿಲ್ಲ. ಇಷ್ಟವಿಲ್ಲದವರು ಎತ್ತಿದರೆ ಭಾರವನ್ನು ತೋರಿಸುತ್ತದೆ. ಚಟ್ಟವನ್ನು ಇಬ್ಬರು ಮಾತ್ರವೇ ಹೊರಬೇಕು. ಶವವನ್ನು ತೆಗೆದುಕೊಂಡು ಹೋಗುವಾಗ ಮೂರು ಕಡೆಗಳಲ್ಲಿಯೂ ಒಂದೊಂದು ಬಾರಿಗೆ ನಿಂತ ಜಾಗದಲ್ಲಿಯೇ ಮೂರ ಸುತ್ತುಗಳನ್ನು ಹಾಕಿಸುತ್ತಾರೆ. ಮೊದಲು ಚಟ್ಟವನ್ನು ಕಟ್ಟಿದ ಜಾಗದಲ್ಲಿ, ಎರಡನೆಯದು ಮಧ್ಯದ ದಾರಿಯಲ್ಲಿ, ಮೂರನೆಯದು ಶವವನ್ನು ಹೂಳುವ ಗುಂಡಿಯ ಬಳಿ ಸುತ್ತಿಸುತ್ತಾರೆ. ಶವವನ್ನು ಸ್ಮಶಾನಕ್ಕೆ ತಂದ ಮೇಲೆ ಯಜಮಾನರು ಗುಂಡಿ ತೆಗೆಯುವ ಜಾಗವನ್ನು ಮೊದಲು ಪೂಜೆ ಮಾಡಿ ಸ್ವಲ್ಪ ಗುಂಡಿಯನ್ನು ಶಾಸ್ತ್ರಕ್ಕೆಂದು ಅಗೆಯುತ್ತಾರೆ. ನಂತರ ಬೇರೆಯವರು ಗುಂಡಿಯನ್ನು ತೆಗೆಯುತ್ತಾರೆ. ಗುಂಡಿಯು ಮೂರೂವರೆ ಅಡಿ ಉದ್ದ ಮತ್ತು ನಾಲ್ಕೂವರೆ ಅಡಿ ಆಳವಿರುತ್ತದೆ. ನಂತರ ಯಜಮಾನ ಶವಕ್ಕೆ ಹಾಗೂ ಗುಂಡಿಗೆ ಪೂಜೆ ಮಾಡುತ್ತಾನೆ. ಈ ಪೂಜೆಯನ್ನು ಯಜಮಾನನೇ ಮಾಡಬೇಕು. ಅಂದು ಪೂಜೆಗೆಂದು ಅರಿಶಿನ ಕುಂಕುಮ, ಹೂ, ಗಂಧದ ಕಡ್ಡಿ, ಕರ್ಪೂರ, ಹಾರ, ಬೆಲ್ಲದ ಅಕ್ಕಿ, ಬಿಳಿ ಪಂಚೆ ತಂದಿರುತ್ತಾರೆ. ಅದೆಲ್ಲವನ್ನು ಹಾಕಿ ಮೊದಲು ದೇವರಿಗೆ ಪೂಜೆ ಮಾಡುತ್ತಾರೆ. ಆ ನಂತರ ಶವಕ್ಕೆ ಪೂಜೆ ಮಾಡಿ ಹಣವನ್ನು ಎತ್ತಿ ಕೊಡುತ್ತಾರೆ. ನಂತರ ಗುಂಡಿಯನ್ನು ಪೂಜೆ ಮಾಡಿ ತೊಪ್ಪೆಯ ನೀರನ್ನು ಗುಂಡಿಯ ಸುತ್ತ ಚಿಮುಕಿಸಿ ಶವವನ್ನು ಮೂರು ಬಾರಿ ಸುತ್ತಿಸುತ್ತಾರೆ. ನಂತರ ಶವವನ್ನು ಕಾಲು ಮಡಚಿ ಗುಂಡಿಯಲ್ಲಿ ಮಗ್ಗಲಿಗೆ ವಾಲಿಸುತ್ತಾರೆ. ಆ ನಂತರ ಯಜಮಾನರು ಮೂರು ಹಿಡಿ ಮಣ್ಣು ಕೊಡುತ್ತಾರೆ. ತದನಂತರ ಎಲ್ಲರೂ ಮಣ್ಣು ಕೊಡುತ್ತಾರೆ. ಮಣ್ಣು ಮಾಡಿದ ಮೇಲೆ ಅಲ್ಲಿ ಎಲ್ಲರಿಗೂ ವೀಳ್ಯದೆಲೆ, ಅಡಿಕೆಯನ್ನು ಕೊಡಲಾಗುತ್ತದೆ. ಅದನ್ನು ಅಲ್ಲಿಯೇ ತಿಂದು ಬರಬೇಕು. ಮನೆಗೆ ಹೊಯ್ಯುವಂತಿಲ್ಲ. ಮಕ್ಕಳು ಸತ್ತಾಗಲೂ ಇದೇ ರೀತಿಯ ಆಚರಣೆಯನ್ನು ಮಾಡುತ್ತಾರೆ.

ಶವಸಂಸ್ಕಾರ ಮಾಡಿ ಮನೆಗೆ ಬಂದಾಗ ಹೆಣ್ಣುಮಕ್ಕಳು ಮನೆಯ ಹೊರಗಡೆ ಸಗಣಿ ನೀರನ್ನು ಇಟ್ಟಿರುತ್ತಾರೆ. ಅದನ್ನು ಸ್ವಲ್ಪ ತಲೆಗೆ ಹಾಕಿಕೊಂಡು ನಂತರ ಹೊಸ ನೀರನ್ನು ತಂದು ಸ್ನಾನ ಮಾಡಬೇಕು. ಹಾಡಿಯಲ್ಲಿ ಯಾರಾದರೂ ಸತ್ತಾಗ ಅಂದು ಯಾರೂ ಸಹ ಒಂದು ದಿನ ಊಟ ಮಾಡುವಂತಿಲ್ಲ.

ಮುತ್ತೈದೆತನ ತೆಗೆಯುವ ಆಚರಣೆ: ಗಂಡ ಸತ್ತರೆ ಹೆಣ್ಣಿಗೆ ಗಂಡನ ಶವದ ಜೊತೆಯೇ ಶಾಸ್ತ್ರವನ್ನು ಮಾಡುತ್ತಾರೆ. ಗಂಡ ಸತ್ತಂತಹ ಹೆಣ್ಣಿಗೆ ಕೈ ತುಂಬಾ ಬಳೆ, ಹೂ ಮುಡಿಸಿ, ಅರಿಶಿನ, ಕುಂಕುಮ ಹಚ್ಚಿ ಸಮಾಧಿಯ ಮೇಲೆ ಬಳೆ ಹೊಡೆದು ಹಣೆಯ ಮೇಲಿನ ಕುಂಕುಮ ಅಳಿಸಿ ಸಮಾಧಿಯ ಮೇಲಿನ ಸ್ವಲ್ಪ ಹೂವನ್ನು ತೆಗೆದುಕೊಂಡು ಬರುತ್ತಾರೆ.

ಸೂತಕದ ಆಚರಣೆ: ಜೇನುಕುರುಬರು ಸೂತಕದ ಮನೆಯ ಮುಂದೆ ದೊಡ್ಡ ಚಪ್ಪರವನ್ನು ಹಾಕುತ್ತಾರೆ. ಅಂದು ನಡೆಯುವ ಪೂಜೆಗೆ ಹಣ್ಣು, ಕಾಯಿ, ಗಂಧದ ಕಡ್ಡಿ, ಅರಿಶಿನ ಕುಂಕುಮ ಮೊದಲಾದ ಪೂಜಾಸಾಮಗ್ರಿಗಳನ್ನು ತರಲಾಗುತ್ತದೆ. ಆಗ ದೇವರಿಗೆಂದು ಏಳು ಕಳಸಗಳನ್ನು ಇಡುತ್ತಾರೆ. ಅಲ್ಲಿ ಒಬ್ಬರು ಪೂಜೆಯನ್ನು ಮಾಡುತ್ತಾರೆ. ಪೂಜೆ ಮಾಡಿ ಸತ್ತಂತ ವ್ಯಕ್ತಿಯ ಆತ್ಮವನ್ನು ಬರಮಾಡಿಕೊಳ್ಳುತ್ತಾರೆ. ಆ ಆತ್ಮವು ತನಗೆ ಇಷ್ಟವಾದಂತಹ ವ್ಯಕ್ತಿಗಳ ಮೇಲೆ ಬರುತ್ತದೆ ಅಥವಾ ಅವರ ಮಕ್ಕಳ ಮೇಲೆಯೇ ಬರಬಹುದು. ಆತ್ಮ ಬಂದಂತಹ ಸಂದರ್ಭದಲ್ಲಿ ಹಿರಿಯರೆಲ್ಲಾ ಅವನನ್ನು ಮಾತಾಡಿಸಿ, ಊಟ ಮಾಡಿಸುತ್ತಾರೆ. ಸತ್ತವನಿಗೆ ಮನೆಯಲ್ಲೇ ತಯಾರಿಸಿದ ಅಡುಗೆಯನ್ನು ಎಡೆ ಮಾಡುತ್ತಾರೆ. ಉಳಿದವರಿಗೆ ಹೊರಗಡೆ ಸಿದ್ಧ ಮಾಡಿದ ಅಡುಗೆಯನ್ನು ಬಡಿಸುತ್ತಾರೆ. ಸತ್ತವರು ತಮಗೆ ಇಷ್ಟವಾದ ಮೇಲೆ ಯಾವುದೇ ತೊಂದರೆಯಾಗದಂತೆ ರಕ್ಷಿಸುತ್ತೇವೆ ಎಂದು ಅಭಯವನ್ನು ನೀಡುತ್ತಾರೆ. ಅಂದು ಬೆಳಿಗ್ಗೆಯಿಂದ ಸಂಜೆಯವರೆಗೂ ಹಿರಿಯರ ಆತ್ಮಗಳನ್ನು ಕರೆಯುತ್ತಾರೆ. ಒಮ್ಮೊಮ್ಮೆ ಎರಡು ಅಥವಾ ಮೂರು ದಿನಗಳಾದರೂ ಆಗಬಹುದು. ಆಗ ಬಂದಂತಹವರು ಅಲ್ಲಿಯೇ ಇರಬೇಕು. ಅವರಿಗೆಲ್ಲ ಅಲ್ಲಿಯೇ ಊಟದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಮೂರು ದಿನಗಳಾದರೂ ಗಾಳಿಯು ಬರದೇ ಇದ್ದರೆ ಕೋಳಿಯನ್ನು ಬಲಿ ಕೊಡುತ್ತಾರೆ. ಆಗ ಬಲಿಯನ್ನು ನೀಡಿದ್ದಕ್ಕೆ ಗಾಳಿಯು ಬಂದಿದೆ ಎಂದು ತಿಳಿದುಕೊಳ್ಳುತ್ತಾರೆ. ಆ ಕೋಳಿಯನ್ನು ತಂದು ಮನೆಯಲ್ಲಿ ಅಡುಗೆ ಮಾಡಿ ಅದನ್ನು ಗಾಳಿಗೆ ಎಡೆ ಮಾಡುತ್ತಾರೆ. ಇದರ ಜೊತೆಯಲ್ಲಿ ಸತ್ತವರು ಇಷ್ಟಪಡುತ್ತಿದ್ದಂತಹ ಆಹಾರವನ್ನು ಮಾಡಿ ಎಡೆ ಇಡುತ್ತಾರೆ. ಹೊರಗಡೆ ಬಂದಂತವರಿಗೆ ಅನ್ನ ಸಾಂಬಾರು, ಪಾಯಸವನ್ನು ಮಾಡಲಾಗಿರುತ್ತದೆ. ಹಿಂದಿನ ಕಾಲದಲ್ಲಿ ಕಾಡಿನಲ್ಲಿದ್ದವರು ಸತ್ತವರಿಗೆ ಯಾವುದೇ ಬಲಿಯನ್ನು ಕೊಡುತ್ತಿರಲಿಲ್ಲ. ಇವರಲ್ಲಿ ಯಾರು ಸತ್ತರೂ ಒಂದೇ ರೀತಿಯ ಆಚರಣೆಯನ್ನು ಮಾಡುತ್ತಾರೆ. ಸತ್ತವರ ಸೂತಕ ಮುಗಿಯುವವರೆಗೂ ಮನೆಯಲ್ಲಿ ಯಾವುದೇ ರೀತಿಯ ಸಿಹಿ ಅಡುಗೆ, ಮಾಂಸದ ಅಡುಗೆಯನ್ನು ಮಾಡುವುದಿಲ್ಲ.

ತಿಥಿಯ ಆಚರಣೆ: ಜೇನುಕುರುಬರು ತಿಥಿಯನ್ನು ೧೨ ದಿನ ಅಥವಾ ೧೬ ದಿನಕ್ಕೆ ಮಾಡುತ್ತಾರೆ. ತಿಥಿಯ ದಿನ ಬುರುಡೆಯನ್ನು ಕರೆದು ನೆರಳನ್ನು ಕರೆಯುತ್ತಾರೆ. ಅಂದು ನೆರಳಿಗೆ ಮಾಂಸಾಹಾರವನ್ನು ಮನೆಯಲ್ಲಿಯೇ ಮಾಡಿ ಎಡೆ ಮಾಡುತ್ತಾರೆ. ಅಂದು ಸತ್ತವರಿಗೆ ಹೊಸ ಬಟ್ಟೆಯನ್ನು ಇಟ್ಟಿರುತ್ತಾರೆ. ಅಂದು ಬಂದಂತಹ ಬಂಧು-ಬಾಂಧವರಿಗೆ ಊಟವನ್ನು ಹಾಕುತ್ತಾರೆ. ಅನ್ನ, ಸಾರು, ಕುಂಬಳಕಾಯಿ, ಊಟವನ್ನು ಹಾಕುತ್ತಾರೆ. ಸತ್ತ ದಿನದಿಂದ ತಿಥಿಯ ದಿನದವರೆಗೂ ಅನ್ನ, ಸಾರು, ಬೇಳೆ, ಹುರುಳಿ ಕಾಳಿನ ಸಾರನ್ನು ಮಾಡುತ್ತಾರೆ. ಅಂದು ಸತ್ತವರು ಇಷ್ಟಪಡುವ ಆಹಾರವನ್ನು ಮಾಡುತ್ತಾರೆ. ಅಲ್ಲದೇ ಸತ್ತ

ವ್ಯಕ್ತಿಯು ಬಳಸುತ್ತಿದ್ದ ವಸ್ತುಗಳನ್ನು ಕೆಲವರು ಗುಂಡಿಗೆ ಹಾಕುತ್ತಾರೆ. ಇನ್ನೂ ಕೆಲವರು ಸತ್ತ ವ್ಯಕ್ತಿಯ ನೆನಪಿಗೆಂದು ಆ ವಸ್ತುಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುತ್ತಾರೆ. ಯುಗಾದಿ ಹಬ್ಬದ ದಿನದಂದು ಸತ್ತವರನ್ನು ಪೂಜಿಸುತ್ತಾರೆ.

ಗಾಳಿಯಿಂದ ಪರಿಹಾರ: ಜೇನುಕುರುಬರಲ್ಲಿ ಗಾಳಿ(ಆತ್ಮ)ಯು ಯಾರನ್ನಾದರೂ ಹಿಡಿದಿದ್ದರೆ ಅಂಥವರನ್ನು ಗುಣಪಡಿಸಲು ದೇವರನ್ನು ಕರೆಯಿಸಿ ಕೇಳಲಾಗುತ್ತದೆ. ಸತ್ತವರ ಆತ್ಮವನ್ನು ಗಾಳಿಯೆಂದು ಕರೆಯುತ್ತಾರೆ. ಭೂತಗಳು ಹಿಡಿದರೆ ಅವು ಬಿಡುವುದಿಲ್ಲ. ಆಗ ಅವರು ಬುರುಡೆಯನ್ನು ಕರೆದು ಅದರ ಮುಖಾಂತರ ಇನ್ನೊಂದು ಗಾಳಿಯನ್ನು ಕರೆದು ಆ ಭೂತವನ್ನು ಹಿಡಿಯಲಾಗುತ್ತದೆ. ಆಗ ಆ ದೇವರು ಆ ಭೂತವನ್ನು ಬೇರೊಂದು ಗಾಳಿಯ ಮುಖಾಂತರ ಹಿಡಿಯುತ್ತದೆ. ಆಗ ಭೂತ ಅಥವಾ ಗಾಳಿಯನ್ನು ೮ ದಿನಗಳವರೆಗೆ ಮಾತುಕೊಟ್ಟು ಅಲುಗಾಡದಂತೆ ಹಿಡಿದಿಡಲಾಗುತ್ತದೆ. ೯ನೇ ದಿನಕ್ಕೆ ಬಂಧ ಮುಕ್ತಗೊಳಿಸಲಾಗುತ್ತದೆ. ಗಾಳಿಯು ಹೆಚ್ಚಾಗಿ ತನಗೆ ಇಷ್ಟಬಂದಂತಹ ವ್ಯಕ್ತಿಗಳ ಮೇಲೆ ಬರುತ್ತದೆ.

ಕಾಡುಕುರುಬರಲ್ಲಿನ ನ್ಯಾಯಪದ್ಧತಿ

ನ್ಯಾಯವು ಅನ್ಯಾಯಕ್ಕೆ ಪರಿಹಾರ. ಇದನ್ನರಿತ ಮಾನವ ಈ ಭೂಮಿಯ ಮೇಲೆ ಹುಟ್ಟಿದಂದಿನಿಂದ ಒಂದಿಲ್ಲೊಂದು ರೂಪದಲ್ಲಿ ಅವನಿಗೆ ನ್ಯಾಯವನ್ನು ನೀಡಲಾಗುತ್ತಿದೆ. ಆಸ್ತಿ ಎಂಬುದು ಆಸ್ತಿತ್ವಕ್ಕೆ ಬಂದ ಮೇಲೆ ಅವನ ನ್ಯಾಯ ವ್ಯವಹಾರಗಳು ಹೆಚ್ಚುತ್ತ ಹೋಗಿ ನ್ಯಾಯಶಾಸ್ತ್ರದ ವ್ಯಾಪಕ ಪದ್ಧತಿಗಳ ಅವಶ್ಯಕತೆ ಹೆಚ್ಚಿಸಿರುವವು. ಆದರೆ ಈ ಹಂತವನ್ನು ತಲುಪುವ ಮೊದಲೇ ಅವನ ವೈಯಕ್ತಿಕ ಸ್ವಾತಂತ್ರ್ಯದ ಮೇಲೂ, ಅನಂತರ ಅವನ ಪರಿಮಿತ ಆಸ್ತಿಯ ಮೇಲೂ ಉಂಟಾದ ಆಕ್ರಮಣಗಳಿಂದಾಗಿ ಜಗಳಗಳು ವಾದ ವಿವಾದಗಳು ಹುಟ್ಟಿಕೊಂಡವು.[೧] ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಬುಡಕಟ್ಟು ಸಮುದಾಯಗಳು ತಮ್ಮದೇ ಆದಂತಹ ನ್ಯಾಯಪದ್ಧತಿಯನ್ನು ರೂಪಿಸಿಕೊಂಡವು. ಈ ನ್ಯಾಯ ತೀರ್ಮಾನದ ಜವಾಬ್ದಾರಿಯನ್ನು ಆ ಸಮುದಾಯದ ಯಜಮಾನನಿಗೆ ನೀಡಲಾಗಿರುತ್ತದೆ. ಅಲ್ಲಿನ ಸಮಸ್ಯೆ, ವಾದ-ವಿವಾದಗಳನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನವನ್ನು ಬುಡಕಟ್ಟು ಸಮುದಾಯದ ಹಾಡಿಯ ಯಜಮಾನ ನಿರ್ವಹಿಸುತ್ತಾನೆ. ಇಂದಿಗೂ ಸಹ ಬುಡಕಟ್ಟುಗಳಲ್ಲಿ ಕಟ್ಟೆಮನೆಯಲ್ಲಿ ನ್ಯಾಯ ನಿರ್ಣಯಗಳ ಕಾರ್ಯ ಜರುಗುವುದನ್ನು ನೋಡಬಹುದು. ಆದರೆ ಇಂದು ಈ ಹಾಡಿಗಳಲ್ಲಿ ನಾಗರಿಕತೆಯ ಗಾಳಿ ಬೀಸಿರುವುದರಿಂದ ಅಲ್ಲಿಯ ಕೆಲ ಜನರು ಕಟ್ಟೆಮನೆಯ ನಿರ್ಣಯವನ್ನು ತಿರಸ್ಕರಿಸಿ ಆರಕ್ಷಕ ಠಾಣೆಗಳಿಗೆ ಹೋಗುವಷ್ಟರ ಮಟ್ಟಿಗೆ ಅವರ ನ್ಯಾಯ ಪದ್ಧತಿಯ ಮೇಲೆ ಪ್ರಭಾವ ಬೀರಿದೆ.

ಕಾಡುಕುರುಬರಲ್ಲಿ ತಪ್ಪು ಮಾಡಿದ್ದರೆ ಹಾಗೂ ತಪ್ಪು ಇಂಥವರೇ ಮಾಡಿದ್ದಾರೆ ಎಂದು ಸಾಬೀತಾದಲ್ಲಿ ಅವರು ಅಂಬಾಲಕ್ಕೆ ಬಂದು ಒಂದು ಕಬ್ಬಿಣದ ಚೂರು ಮತ್ತು ಒಂದೊಂದು ರೂಪಾಯಿಯನ್ನು ಪೌಲಿ ಹಾಕಬೇಕು. ಅಂಬಾಲದಲ್ಲಿ ಯಜಮಾನರೆಲ್ಲ ಕುಳಿತಿರುತ್ತಾರೆ. ಆಗ ತಪ್ಪು ಮಾಡಿದ ವ್ಯಕ್ತಿಯು ತಪ್ಪಿನ ಕಾಣಿಕೆಯನ್ನು 'ಕಾಯಿನೆ'ಗೆ ನೀಡಬೇಕು. ಅಂದರೆ ಅಂಬಾಲದ ಪ್ರಾರಂಭದ ಮಧ್ಯದಲ್ಲಿ ಒಂದು ಕಂಬವಿರುತ್ತದೆ. ಅದುವೇ ಕಾಯಿನೆ.

ಕಾಡುಕುರುಬರ ಅಂಬಾಲದ ಮಧ್ಯಬಾಗದಲ್ಲಿರುವ ಕಾಯಿನೆ ಕಂಬವು ಕಾಡುಕುರುಬರ ನ್ಯಾಯಪದ್ಧತಿಯಲ್ಲಿ ಪ್ರಮುಖವಾದುದಾಗಿದೆ. ಅಲ್ಲಿ ಐದು ಎಲಮಗೆಯವರು ಮಾತ್ರ ಕುಳಿತುಕೊಳ್ಳಬೇಕು. ಹಿರಿಯರಾದರು ಸರಿಯೇ, ಕಿರಿಯರಾದರೂ ಸರಿಯೇ ಅಲ್ಲಿ ೫ ಎಲಮಗೆಯವರು ಕುಳಿತಾಗ ಕಾಯಿನೆ ಮಗನು ಆಗುತ್ತಾನೆ. ಕಾಯಿನೆ ಕಂಬದ ಹತ್ತಿರ ಕಾಯಿನೆ ಮಗನು ಕುಳಿತುಕೊಳ್ಳುವಾಗ ಬಟ್ಟೆಯನ್ನು ಕಳಚಿ ಇಡಬೇಕು. ಕೇವಲ ಲುಂಗಿಯನ್ನು ಉಡಬೇಕು. ಆಗ ತಪ್ಪು ಮಾಡಿದವನು ಕಾಣಿಕೆಯನ್ನು ಕಾಯಿನೆ ಮಗನ ಕೈಗೆ ಕೊಡುತ್ತಾನೆ. ಯಜಮಾನನು ಸಹ ಅಲ್ಲಿಯೇ ಇರುತ್ತಾನೆ. ಆಗ ಕಾಯಿನೆ ಮಗ ಪಡೆದಂತಹ ತಪ್ಪಿನ ಕಾಣಿಕೆಯನ್ನು ತೆಗೆದುಕೊಂಡು ಹೋಗಿ ಯಜಮಾನನಿಗೆ ಕೊಡಬೇಕು. ೫ ಮೆಗಾಳಾರಾಗ ಮಾಡಿದ ತಪ್ಪನ್ನು ೫ ಭಾಗ ಮಾಡುತ್ತಾರೆ. ಒಂದೊಂದು ಭಾಗದಲ್ಲಿ ಒಂದು ಪೌಲಿ ಒಂದು ಕಬ್ಬಿಣದ ಚೂರು ಇಡುತ್ತಾರೆ. ಹಾಗೆಯೇ ಮೂರು ಮೆಗಾಳಂಗೆ ಮೂರು ಭಾಗ ಮಾಡುತ್ತಾರೆ. ಆಗ ಯಜಮಾನರು ಎಲ್ಲರ ಮುಂದೆ ನಿಂತು ಇಂಥವರು ಇಂತಹ ತಪ್ಪಿಗೆ ತಪ್ಪನ್ನು ತೀರಿಸಿದ್ದಾರೆ ಎಂದು ಹೇಳಿ ಐದು ಎಲಮಗೆಯಲ್ಲಿ ಒಬ್ಬರಿಗೆ ಮತ್ತು ಮೂರ ಎಲಮಗೆಯಲ್ಲಿ ಒಬ್ಬರಿಗೆ ಒಂದು ಪೌಲಿ ಮತ್ತು ಕಬ್ಬಿಣದ ಚೂರನ್ನು ಕೊಡುತ್ತಾರೆ. ಎಷ್ಟು ತಪ್ಪು ಮಾಡಿರುತ್ತಾರೋ ಅಷ್ಟು ಪೌಲಿ ಮತ್ತು ಕಬ್ಬಿಣದ ಚೂರನ್ನು ಕೊಡಬೇಕು. ಹಾಗೆಯೇ ಅಕ್ಕಪಕ್ಕದ ಜಮ್ಮಾದಿಂದ ಬಂದಂತಹ ನಾಡ್‌ಗೆ ಒಂದು ಪೌಲಿ ಮತ್ತು ಒಂದು ಕಬ್ಬಿಣದ ಚೂರನ್ನು ಕೊಡಬೇಕು. ಕೊನೆಯಲ್ಲಿ ಯಜಮಾನರು ಇಂಥವರು ಇಂತಹ ತಪ್ಪನ್ನು ತೀರಿಸಿದ್ದರೆ ಇನ್ನು ಮುಂದೆ ಒಳ್ಳೆಯದಾಗಲಿ ಎಂದು ಹೇಳುತ್ತಾರೆ. ಆಗ ಅಪರಾಧಿಯು ಇನ್ನು ಮುಂದೆ ತಪ್ಪು ಮಾಡುವುದಿಲ್ಲ ಎಂದು ಹೇಳುತ್ತಾನೆ. ಯಜಮಾನರು ಹೇಳಿದ ಹಾಗೆ ಕೇಳುತ್ತೇನೆ ಎಂದು ಹೇಳುತ್ತಾನೆ. ಐದು ಎಲಮಗೆ ಇಲ್ಲದೆ ಈ ತಪ್ಪು ತೀರಿಸುವ ಕಾರ್ಯ ಮುಗಿಯುವುದಿಲ್ಲ ಐದು ಎಲಮಗೆ ಇಲ್ಲಿ ಇರಲೇಬೇಕು. ತಪ್ಪು ಮಾಡಿದವರು ತಪ್ಪು ತೀರಿಸದೆ ಇದ್ದರೆ ಅವರಿಗೆ ಯಜಮಾನರು ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಕೊಡುವುದಿಲ್ಲ.

ಕಾಡುಕುರುಬರಲ್ಲಿ ಯಾರಾದರೂ ತಪ್ಪು ಮಾಡಿ ತಪ್ಪು ಮಾಡಿಲ್ಲ ಎಂದು ವಾದಿಸಿದರೆ ಅವರಿಗೆ ಕನಸಿನಲ್ಲಿ ದುಃಸ್ವಪ್ನಗಳು ಕಾಣಿಸಿಕೊಂಡು ಅವರಾಗಿಯೇ ಬಂದು ತಾವು ಮಾಡಿರುವ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಹಾಗೆ ಒಪ್ಪಿಕೊಳ್ಳದೇ ಇದ್ದರೆ ಆನೆ ಬಂದು ಮನೆ ಕಿತ್ತು ಹಾಕುವುದು, ಕಾಯಿಲೆ ಬರುವುದು, ಕಾಡಿಗೆ ಹೋದಾಗ ತೊಂದರೆಯಾಗುವುದು ಈ ರೀತಿಯ ದುಸ್ವಪ್ನಗಳು ಬೀಳುತ್ತವೆ. ಅವರಿಗೆ ಯಾವುದೇ ರೀತಿಯ ದೈಹಿಕ ಶಿಕ್ಷೆಯನ್ನು ನೀಡುತ್ತಿರಲಿಲ್ಲ. ಅವರನ್ನು ಅವರ ಪಾಡಿಗೆ ಬಿಡುತ್ತಿದ್ದರು. ಇಲ್ಲವೇ ಯಜಮಾನರು ಐದು ವರ್ಷಗಳ ಕಾಲ ತಪ್ಪು ಮಾಡಿದವರಿಗೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿರಲಿಲ್ಲ. ಈಗಲೂ ಸಹ ದಂಡದ ರೂಪದಲ್ಲಿ ಶಿಕ್ಷೆಯನ್ನು ವಿಧಿಸುತ್ತಾರೆ. ತಪ್ಪು ತೀರಿಸುವುದಕ್ಕೆ ಕಾಡುಕುರುಬರ ಭಾಷೆಯಲ್ಲಿ 'ಪಣತರಗ' ಎಂದು ಕರೆಯುತ್ತಾರೆ. ಹಿಂದಿನ ಕಾಲದಲ್ಲಿಯೂ ಸಹ ಯಾವುದೇ ರೀತಿಯ ದೈಹಿಕ ಶಿಕ್ಷೆಯನ್ನು ನೀಡುತ್ತಿರಲಿಲ್ಲ.

ಮೂರು ಎಲಮಗೆಯವರು ಐದು ಎಲಮಗೆಯವರಿಂದ ಅಂಬಾಲವನ್ನು ಕೇಳಿ ಪಡೆದುಕೊಂಡರು. ಕಾಯಿನೆ ಮಗನ್ ಇಲ್ಲದೇ ಎಲ್ಲಿಯೂ ತಪ್ಪು ತೀರಿಸುವಂತಿಲ್ಲ. ಅಲ್ಲದೇ ತಮಿಳುನಾಡು, ಕೇರಳ, ಕೊಡಗು, ಕರ್ನಾಟಕದ ಎಲ್ಲಡೆಯೂ ಇದೇ ಪದ್ಧತಿಯನ್ನು ಅನುಸರಿಸಲಾಗುತ್ತದೆ.

ಜಾಗನಕೋಟೆ ಹಾಡಿಯ ವಕ್ತೃವಿನ ಪ್ರಕಾರ ಕಾಡುಕುರುಬರಲ್ಲಿ ಯಜಮಾನನ ಸ್ಥಾನವನ್ನು ಪಡೆಯಬೇಕಾದರೆ ಅವರು ಬುದ್ಧಿವಂತರಾಗಿರಬೇಕು ಮತ್ತು ಅವರು ಅನುಕೂಲಸ್ಥರಾಗಿರುವಂತಹ ವ್ಯಕ್ತಿಗೆ ಹಾಡಿಯ ಯಜಮಾನನ ಪಟ್ಟವನ್ನು ಕಟ್ಟುತ್ತಾರೆ. ಯಜಮಾನನ ಪಟ್ಟವು ವಂಶಪಾರಂಪರ್ಯವಾಗಿಯೇ ನಡೆದುಕೊಂಡು ಹೋಗುತ್ತದೆ. ಈ ಯಜಮಾನಿಕೆಯು ಒಂದು ತಲೆಮಾರಿನಲ್ಲಿರುವ ಸದಸ್ಯರು ಎಲ್ಲರೂ ಈ ಯಜಮಾನನ ಪಟ್ಟವನ್ನು ಅಲಂಕರಿಸಬೇಕು. ಈ ತಲೆಮಾರಿನ ಸದಸ್ಯರ ಸರಣಿ ಮುಗಿದ ನಂತರವೇ ಮುಂದಿನ ತಲೆಮಾರಿಗೆ ಈ ಯಜಮಾನನ ಪಟ್ಟ ವರ್ಗಾಯಿಸಲ್ಪಡುತ್ತದೆ. ಈ ಯಜಮಾನನ ಪಟ್ಟವನ್ನು ಹಿರಿಯರು ಮೊದಲು, ನಂತರ ಕಿರಿಯರು ಹೀಗೆ ಅನುಕ್ರಮವಾಗಿ ನಡೆದುಕೊಂಡು ಬರುತ್ತದೆ. ಯಜಮಾನನ ಪಟ್ಟವನ್ನು ಅಲಂಕರಿಸುವವನು ದಡ್ಡನಾಗಿದ್ದರೂ ಬುದ್ಧಿಮಾಂದ್ಯನಾಗಿದ್ದರೂ ಅಂಗವಿಕಲನಾಗಿದ್ದರೂ ಅನುಕ್ರಮವಾಗಿಯೇ ಯಜಮಾನನ ಪಟ್ಟವನ್ನು ಕಟ್ಟಲಾಗುತ್ತದೆ. ಬುದ್ದಿಮಾಂದ್ಯ ಅಥವಾ ಅಂಗವಿಕಲನಾಗಿದ್ದರೆ, ದಡ್ಡನಾಗಿದ್ದರೆ ಅಂಥವರಿಗೆ ಅವರ ವಂಶದಲ್ಲಿಯೇ ಇರುವ ಅಣ್ಣ ತಮ್ಮಂದಿರು ಸೇರಿ ಒಟ್ಟು ನಾಲ್ಕು ಜನ ಅವನಿಗೆ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಸಹಕರಿಸುತ್ತಾರೆ. ಈ ಯಜಮಾನಿಕೆಯ ಸ್ಥಾನ ಮುಗಿಯುತ್ತಾ ಬಂದಿದೆ ಎಂದು ಅನಿಸಿದಾಗ ಯಜಮಾನ ಹಾಡಿಯಲ್ಲಿರುವ ಅಂಬಾಲದಲ್ಲಿ ಸಭೆ ಕರೆದು ಈ ಹಾಡಿಯ ಮುಂದಿನ ಯಜಮಾನ

ಇಂಥವರಾಗುತ್ತಾರೆ ಎಂದು ಘೋಷಿಸಿ ತನಗೆ ನೀಡಿದ ಸಹಕಾರವನ್ನು ತನ್ನ ನಂತರ ಬರುವವರಿಗೆ ನೀಡಬೇಕು ಎಂದು ಹೇಳಿ ಎಲ್ಲಾ ಜನರ ಸಮ್ಮುಖದಲ್ಲಿ ಯಜಮಾನನ ಪಟ್ಟವನ್ನು ತ್ಯಜಿಸುತ್ತಾನೆ. ಮುಂದಿನ ಯಜಮಾನನ ಆಯ್ಕೆ ವಂಶಾವಳಿಯ ಪ್ರಕಾರವೇ ಆಗುತ್ತದೆ. ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕಾಡುಕುರುಬರ ಹಾಡಿಯಲ್ಲಿ ಕಂಡುಬರುವ ಜಗಳ–ಹೊಡೆದಾಟಗಳನ್ನು ಅಂಬಾಲದಲ್ಲಿಯೇ ತೀರ್ಮಾನ ಮಾಡಲಾಗುತ್ತದೆ. ದೂರುದಾರರು ಯಜಮಾನನಿಗೆ ಮೊದಲು ದೂರನ್ನು ನೀಡುತ್ತಾರೆ. ನಂತರ ಯಜಮಾನ ದೂರುದಾರ ಯಾವ ವ್ಯಕ್ತಿಯ ಮೇಲೆ ತಪ್ಪನ್ನು ಹೊರಿಸಿರುತ್ತಾನೋ ಆ ವ್ಯಕ್ತಿಯನ್ನು ಹಾಡಿಯ ಯಜಮಾನ ಕರೆದು ವಿಚಾರಿಸಿ ಆತನ ಅಭಿಪ್ರಾಯವನ್ನು ತಿಳಿದುಕೊಂಡು ನಂತರ ಕೂಟಕ್ಕೆ ಕರೆಯುತ್ತಾರೆ. "ಕೂಟ" ಅಂದರೆ ಅಂಬಾಲದಲ್ಲಿ ನಡೆಯುವ ಪಂಚಾಯ್ತಿಗೆ ಕೂಟ ಎಂದು ಕರೆಯುತ್ತಾರೆ. ಅಂಬಾಲದಲ್ಲಿ ನಡೆಯುವ ಪಂಚಾಯ್ತಿಗೆ ಅವನನ್ನು ಬರಲು ಹೇಳುತ್ತಾನೆ. ಪಂಚಾಯ್ತಿಯು ದೂರು ನೀಡಿದ ಸಂಜೆಯಾದರೂ ನಡೆಯಬಹುದು ಅಥವಾ ಮಾರನೆಯ ದಿನದ ಸಂಜೆಯಾದರೂ ನಡೆಯಬಹುದು, ಇಲ್ಲವೇ ಎರಡು ಮೂರು ದಿನಗಳ ನಂತರವಾದರೂ ನಡೆಯಬಹುದು. ಈ ಅಂಬಾಲದಲ್ಲಿ ನ್ಯಾಯ ಪಂಚಾಯ್ತಿ ನಡೆಯುವಾಗ ಮನೆಗೆ ಒಬ್ಬರಂತಾದರೂ ಇರಲೇಬೇಕು. ಇದು ಕಡ್ಡಾಯ ಪಂಚಾಯ್ತಿಗೆ ಬರಲು ಆಗದಿದ್ದರೆ ಅಂತಹ ವ್ಯಕ್ತಿಯನ್ನು ಪಂಚಾಯ್ತಿಯು ಬರದೇ ಇರುವುದಕ್ಕೆ ಕಾರಣ ಕೇಳುತ್ತದೆ. ಕೆಲಸದ ನಿಮಿತ್ತ ಹೊರಗಡೆಯಿದ್ದರೆ ಅದು ತಪ್ಪು ಎನ್ನಿಸುವುದಿಲ್ಲ. ಮನೆಯಲ್ಲಿಯೇ ಇದ್ದು ಪಂಚಾಯ್ತಿ ನಡೆಯುವಾಗ ಬರದೇ ಇದ್ದರೆ ಅದು ತಪ್ಪು ಎಂದು ಪರಿಗಣಿಸಿ ಅವರಿಗೆ ನಾಲ್ಕಾಣೆ ಮತ್ತು ಕಬ್ಬಿಣದ ಚೂರನ್ನು ದಂಡವಾಗಿ ವಿಧಿಸಲಾಗುತ್ತದೆ. ಆಗ ಅದನ್ನು ಎಲ್ಲರ ಸಮ್ಮುಖದಲ್ಲಿ ತಂದು ಅಂಬಾಲದಲ್ಲಿ ಇರುವ ದೇವರಿಗೆ ಕೊಡಬೇಕು. ನಂತರ ಆ ನಾಲ್ಕಾಣೆಯನ್ನು ವಯಸ್ಸಾದವರಿಗೆ ಅಥವಾ ಬೇಕಾದವರಿಗೆ ಆ ದಂಡದ ಹಣವನ್ನು ನೀಡುತ್ತಾರೆ.

ಕಾಡುಕುರುಬರಲ್ಲಿ ಯಾವುದೇ ರೀತಿಯ ವ್ಯಾಜ್ಯಗಳು ಕಂಡುಬಂದರೂ ಅದು ಅಂಬಾಲದಲ್ಲಿಯೇ ನಡೆಯುತ್ತದೆ. ಹಿಂದಿನ ಕಾಲದಲ್ಲಿ ಕಂಬಕ್ಕೆ ಅಥವಾ ಮರಕ್ಕೆ ಕಟ್ಟಿ ಹೊಡೆಯುವ ಶಿಕ್ಷೆ ಸಹ ಇದ್ದಿದ್ದನ್ನು ಕಾಣಬಹದು. ಅವನು ಎಂತಹ ಶ್ರೀಮಂತನೇ ಆಗಿರಲಿ ಎಂತಹ ಪ್ರಭಾವಿ ವ್ಯಕ್ತಿಯಾಗಿರಲಿ ಅವನಿಗೂ ಸಹ ಎಲ್ಲರಿಗೂ ನೀಡುವ ಶಿಕ್ಷೆಯನ್ನು ನೀಡುತ್ತಿದ್ದರು. ಈ ಅಂಬಾಲದಲ್ಲಿ ಯಾವುದೇ ರೀತಿಯ ತಾರತಮ್ಯವನ್ನು ಅನುಸರಿಸುವಂತಿಲ್ಲ. ಆದರೆ ಇಂದು ಈ ರೀತಿಯ ಶಿಕ್ಷೆಯನ್ನು ನೀಡುತ್ತಿಲ್ಲ. ಹಿಂದೆ ಎಂತಹುದೇ ಸಮಸ್ಯೆ ಅಥವಾ ಜಗಳ, ವ್ಯಾಜ್ಯಗಳು ಕಂಡುಬಂದರೂ ಅದು ಅಂಬಾಲದಲ್ಲಿಯೇ ಬಗೆಹರಿಯುತ್ತಿದ್ದವು. ಆದರೆ ಇಂದಿನ ನಾಗರಿಕ ಸಮಾಜದ ಪ್ರಭಾವದಿಂದ ಈ ರೀತಿಯ ಶಿಕ್ಷೆಗಳನ್ನು ನೀಡಲು

ಮುಂದಾದರೆ ಕೋರ್ಟ್, ಕಛೇರಿ ಎಂದು ಹೋಗುತ್ತಾರೆ ಎಂಬ ಭಯದಿಂದ ಅಂತಹ ಶಿಕ್ಷೆಗಳನ್ನು ನಿಲ್ಲಿಸಲಾಗಿದೆ. ಸಣ್ಣ ಸಣ್ಣ ಜಗಳಗಳನ್ನು ಹಿರಿಯರು ಮಾತಿನಲ್ಲಿಯೇ ಬಗೆಹರಿಸುತ್ತಾರೆ. ಹಾಡಿಯಲ್ಲಿ ವಿನಾಕಾರಣ ಇನ್ನೊಬ್ಬರ ಮೇಲೆ ತಪ್ಪು ಹೊರಿಸಿ ಅವರನ್ನು ಹಾಡಿಯಿಂದ ಹೊರ ಹಾಕಲು ಪ್ರಯತ್ನಿಸಿದಾಗ ಇಬ್ಬರೂ ಕಡೆಯಿಂದ ನಾಲ್ಕು ಜನರು ಅಂಬಾಲದಲ್ಲಿ ಸೇರಿ ಪಂಚಾಯ್ತಿ ಮಾಡುತ್ತಾರೆ. ತಪ್ಪು ಯಾರಿಂದ ಆಗಿದೆ ಎಂಬುದು ತಿಳಿದು ಅವರಿಗೆ ೫೦ರಿಂದ ೬೦ ರೂಪಾಯಿಗಳವರೆಗೆ ದಂಡ ವಿಧಿಸುತ್ತಾರೆ. ಎಲ್ಲರ ಮುಂದೆ ಅಂಬಾಲದಲ್ಲಿ ನಿಂತು ಕ್ಷಮೆ ಕೇಳಿ ಇನ್ನು ಮುಂದೆ ಈ ರೀತಿಯಾಗಿ ತಪ್ಪು ಮಾಡುವುದಿಲ್ಲ ಎಂದು ಹೇಳಬೇಕು.

ವಿವಾಹಕ್ಕೆ ಸಂಬಂಧಿಸಿದ ನ್ಯಾಯಪದ್ಧತಿ: ಕಾಡುಕುರುಬರಲ್ಲಿ ಮೂರು ಎಲಮಗೆಯವರು ಅಥವಾ ಐದು ಎಲಮಗೆಯವರು ಅವರವರ ಕುಲದಲ್ಲಿಯೇ ವಿವಾಹ ಸಂಬಂಧವನ್ನು ಬೆಳೆಸಿದರೆ ಅವರು ಆ ಕುಲಕ್ಕೆ ಮಾಡಿದ ದೊಡ್ಡ ತಪ್ಪು ಎಂದು ಪರಿಗಣಿಸುತ್ತಾರೆ. ಹಾಗೆ ವಿವಾಹವಾದಂತಹ ಜೋಡಿಯನ್ನು ಹಾಡಿಯಿಂದಲೇ ಹೊರಹಾಕಲಾಗುತ್ತದೆ. ತಂದೆ-ತಾಯಿಗಳು ಅದೇ ಹಾಡಿಯಲ್ಲಿಯೇ ಇರುತ್ತಾರೆ. ತಮ್ಮ ತಪ್ಪನ್ನು ಕ್ಷಮಿಸಿ ಹಾಡಿಗೆ ಮತ್ತೆ ಬರುತ್ತೇವೆ ಎಂದು ಆ ವಿವಾಹಿತ ಜೋಡಿಯು ಯಜಮಾನನ ಹತ್ತಿರ ಹೋಗಿ ಕೇಳಿಕೊಂಡರೆ ಆ ತಪ್ಪಿಗೆ ಇಂತಿಷ್ಟು ದಂಡವನ್ನು ವಿಧಿಸಲಾಗುತ್ತದೆ. ಈ ದಂಡವನ್ನು ವಿಧಿಸುವಾಗ ಹತ್ತಾರು ಜನರು ಸೇರಿ ತೆಗೆದುಕೊಂಡಂತಹ ತೀರ್ಮಾನಕ್ಕೆ ಬದ್ಧರಾಗಬೇಕು. ಅಲ್ಲದೇ ಆ ವಿವಾಹಿತ ಜೋಡಿಯು ಬೇರೆ ಬೇರೆಯಾಗಬೇಕು. ಅಂದರೆ ವಿವಾಹ ಸಂಬಂಧವನ್ನು ಮುರಿದುಕೊಂಡು ಅವರು ಇನ್ನೊಂದು ಕುಲದೊಡನೆ ಅಂದರೆ(೩ ಎಲಮಗೆ, ೫ ಎಲಮಗೆಯ ಜೊತೆಯಲ್ಲಿಯೇ ೫ ಎಲಮಗೆ, ೩ ಎಲಮಗೆಯ ಜೊತೆಯಲ್ಲಿಯೇ) ವಿವಾಹವಾಗಬೇಕು. ಈ ರೀತಿಯಾಗಿ ತಪ್ಪು ಎಸಗಿದಂತಹ ಹುಡುಗಿಯನ್ನು ೫ ಎಲ ಮಗೆಯವರ ಯುವಕ ವಿವಾಹವಾಗಲು ಒಪ್ಪುತ್ತಾನೆ. ಕಾರಣ ಹಿರಿಯರೆಲ್ಲರೂ ಸೇರಿ ಆ ಹುಡುಗಿಯು ಮಾಡಿರುವ ತಪ್ಪನ್ನು ೫ ಎಲಮಗೆಯ ಹುಡುಗನಿಗೆ ಸರಿಯಾಗಿ ತಿಳಿಸಿ ಹೇಳುತ್ತಾರೆ. ಅಣ್ಣ ತಂಗಿಯಾಗಿ ಇರಬೇಕಾದಂತಹ ಆ ಯುವಕ-ಯವತಿಯು ಮಾಡಿದಂತಹ ತಪ್ಪನ್ನು ತಿಳಿಸಿ ಆ ಹುಡುಗಿಯೊಡನೆ ವಿವಾಹವಾಗಲು ಸೂಚಿಸುತ್ತಾರೆ. ಆಗ ತಪ್ಪು ಮಾಡಿದಂತಹ ಆ ಇಬ್ಬರಿಗೂ ಅಂಬಾಲದಲ್ಲಿ ತಪ್ಪನ್ನು ತೀರಿಸಲು ಅವಕಾಶವನ್ನು ಕಲ್ಪಿಸುತ್ತಾರೆ. ಹಿಂದಿನ ಕಾಲದಲ್ಲಿ ಈ ರೀತಿಯ ತಪ್ಪು ಎಸಗಿದವರಿಗೆ ನಾಲ್ಕಾಣೆ ಮತ್ತು ಕಬ್ಬಿಣದ ಚೂರನ್ನು ದಂಡವಾಗಿ ವಸೂಲಿ ಮಾಡುತ್ತಿದ್ದರು. ಇಂದು ಈ ದಂಡದ ಮೊತ್ತ ೨೦೦ರಿಂದ ೩೦೦ ರೂಗಳಿಗೆ ಏರಿಕೆಯಾಗಿದೆ. ಹಾಗೂ ಕಬ್ಬಿಣದ ಚೂರನ್ನು ದಂಡದ ರೂಪದಲ್ಲಿ ಇಂದಿಗೂ ಸಹ ಕೊಡುವ ಪದ್ಧತಿ ಕಾಡುಕುರುಬರಲ್ಲಿರುವುದು ಕಂಡುಬರುತ್ತದೆ.

ಅಂತರ್ಜಾತಿ ವಿವಾಹಕ್ಕೆ ಸಂಬಂಧಿಸಿದ ನ್ಯಾಯಪದ್ಧತಿ: ಕಾಡುಕುರುಬರ ಯುವಕ-ಯುವತಿಯರು ತಮ್ಮ ಸಮುದಾಯದವರನ್ನು ಬಿಟ್ಟು ಬೇರೆ ಜಾತಿಯವರನ್ನು ವಿವಾಹವಾದರೆ ಅಂಥವರನ್ನು ಹಾಡಿಯೊಳಗೆ ಇಂದಿಗೂ ಸೇರಿಸುವುದಿಲ್ಲ. ಯಾವುದೇ ಕಾರಣಕ್ಕೂ ಸೇರಿಸುವುದಿಲ್ಲ. ಆದರೆ ಅಂತರ್ಜಾತಿ ವಿವಾಹವಾದಂತಹ ಯುವಕ ಅಥವಾ ಯುವತಿಗೆ ಗಂಡುಮಗು ಜನಿಸಿದರೆ ಮಾತ್ರ ಅವರನ್ನು ಹಾಡಿಯೊಳಗೆ ಸೇರಿಸಲು ಅವಕಾಶವಿದೆ. ಹಾಡಿಗೆ ಸೇರಬೇಕಾದರೆ ಗಂಡುಮಗುವಿನ ತಾಯಿ ತನ್ನ ತಲೆಗೂದಲನ್ನು ನೀಡಬೇಕು. ನೀರು ಇರುವ ಜಾಗದಲ್ಲಿ ತಲೆಗೂದಲನ್ನು ತೆಗೆದು ಹಾಕಲಾಗುತ್ತದೆ. ಹುಡುಗನಿಗೆ ಸಗಣಿಯನ್ನು ಕಲಿಸಿ, ಆ ಸಗಣಿಯ ನೀರನ್ನು ಒಂದಿಷ್ಟು ಕುಡಿಯಬೇಕು. ಆಗ ಅವರನ್ನು ಹಾಡಿಗೆ ಕರೆದುಕೊಂಡು ಬಂದು ಅಂಬಾಲದ ಮುಂದಿರುವ ಕಂಬಕ್ಕೆ ತಪ್ಪನ್ನು ಒಪ್ಪಿಸಿ ನಂತರ ಅವರನ್ನು ಹಾಡಿಯೊಳಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಹೆಣ್ಣುಮಗು ಜನಿಸಿದರೆ ಅವರನ್ನು ಹಾಡಿಯೊಳಕ್ಕೆ ಸೇರಿಸಿಕೊಳ್ಳಲು ಅವಕಾಶವಿಲ್ಲ.

ಜೇನುಕುರುಬರ ನ್ಯಾಯ ಪದ್ಧತಿ

ಜೇನುಕುರುಬರಲ್ಲಿ ಪಂಚಾಯಿತಿ, ನ್ಯಾಯ, ಶಿಕ್ಷೆಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ಒಂದು ವ್ಯವಸ್ಥೆ ಇದೆ. ಪ್ರಾದೇಶಿಕವಾಗಿ ಒಂದೆಡೆ ಗುಂಪಾಗಿ ವಾಸಿಸುವ ಜೇನುಕುರುಬರು ಯಜಮಾನನ್ನು ಹೊಂದಿದ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಯಜಮಾನನೇ ಒಂದು ಹಾಡಿಯ ನ್ಯಾಯಪದ್ಧತಿಯ ಕಾರ್ಯವನ್ನು ನಿರ್ವಹಿಸುತ್ತಾನೆ ಮತ್ತು ಯಜಮಾನನ ತೀರ್ಮಾನವೇ ಅಲ್ಲಿ ಅಂತಿಮವಾಗಿರುತ್ತದೆ. ಯಜಮಾನನು ತೆಗೆದುಕೊಳ್ಳುವ ಎಲ್ಲಾ ನಿರ್ಣಯಗಳಿಗೆ ಹಾಡಿಯ ಜನರು ಬದ್ಧರಾಗಿರುತ್ತಾರೆ. ಆದರೆ ಯಜಮಾನನ ನಿರ್ಣಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವವರನ್ನು ಶಿಕ್ಷೆ ವಿಧಿಸುವ, ದಂಡ ಹಾಕುವ ಹಕ್ಕು ಯಜಮಾನನಿಗೆ ಇದೆ. ಅಲ್ಲದೇ ಹಾಡಿಯಲ್ಲಿ ಯಜಮಾನನು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಾನೆ. ಅವನ ಪಾತ್ರ ಕೇವಲ ನ್ಯಾಯಿಕ ಕಾರ್ಯಗಳಿಗೆ ಸೀಮಿತವಾಗದೆ ಹಾಡಿಯಲ್ಲಿ ನಡೆಯುವ ಪ್ರತಿಯೊಂದು ವಿಧಿಗಳಲ್ಲಿಯೂ ಯಜಮಾನನು ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ಯಜಮಾನ ಹಾಡಿಯಲ್ಲಿ ಕಂಡುಬರಬಹುದಾದ ಸಮಸ್ಯೆಗಳಾದ ಕೌಟುಂಬಿಕ ಕಲಹಗಳು, ವ್ಯವಹಾರಿಕ ಸಮಸ್ಯೆಗಳು, ಲೈಂಗಿಕ ವಿರಸ, ಅಂತರಜಾತಿ ವಿವಾಹಕ್ಕೆ ಸಂಬಂಧಿಸಿದಂತೆ, ಯಜಮಾನನಿಗೆ ಅಗೌರವ ತೋರಿಸಿದರೆ, ಕಳ್ಳತನ ಇನ್ನೂ ಮೊದಲಾದ ಸಮಸ್ಯೆಗಳು ಹಾಡಿಯಲ್ಲಿ ಕಂಡು ಬಂದಾಗ ಹಾಡಿಯ ಯಜಮಾನ ನ್ಯಾಯ ಪಂಚಾಯತಿಯ ಮೂಲಕ ಅವರಿಗೆ ಪರಿಹಾರವನ್ನು ಕೊಡಿಸುತ್ತಾನೆ. ಈ ತೀರ್ಮಾನಕ್ಕೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡರೆ

ಅಂಥವರನ್ನು ಹಾಡಿಯಿಂದ ಬಹಿಷ್ಕರಿಸುವ, ಶಿಕ್ಷೆಯನ್ನು ನೀಡುವ ಅಥವಾ ದಂಡವನ್ನು ವಿಧಿಸುತ್ತಾನೆ. ಹಾಗೆಯೇ ಈ ರೀತಿಯ ತಪ್ಪುಗಳು ಮುಂದೆ ಆಗದಂತೆ ಇರಲು ಬಂದಂತವರಿಗೆ ಸಲಹೆಗಳನ್ನು ಹಾಗೂ ಎಚ್ಚರಿಕೆಗಳನ್ನು ನೀಡುತ್ತಾನೆ.

ಕಾಡುಕುರುಬರ ಬುಂಡೆ ಕರೆಯುವುದು

ಕಾಡುಕುರುಬರಲ್ಲಿ ಬುಂಡೆ ಕರೆಯುವ ವಿಧಾನವಿದೆ. ಇದು ದೈವದರ್ಶನ ಮತ್ತು ದೈವದೊಡನೆ ಸಂಭಾಷಣೆ ಮಾಡುವ ವಿಶಿಷ್ಟ ವಿಧಾನ ಕಾಡುಕುರುಬರಲ್ಲಿದೆ. ಇದನ್ನು ಬುಂಡೆ ಕರೆಯುವುದು ಎನ್ನುತ್ತಾರೆ. ಈ ಒಂದು ಕ್ರಿಯೆ ಜೇನುಕುರುಬರು ಮತ್ತು ಕಾಡುಕುರುಬರಲ್ಲಿ ಪ್ರತ್ಯೇಕವಾಗಿ ವಿಭಿನ್ನವಾಗಿದೆ. ಕಾಡುಕುರುಬರು ಯಾವುದೇ ಕೆಲಸವನ್ನು ಮಾಡುವ ಮುನ್ನ ಬುಂಡೆ ಕರೆಯುವುದು ಸಾಮಾನ್ಯ. ಬುಂಡೆ ದೇವರು ಒಂದು ನಿರ್ಧಿಷ್ಟ ದಿನ ಮತ್ತು ಗೊತ್ತಾದ ವೇಳೆಯಲ್ಲಿ ಗುಡ್ಡಪ್ಪ ಅಥವಾ ಪೂಜಾರಿ ಅಥವಾ ಯಜಮಾನ ಅಥವಾ ಹಿರಿಯ ವ್ಯಕ್ತಿಯೋರ್ವನ ಮೇಲೆ ದೇವರು ಹಾಗೂ ಹಿರಿಯರ ಆತ್ಮಗಳನ್ನು ಅವಾಹನೆ ಮಾಡಿಕೊಂಡು ತಮ್ಮ ಕಷ್ಟ-ಸುಖಗಳನ್ನು, ದೇವತಾ ಕಾರ್ಯಗಳಿಗೆ ಸಂಬಂಧಿಸಿದಂತೆ, ಸಾವಿಗೆ ಸಂಬಂಧಿಸಿದಂತೆ, ವಿವಾಹಕ್ಕೆ ಸಂಬಂದಿಸಿದಂತೆ, ಹುಟ್ಟಿಗೆ ಸಂಬಂಧಿಸಿದಂತೆ ಮೊದಲಾದ ಶುಭಕಾರ್ಯಗಳು ಸುಗಮವಾಗಿ ನೆರವೇರುವಂತೆ ನೋಡಿಕೊಳ್ಳಲು ಈ ಬುಂಡೆ ದೇವರನ್ನು ಕಾಡುಕುರುಬರು ಕರೆಯಿಸಿಕೊಂಡು ಪ್ರಶ್ನೆಗಳನ್ನು ಕೇಳುತ್ತಾರೆ. ಈ ಒಂದು ಸಂಸ್ಕಾರ ಒಂದು ರಾತ್ರಿ ಪೂರ್ತಿ ಅಂಗಳದಲ್ಲಿ ನಡೆಯುತ್ತದೆ. ಕಾಡುಕುರುಬರು ಇದನ್ನು 'ಬಿಂಜೆ ಕಳುವುಗ' ಎಂತಲು ಕರೆಯುತ್ತಾರೆ. ಅದಕ್ಕೆ ಸಂಬಂಧಿಸಿದ ಹಾಡನ್ನು 'ಬಿಂಜೇ ಪಾಡುಗಾ' ಎಂದು ಕರೆಯುತ್ತಾರೆ. ಇದಕ್ಕೆ ಸಂಬಂಧಿಸಿದ ಹಾಡನ್ನು ಜೋರಾಗಿ ಹಾಡುವರು. ಈ ಬಿದಿರಿನ ಮೊರವನ್ನು ಹಿರಿಯ ವ್ಯಕ್ತಿ ಅಥವಾ ಗುಡ್ಡಪ್ಪ ಅಥವಾ ಯಜಮಾನನು ಈ ಬಿದಿರಿನ ಮೊರವನ್ನು ಹಿಡಿದು ಅಳ್ಳಾಡಿಸುತ್ತಾ ದೇವರು ಅಥವಾ ಹಿರಿಯರ ಆತ್ಮಗಳನ್ನು ಆಹ್ವಾನಿಸಿಕೊಳ್ಳುತ್ತಾನೆ. ಈ ಬಿದಿರಿನ ಮೊರಕ್ಕೆ ಬಿನ್‌ನಮರ್ ಅಥವಾ ಮತತುಲು ಎಂದು ಕರೆಯುತ್ತಾರೆ. ಈ ಮೊರದ ತುದಿಗೆ ನಾಲ್ಕೈದು ಗೆಜ್ಜೆಯನ್ನು ಸಹ ಕಟ್ಟಿರುತ್ತಾರೆ. ಈ ಮೊರವನ್ನು ಹಿಡಿದು ಅಳ್ಳಾಡಿಸುತ್ತ ಇರುವಾಗ ಈ ಮೊರವನ್ನು ಹಿಡಿದ ವ್ಯಕ್ತಿಯ ಹಿಂದೆ ಐದರಿಂದ ಆರು ಜನ ಸೊಲ್ಲನ್ನು ಹೇಳುತ್ತಾರೆ. ಆಗ ದೇವರು ಬಂದು ಇವರು ಕೇಳುವ ಪ್ರಶ್ನೆಗೆ ಉತ್ತರವನ್ನು ಕೊಡುತ್ತದೆ. ಅಂದು ಪೂಜೆಗೆ ಎಲೆ, ಅಡಿಕೆ, ಬಾಳೆಹಣ್ಣು, ಕಾಯಿ, ಹೂ, ಗಂಧದ ಕಡ್ಡಿ, ನಿಂಬೆಹಣ್ಣು ಮೊದಲಾದ ಪೂಜಾ ಸಾಮಾಗ್ರಿಗಳನ್ನು ಅಂದು ಪುಜೆಗೆ ಬಳಸುತ್ತಾರೆ. ದೇವರು ಬರುವ ವ್ಯಕ್ತಿಯು ಅಂದು ಮಡಿಯಾಗಿ ಇರಬೇಕು.

ಜೇನುಕುರುಬರಲ್ಲಿ ಬುರುಡೆ ಕರೆಯುವುದು

ಕಾಡುಕುರುಬರಲ್ಲಿರುವಂತೆ ಜೇನುಕುರುಬರಲ್ಲಿಯೂ ಸಹ ಬರುಡೆ ಕರೆಯುವು ವಿಧಾನವಿದೆ. ಇಲ್ಲಿಯು ಸಹ ಗುಡ್ಡಪ್ಪನು ಅಥವಾ ಯಜಮಾನನು ಪ್ರಮುಖ ಪಾತ್ರವಹಿಸುತ್ತಾರೆ. ಈ ಜೇನುಕುರಬರ ಹಾಡಿಗಳಲ್ಲಿ ಬುರುಡೆ ಕರೆಯುವ ಕುಟುಂಬಗಳು ಇರುತ್ತವೆ. ಈ ಬುರುಡೆಯನ್ನು ಸೋರೆಕಾಯಿಯಿಂದ ತಯಾರಿಸುತ್ತಾರೆ. ಬಲಿತ ಸೋರೆಕಾಯಿಯ ಬುರುಡೆಯನ್ನು ಸಣ್ಣ ವೃತ್ತಾಕಾರವಾಗಿ ಕೊರೆದು ಅದರೊಳಗಿನ ತಿರುಳನ್ನು ಒಣಗಿಸಿ ಹೊರತೆಗೆದು ಹಾಕುತ್ತಾರೆ. ನಂತರ ಗುಲಗಂಜಿಯನ್ನು ಸೋರೆ ಬುರುಡೆಯೊಳಗೆ ಹಾಕಿ ಅದನ್ನು ಜೇನಿನ ಮೇಣದಿಂದ ಅಥವಾ ಆಲದ ಮರದ ಅಂಟಿನಿಂದ ಸೋರೆಕಾಯಿಯ ಮೇಲಿನ ರಂಧ್ರವನ್ನು ಮುಚ್ಚಲಾಗುತ್ತದೆ. ಈ ಬುರುಡೆಯು ಗುಡ್ಡಪ್ಪ ಅಥವಾ ಯಜಮಾನನ ಮನೆಯಲ್ಲಿರುತ್ತವೆ. ಇವರು ದೇವರು ಅಥವಾ ಹಿರಿಯರ ಆತ್ಮಗಳನ್ನು ಕರೆಯಿಸಬೇಕು ಎಂದಾಗ ಎಲ್ಲರೂ ಯಜಮಾನನ ಸಮ್ಮುಖದಲ್ಲಿ ಚರ್ಚೆ ನಡೆಸಿ ಒಂದು ದಿನವನ್ನು ನಿಗದಿಗೊಳಿಸುತ್ತಾರೆ. ಅಂತೆಯೇ ಅಂದು ದೇವರನ್ನು ಕರೆಯಲಾಗುತ್ತದೆ. ನಿಗದಿಪಡಿಸಿದ ದಿನದಂದು ಅಂಗಳವನ್ನು ಶುಚಿಗೊಳಿಸಿ ಪೂಜೆಗೆ ಎಲ್ಲಾ ತಯಾರು ಮಾಡಲಾಗುತ್ತದೆ. ಅಂದು ಪೂಜೆಗೆ ಎಲೆ, ಅಡಿಕೆ, ಹೊಗೆಸೊಪ್ಪು, ಕರ್ಪೂರ, ಹಣ್ಣು, ಕಾಯಿ, ಗಂಧದಕಡ್ಡಿ, ನಿಂಬೆಹಣ್ಣು ಎಲ್ಲವನ್ನು ಪೂಜೆಗೆ ಇಡಲಾಗುತ್ತದೆ. ಅಂದು ಮಡಿಯಾಗಿರಬೇಕು. ಈ ದೇವರು ಅಥವಾ ಹಿರಿಯರ ಆತ್ಮಗಳನ್ನು ಕರೆಯುವ ಪೂಜೆಯು ಅಂದು ರಾತ್ರಿಯಿಂದ ಬೆಳಿಗ್ಗೆಯವರೆಗೂ ನಡೆಯುತ್ತದೆ. ಅಂದು ದೇವರು ಮತ್ತು ಆತ್ಮಗಳನ್ನು ಕರೆಯಿಸಿ ತಮ್ಮ ಕಷ್ಟ–ಸುಖಗಳಿಗೆ ಸಂಬಂಧಿಸಿದಂತೆ, ವಿವಾಹ, ಸಾವು, ಖಾಯಿಲೆಗೆ ಸಂಬಂಧಿಸಿದಂತೆ, ಬೇರೆಡೆಯಲ್ಲಿ ಮನೆ ಮಾಡುವ ಬಗ್ಗೆ, ಕುಟುಂಬದ ಸಮಸ್ಯೆಯ ಬಗ್ಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ದೇವರು ಅಥವಾ ಗುಡ್ಡಪ್ಪನ ಮೇಲೆ ಬಂದಂತಹ ಹಿರಿಯರ ಆತ್ಮಗಳು ಅವರು ಕೇಳಿದ ಪ್ರಶ್ನೆಗಳಿಗೆ ಕಾರಣ ಹಾಗೂ ಉತ್ತರಗಳನ್ನು ನೀಡಿ ಸಲಹೆ ಸೂಚನೆಗಳನ್ನು ನೀಡುತ್ತವೆ. ಅಂದು ಗುಡ್ಡಪ್ಪನು ಆದವನು ಬಿಳಿ ಅಥವಾ ಕೆಂಪು ಪಂಚೆಯನ್ನು ಹಾಗೂ ಸೊಂಟಕ್ಕೆ ಒಂದು ಟವಲ್‌ನ್ನು ಕಟ್ಟುತ್ತಾರೆ. ಮೇಲಂಗಿಯನ್ನು ತೊಡುವಂತಿಲ್ಲ. ಅಂದು ಯಜಮಾನ ದೇವರನ್ನು ಕರೆಯುತ್ತಾನೆ. ಅವರ ಹಿಂದೆ ಇನ್ನಿಬ್ಬರೂ ಯಜಮಾನರು ಹಾಗೂ ಸೊಲ್ಲು ಹೇಳಲು ಒಬ್ಬ ಮಹಿಳೆ ಇರುತ್ತಾಳೆ.

ಗುಡ್ಡಪ್ಪನ ಆಯ್ಕೆ: ಜೇನುಕುರುಬರಲ್ಲಿ ಗುಡ್ಡಪ್ಪನನ್ನು ದೇವರನ್ನು ಕೇಳುವ ಮೂಲಕ ಆಯ್ಕೆ ಮಾಡಲಾಗುತ್ತದೆ. ಯಜಮಾನನು ದೇವರನ್ನು ಕರೆದು ಗುಡ್ಡಪ್ಪ ಯಾರು ಆಗಬೇಕು ಎಂದು ಕೇಳಿದಾಗ ದೇವರು ನಾನು ಯಾರನ್ನು ಸೂಚಿಸುತ್ತೇನೆ ಅವರೇ ಗುಡ್ಡಪ್ಪ ಆಗಬೇಕು

ಹಾಗೂ ಮುಂದೆ ನಿಮ್ಮ ಎಲ್ಲ ಕಷ್ಟ-ಸುಖಗಳಿಗೆ ಸಂಬಂಧಿಸಿದಂತೆ ಇವನ ಬಳಿಯಲ್ಲಿ ಕೇಳಿಕೊಳ್ಳಿ ಎಂದು ಹೇಳುತ್ತದೆ. ಅಂದು ಬಂದಂತಹ ದೇವರು ಇಂಥವರು ಗುಡ್ಡಪ್ಪ ಆಗಬೇಕು ಎಂದಾಗ ದೇವರು ಗುಡ್ಡಪ್ಪನ ಕೈಗೆ ಒಂದು ವೀಳ್ಯದ ಎಲೆಯನ್ನು ಕೈಗೆ ಕೊಡುತ್ತದೆ. ನಂತರ ಗುಡ್ಡಪ್ಪನ ತಲೆಯ ಮೇಲೆ ಒಂದಿಷ್ಟು ಅಕ್ಕಿ ಮತ್ತು ಎಲೆಯನ್ನು, ನಿಂಬೆಹಣ್ಣನ್ನು ಇಟ್ಟು ಇಂಥವರನ್ನು ಗುಡ್ಡಪ್ಪ ಎಂದು ಹೇಳುತ್ತದೆ. ನಿಮ್ಮ ಕಷ್ಟ-ಸುಖಗಳನ್ನು ಇವನ ಬಳಿಯಲ್ಲಿ ಕೇಳಿಕೊಳ್ಳಿ ಎಂದು ಹೇಳುತ್ತದೆ. ಗುಡ್ಡಪ್ಪ ಆಗವನು ೧೦-೧೨ ವರ್ಷದ ಯುವಕನಾಗಿರಬೇಕು ಇಲ್ಲವೇ ೧೮ ವರ್ಷದ ಒಳಗಿನವರಾಗಿರಬೇಕು. ಅವರು ಜೀವಿತದ ಕೊನೆಯವರೆಗೂ ಗುಡ್ಡಪ್ಪನಾಗಿರುತ್ತಾನೆ. ಗುಡ್ಡಪ್ಪನಾದವನಿಗೆ ಎಷ್ಟೇ ಹಿರಿಯ ವ್ಯಕ್ತಿಯಾದರು ಹಾಗೂ ಹೆಣ್ಣುಮಕ್ಕಳು, ಗಂಡುಮಕ್ಕಳು ಸಹ ಗುಡ್ಡಪ್ಪನಿಗೆ ಗೌರವ ಮರ್ಯಾದೆಗಳನ್ನು ಕೊಡಬೇಕು.

ಕಾಡುಕುರುಬ ಮತ್ತು ಜೇನುಕುರುಬರ ಜನನ ಸಂಬಂಧಿ ಆಚರಣೆಯಲ್ಲಿನ ಸ್ಥಿತ್ಯಂತರಗಳು

ಜನನ ಪ್ರತಿ ಸಮುದಾಯಕ್ಕೆ ಸಂತಸ ನೀಡುವಂತದ್ದು. ಮಾನವನು ಹುಟ್ಟಿನಿಂದ ಸಾವಿನವರೆಗೂ ಅನೇಕ ಸಂಸ್ಕಾರಗಳನ್ನು ಮಾಡುತ್ತಾರೆ. ಸಂಸ್ಕಾರ ಆಚರಣೆ ಪ್ರತಿಯೊಂದು ಸಮಾಜದ ವಿಶಿಷ್ಟ ಸಂಪ್ರದಾಯ ಎನಿಸಿಕೊಳ್ಳುತ್ತದೆ. ಮದುವೆ ಎಂಬ ಸಂಸ್ಕಾರದ ಮೂಲಕ ಒಂದಾದ ಜೋಡಿಗೆ ಗರ್ಭಧಾನ ಸಂಸ್ಕಾರದ ಮೂಲಕ ಆಚರಣೆ ಆರಂಭವಾಗುತ್ತವೆ. ಕಾಡುಕುರುಬ ಮತ್ತು ಜೇನುಕುರುಬರು ಹಿಂದಿನ ಕಾಲದಲ್ಲಿ ಹೆರಿಗೆಯನ್ನು ತಮ್ಮ ಹಾಡಿಯಲ್ಲಿಯೇ ಹಿರಿಯ ಅನುಭವಿ ಮಹಿಳೆ ಅಥವಾ ಸೂಲಗಿತ್ತಿಯ ನೇತೃತ್ವದಲ್ಲಿ ಹೆರಿಗೆ ಮಾಡಿಸುವುದನ್ನು ಕಾಣಬಹುದು. ಆದರೆ ಇಂದು ಅವರು ನಾಡಿಗೆ ಸಮೀಪವಾಗಿರುವುದರಿಂದ ಈ ಎರಡು ಸಮುದಾಯಗಳ ಜನರು ಇಂದು ಆಧುನಿಕ ಆಸ್ಪತ್ರೆಗಳಲ್ಲಿ ತಮ್ಮ ಹೆಣ್ಣುಮಕ್ಕಳಿಗೆ ಹೆರಿಗೆ ಸಮಯದಲ್ಲಿ ಯಾವುದೇ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ಅವರು ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವುದನ್ನು ಕಾಣಬಹುದು. ಆದರೆ ಈ ಕಾಡುಕುರುಬ ಸಮುದಾಯದಲ್ಲಿ ಇಂದು ಯಾರಾದರೂ ಆಸ್ಪತ್ರೆಯಲ್ಲಿ ಹೆರಿಗೆಯಾದರೆ ಅವರ ಸಮುದಾಯದ ಕಟ್ಟೆಮನೆ ಅಥವಾ ಅಂಬಾಲ(ನ್ಯಾಯ ಮಾಡುವ ಜಾಗ)ಕ್ಕೆ ಇಂತಿಷ್ಟು ಎಂದು ತಪ್ಪು ಕಟ್ಟುವ ಪದ್ಧತಿ ಕಾಡುಕುರುಬರಲ್ಲಿ ಇಂದಿಗೂ ಇದೆ. ಜೇನುಕುರುಬರಲ್ಲಿ ಈ ತರಹದ ಯಾವುದೇ ತಪ್ಪು ಕಟ್ಟುವ ಆಚರಣೆ ಇಲ್ಲ. ಕಾಡುಕುರುಬರಲ್ಲಿ ೭ ದಿನಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ಆದರೆ ಜೇನುಕುರುಬರು ಇಂದು ಮೂರು ತಿಂಗಳವರೆಗೂ ಸೂತಕವನ್ನು ಇಂದಿಗೂ ಆಚರಿಸುವುದನ್ನು ನಾವು ಕಾಣಬಹುದಾಗಿದೆ.

ನಾಮಕರಣಶಾಸ್ತ್ರ ಆಚರಣೆಯಲ್ಲಿ ಬದಲಾವಣೆ

ಸಾಮಾನ್ಯವಾಗಿ ಹೆಸರಿಡುವ ಪದ್ಧತಿ ಎಂದು ಕರೆಯುವ ಈ ನಾಮಕರಣ ಆಚರಣೆಯು ಕಾಡುಕುರುಬರಲ್ಲಿ ಐದು ಅಥವಾ ಆರು ತಿಂಗಳು ಇನ್ನೂ ಕೆಲವರು ಒಂದು ವರ್ಷದ ನಂತರ ನಾಮಕರಣಶಾಸ್ತ್ರ ಮಾಡುವುದನ್ನು ಕಾಣಬಹುದು. ಹಾಗೆಯೇ ಜೇನುಕುರುಬರಲ್ಲಿ ನಾಲ್ಕನೆ ತಿಂಗಳಿಗೆ ನಾಮಕರಣಶಾಸ್ತ್ರವನ್ನು ಮಾಡುತ್ತಾರೆ. ಅಂದು ಈ ಎರಡು ಸಮುದಾಯದವರು ಸಹ ದೇವರನ್ನು ಕರೆಯುವ ಪದ್ಧತಿ ಈಗಲೂ ಇದೆ. ಹಾಗೆಯೇ ಕಾಡುಕುರುಬ ಹಾಗೂ ಜೇನುಕುರುಬರು ಹಿಂದಿನ ಕಾಲದಲ್ಲಿ ನಾಮಕರಣಶಾಸ್ತ್ರದ ದಿನ ಕೇವಲ ಎಲೆ, ಅಡಿಕೆ, ಹೊಗೆಸೊಪ್ಪನ್ನು ಕೊಡುತ್ತಿದ್ದರು. ಆದರೆ ಇಂದು ಅವರ ಹಾಡಿಯಲ್ಲಿ ಬಂದಂತಹ ಅತಿಥಿಗಳಿಗೆ ಊಟವನ್ನು ಹಾಕಿಸುವುದು, ಮಗುವಿಗೆ ಉಡುಗೊರೆಯನ್ನು ತಂದು ಕೊಡುವಂತಹ ಆಧುನಿಕ ಜನರ ಒಂದು ಸಂಪ್ರದಾಯ ಈ ಎರಡು ಸಮುದಾಯದಲ್ಲಿ ಕಾಣಬಹುದಾಗಿದೆ. ಅಲ್ಲದೇ ಈ ಎರಡು ಸಮುದಾಯದ ಗಂಡು ಮತ್ತು ಹೆಣ್ಣುಮಕ್ಕಳಿಗೆ ಎರಡೆರಡು ಹೆಸರು ಇರುವುದನ್ನು ಕಾಣಬಹುದು. ಕಾರಣ ಕಾಡುಕುರುಬ ಮತ್ತು ಜೇನುಕುರುಬರು ಹೆಚ್ಚಾಗಿ ತಮ್ಮ ಹಿರಿಯರ ಹಾಗೂ ತಮ್ಮ ದೇವರ ಹೆಸರುಗಳನ್ನು ಇಡುತ್ತಾರೆ. ಶಾಲೆಗೆ ಸೇರಿದಂತಹ ಸಂದರ್ಭದಲ್ಲಿ ಒಂದೇ ಹೆಸರಿನ ಮಕ್ಕಳ ಸಂಖ್ಯೆ ಹೆಚ್ಚು ಕಂಡುಬರುತ್ತದೆ. ಆದಕಾರಣ ಅವರಿಗೆ ಶಾಲೆಯಲ್ಲಿ ಆಧುನಿಕ ಹೆಸರುಗಳನ್ನು ಇಟ್ಟಿದ್ದಾರೆ. ಆದರೆ ಕಾಡುಕುರುಬ ಮತ್ತು ಜೇನುಕುರುಬರು ತಮ್ಮ ಮಕ್ಕಳಿಗೆ ಇಟ್ಟ ಹೆಸರುಗಳನ್ನೇ ಕೂಗುತ್ತಾರೆ. ಅವರು ಆಧುನಿಕ ಹೆಸರುಗಳಿಂದ ಅವರನ್ನು ಕರೆಯುವುದಿಲ್ಲ. ಹಿಂದಿನ ಕಾಲದಲ್ಲಿ ಯಾವುದಾದರೂ ಕಾರ್ಯವನ್ನು ಮಾಡಬೇಕು ಎಂದಾಗ ಅವರು ಬಂಧು-ಬಾಂಧವರಿಗೆ ತಿಳಿಸಲು ಕಾಲ್ನಡಿಗೆಯಲ್ಲಿ ಹೋಗಿ ವಿಷಯ ತಿಳಿಸಿ ಬರುತ್ತಿದ್ದರು. ಆದರೆ ಇಂದು ಅವರನ್ನು ಆಧುನಿಕತೆಯ ಪ್ರಭಾವ ಬೀರಿರುವುದರಿಂದ ಇವರುಗಳು ಇಂದು ಮೊಬೈಲ್‌ನ್ನು ಬಳಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಆದರೆ ಇವರು ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡಲು ತಯಾರಿಲ್ಲ ಆದರೂ ಇವರಲ್ಲಿ ಆಧುನಿಕತೆಯು ಪ್ರಭಾವ ಬೀರಿ ಸ್ವಲ್ಪಮಟ್ಟಿನ ಬದಲಾವಣೆಯನ್ನು ತಂದಿದೆ.

ಕಾಡುಕುರುಬ ಮತ್ತ ಜೇನುಕುರುಬರ ಋತುಮತಿ ಆಚರಣೆಯಲ್ಲಿನ ಸ್ಥಿತ್ಯಂತರಗಳು

ಪ್ರಕೃತಿದತ್ತವಾಗಿ ವಯಸ್ಸಿಗೆ ಬಂದ ಹೆಣ್ಣುಮಗಳೊಬ್ಬಳು ಋತುಮತಿಯಾಗುವುದನ್ನು ಮೈನೆರೆದಳು, ದೊಡ್ಡವಳಾದಳು ಇತ್ಯಾದಿ ಹಲವಾರು ರೀತಿಯಾಗಿ ಹೇಳುತ್ತಾರೆ. ಪ್ರತಿ ಸಮಾಜವು ಹೆಣ್ಣು ಪ್ರೌಢಾವಸ್ಥೆಗೆ ಬಂದಾಗ ಅವಳಲ್ಲಿ ಉಂಟಾಗಬಹುದಾದ ದೈಹಿಕ ಬದಲಾವಣೆ ಗುರುತಿಸಿ ಅದಕ್ಕೆ ಸಂಬಂಧಪಟ್ಟಂತೆ ಸಾಂಪ್ರದಾಯಿಕ ಆಚರಣೆಯನ್ನು

ಮಾಡುವ ಮೂಲಕ ಲೌಕಿಕ ಪ್ರಪಂಚಕ್ಕೆ ಪರಿಚಯಿಸುತ್ತಾರೆ. ಇಂತಹ ಶಾಸ್ತ್ರವನ್ನು ಕಾಡುಕುರುಬರು ೧೬ ದಿನಗಳು ಕಳೆದ ನಂತರ ಮಾಡುತ್ತಾರೆ. ಮತ್ತು ಜೇನುಕುರುಬರು ೫-೬ ತಿಂಗಳ ನಂತರ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಕಾಡುಕುರುಬರು ಹೆಣ್ಣು ಋತುಮತಿಯಾದಳು ಎಂದರೆ ಅದನ್ನು ಯಾರಿಗೂ ತಿಳಿಸದೆ ಗೌಪ್ಯವಾಗಿ ಇಡುತ್ತಿದ್ದರು. ಕಾರಣ ಹುಡುಗರು ಕಣ್ಣು ಹಾಕುತ್ತಾರೆ. ಯಾರಾದರೂ ಮದುವೆಗೆ ಕೇಳುತ್ತಾರೆ ಎಂಬ ಭಯ ಇವರಲ್ಲಿ ಕಾಣುತ್ತಿತ್ತು. ಆದರೆ ಜೇನುಕುರುಬರಲ್ಲಿ ಈ ರೀತಿ ಇರಲಿಲ್ಲ. ಆದರೆ ಇಂದು ಕಾಡುಕುರುಬರು ಹೆಣ್ಣು ಋತುಮತಿಯಾದರೆ ಸಂತೋಷದಿಂದ ಎಲ್ಲರಿಗೂ ತಿಳಿಸಿ ಒಂದು ದಿನ ಅದ್ದೂರಿಯಾಗಿ ಋತುಮತಿಶಾಸ್ತ್ರ ಮಾಡುತ್ತಾರೆ. ಬಂದಂತವರಿಗೆ ಪಾಯಸದಂತಹ ಸಿಹಿ ಊಟವನ್ನು ಹಾಕಿಸುತ್ತಾರೆ. ಆಹ್ವಾನ ಪತ್ರಿಕೆಗಳನ್ನು ಹಂಚುತ್ತಾರೆ. ಹಾಗೆಯೇ ಜೇನುಕುರುಬರಲ್ಲಿಯು ಸಹ ಇದೇ ರೀತಿಯಾದ ಬದಲಾವಣೆಯನ್ನು ಕಾಣಬಹುದು. ಅಲ್ಲದೇ ಬಂದಂತಹವರು ಋತುಮತಿಯಾದ ಹುಡುಗಿಗೆ ಒಡವೆ, ಹಣ ಮೊದಲಾದ ಉಡುಗೊರೆಗಳನ್ನು ನೀಡುವುದನ್ನು ಕಾಣಬಹುದು. ಅಲ್ಲದೇ ಫೋಟೋ, ವಿಡಿಯೋಗಳನ್ನು ಸಹ ಮಾಡಿಸುತ್ತಾರೆ.

ಕಾಡುಕುರುಬ ಮತ್ತು ಜೇನುಕುರುಬರ ವಿವಾಹ ಪದ್ಧತಿಯಲ್ಲಿನ ಸ್ಥಿತ್ಯಂತರಗಳು

ಮಾನವ ಜೀವನದಲ್ಲಿನ ಅತ್ಯಂತ ಮಹತ್ವದ ಘಟ್ಟವೆಂದರೆ ವಿವಾಹ. ಪ್ರಾಚೀನ ಕಾಲದಿಂದಲೂ ಮನುಷ್ಯ ತನ್ನ ವಂಶಾಭಿವೃದ್ಧಿಗಾಗಿ 'ಮದುವೆ' ಎಂಬ ಸಂಪ್ರದಾಯವೊಂದನ್ನು ಸಮುದಾಯದಲ್ಲಿ ರೂಢಿಗೆ ತಂದ. ಸ್ವಚ್ಚಂದ ಲೈಂಗಿಕತೆಗೆ ತಡೆಹಾಕುವ ಸಲುವಾಗಿ ಸಮಾಜದ ನೀತಿ, ನಿಯಮಗಳಿಗೆ ಒಳಪಟ್ಟು ದಾಂಪತ್ಯ ಸುಖವನ್ನು ಅನುಭವಿಸುವ ದಿಕ್ಕಿನಲ್ಲಿ ಈತ ರೂಪಿಸಿಕೊಂಡ ಈ ವಿವಾಹ ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿತು. ಇಂತಹ ಒಂದು ಸಾಮಾಜಿಕ ಸಂಸ್ಥೆಯಲ್ಲಿ ಒಂದಾದ ವಿವಾಹದಲ್ಲಿ ಬದಲಾವಣೆಗಳು ಕಾಲಮಾನಕ್ಕೆ ತಕ್ಕಂತೆ ಎಲ್ಲಾ ಸಮುದಾಯಗಳಲ್ಲೂ ಸಂಭವಿಸುತ್ತಿರುವುದನ್ನು ಕಾಣಬಹುದು.

ಕಾಡುಕುರುಬರಲ್ಲಿ ಮತ್ತು ಜೇನುಕುರುಬರಲ್ಲಿ ಈ ಹಿಂದೆ ಬಾಲ್ಯವಿವಾಹ ಇತ್ತು ಎಂಬುದನ್ನು ತಿಳಿಸುತ್ತಾರೆ. ಆದರೆ ಇಂದು ಅವರಿಬ್ಬರಲ್ಲಿ ನಾಗರಿಕ ಪ್ರಜ್ಞೆ ಬೆಳೆದಿದ್ದು ಅವರಿಗೆ ಸರಕಾರದ ಕಾನೂನಿನ ನಿಯಮಗಳು ತಿಳಿದಿದ್ದು. ಅವರು ಇಂದು ಬಾಲ್ಯವಿವಾಹವನ್ನು ಮಾಡುವುದನ್ನು ನಿಲ್ಲಿಸಿದ್ದಾರೆ. ಹಿಂದೆ ಈ ಎರಡು ಸಮುದಾಯದಲ್ಲಿ ಪ್ರೇಮವಿವಾಹಗಳು ಕಂಡುಬರುತ್ತಿದ್ದವು. ಇದನ್ನು ಅವರ ಭಾಷೆಯಲ್ಲಿ ಕೂಡಿಕೊಳ್ತಾರೆ ಎಂದು ಹೇಳುವರು. ಆದರೆ ಇಂದು ಕಾಡುಕುರುಬ ಮತ್ತು ಜೇನುಕುರುಬರಲ್ಲಿ ಈ ರೀತಿಯ ವಿವಾಹಗಳು

ಕಡಿಮೆಯಾಗುತ್ತಿವೆ. ಇಂದು ತಂದೆ–ತಾಯಿಗಳು ನೋಡಿದ ಹುಡುಗಿಯ ಜೊತೆ ವಿವಾಹವಾಗುವುದನ್ನು ಕಾಣಬಹುದು. ಅಲ್ಲದೇ ಎರಡು ಸಮುದಾಯಗಳಲ್ಲಿ ತಮಗಿಷ್ಟ ಬಂದ ಬೇರೆ ಜಾತಿಯ ಹುಡುಗ ಅಥವಾ ಹುಡುಗಿಯನ್ನು ಮದುವೆಯಾಗುತ್ತಿದ್ದಾರೆ. ಅಂದರೆ ಅಂತರಜಾತಿ ವಿವಾಹ. ಹಿಂದೆ ಅಂತರಜಾತಿ ವಿವಾಹವನ್ನು ಒಪ್ಪುತ್ತಿರಲಿಲ್ಲ. ಆದರೆ ಇಂದು ಜಾಗತೀಕರಣದ ಸಂದರ್ಭದಲ್ಲಿ ಅನಿವಾರ್ಯವಾಗಿ ಒಪ್ಪಿಗೆ ಕೊಡಬೇಕಾಗಿದೆ. ಅಲ್ಲದೆ ಈ ಎರಡು ಸಮುದಾಯದಲ್ಲಿ ಮದುವೆಯನ್ನು ಅದ್ದೂರಿಯಾಗಿ ಆಚರಿಸುವ, ಆಹ್ವಾನ ಪತ್ರಿಕೆಯನ್ನು ಹಂಚುವುದು, ಬೆಲೆಬಾಳುವ ಉಡುಗೊರೆಯನ್ನು ಕೊಡುವಂತಹದು, ವಿವಾಹಕ್ಕೆ ಬಂದಂತಹವರಿಗೆಲ್ಲ ಸಿಹಿಯೂಟವನ್ನು ಹಾಕಿಸುವುದು, ವರದಕ್ಷಿಣೆ ಪಡೆಯುವುದು, ಮದುವೆಯಾಗುವ ಗಂಡು–ಹೆಣ್ಣಿಗೆ, ಒಡವೆ, ರೇಷ್ಮೆ ಸೀರೆ, ಪ್ಯಾಂಟ್ ಶರ್ಟುಗಳನ್ನು ಕೊಡಿಸುವಂತಹುದು ಇಂದು ಇವರಲ್ಲಿ ಕಂಡುಬರುತ್ತಿದೆ.

ಕಾಡುಕುರುಬ ಮತ್ತು ಜೇನುಕುರುಬರ ಸಾವಿನ ಸಂದರ್ಭದ ಆಚರಣೆಯಲ್ಲಿನ ಸ್ಥಿತ್ಯಂತರಗಳು

ಸಾವು ಮಾನವನ ಜೀವನದ ಅಂತಿಮ ಘಟ್ಟ. ಹುಟ್ಟಿದವನು ಸಾಯಲೇ ಬೇಕು. ಹಿಂದಿನ ಕಾಲದಲ್ಲಿ ಕಾಡುಕುರುಬರು ಮತ್ತು ಜೇನುಕುರುಬರ ಹಾಡಿಗಳಲ್ಲಿ ಯಾರಾದರೂ ಸತ್ತರೆ ಅಂಥವರನ್ನು ಮಣ್ಣು ಮಾಡಿ ಬಂದು ತಮ್ಮ ಮೊದಲ ಹಾಡಿಯ ಜಾಗವನ್ನು ಬಿಟ್ಟು ಬೇರೊಂದು ಕಾಡಿಗೆ ಹೋಗಿ ಹಾಡಿಯನ್ನು ಕಟ್ಟಿಕೊಳ್ಳುತ್ತಿದ್ದರು. ಕಾಡುಕುರುಬರಲ್ಲಿ ಯಾರೇ ಸತ್ತರು ಅವರನ್ನು ಹೂಳುವ ಪದ್ಧತಿ ಇರುವುದನ್ನು ಕಾಣಬಹುದು. ಆದರೆ ಜೇನುಕುರುಬರಲ್ಲಿ ನೇಣು ಹಾಕಿಕೊಂಡು ಸತ್ತರೆ ಹಾಗೂ ಪೋಸ್ಟ್‌ಮಾರ್ಟಂ ಆದಂತಹ ದೇಹಗಳನ್ನು ಸುಟ್ಟು ಬಿಡುತ್ತಾರೆ. ಇನ್ನುಳಿದಂತಹ ಶವಗಳನ್ನು ಹೂಳುತ್ತಾರೆ. ಈ ಎರಡು ಸಮುದಾಯಗಳಲ್ಲಿ ಸತ್ತವರಿಗೆ ಮೊದಲು ಯಜಮಾನನೇ ಮೊದಲು ಪೂಜೆಯನ್ನು ಸಲ್ಲಿಸಬೇಕು. ಕಾಡುಕುರುಬ ಮತ್ತು ಜೇನುಕುರುಬರಲ್ಲಿ ಸತ್ತವರ ಶವವನ್ನು ಹೊರಲು ಅಣ್ಣ ತಮ್ಮಂದಿರಿಗೆ ಮೊದಲು ಅವಕಾಶ ಮಾಡಿಕೊಡಲಾಗುತ್ತದೆ. ನಂತರ ನೆರೆಹೊರೆಯವರು ಶವವನ್ನು ಹೊರಬಹುದು. ಕಾಡುಕುರುಬರು ೯ನೆ ದಿನಕ್ಕೆ ಸೂತಕದ ಆಚರಣೆಯನ್ನು ಮಾಡಿದರೆ ಜೇನುಕುರುಬರು ಮೂರು ತಿಂಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ಈ ಎರಡು ಸಮುದಾಯದಲ್ಲಿ ಸತ್ತಂತಹ ವ್ಯಕ್ತಿಗಳನ್ನು ಗೌರವದಿಂದ ಕಾಣುತ್ತಾರೆ. ಸತ್ತವರಿಗೆ ವಿಶೇಷ ಪೂಜೆಗಳನ್ನು ಮಾಡಿಸಿ ಅವರ ಆತ್ಮಗಳನ್ನು ತಮ್ಮ ಹಿರಿಯರ ಆತ್ಮಗಳೊಂದಿಗೆ ಸೇರಿಸುತ್ತಾರೆ. ಅಲ್ಲದೇ ಅವರಿಗೆಂದು ವರ್ಷದಲ್ಲಿ ಹಬ್ಬಗಳನ್ನು ಮಾಡುತ್ತಾ ಅವರಿಗೆ ಪ್ರಿಯವಾದ ಅಡುಗೆಯನ್ನು ಮಾಡಿ ಅವರನ್ನು ನೆನೆಯುತ್ತಾರೆ. ಅಲ್ಲದೇ ಈ ಸಮುದಾಯಗಳಲ್ಲಿ ಯಾರಿಗಾದರೂ ತೊಂದರೆ ಖಾಯಿಲೆಯಂತಹ ಸಮಸ್ಯೆಗಳು ಕಂಡುಬಂದರೆ ಅವುಗಳನ್ನು

ಸತ್ತವರ ಆತ್ಮಗಳನ್ನು ಕರೆಯಿಸುವ ಮೂಲಕ ಪರಿಹಾರವನ್ನು ಈಗಲೂ ಸಹ ಕಂಡುಕೊಳ್ಳುತ್ತಾರೆ. ಆದರೆ ಈ ಸಮುದಾಯಗಳು ಹಿಂದಿನ ಕಾಲದಲ್ಲಿ ಯಾರಾದರೂ ಸತ್ತರೆ, ಅವರನ್ನು ಕಾಡಿನಲ್ಲಿಯೇ ಹೂಳುತ್ತಿದ್ದರು ಮತ್ತು ಸತ್ತವರ ಸಮಾಧಿಗಳು ಅವರಿಗೆ ದೇವಸ್ಥಾನಗಳಾಗಿದ್ದವು. ಆದರೆ ಇಂದು ಸತ್ತಂತಹ ವ್ಯಕ್ತಿಗಳನ್ನು ತಮ್ಮ ತಮ್ಮ ಹೊಲಗಳಲ್ಲಿ, ಪಟ್ಟಣದ ರುದ್ರಭೂಮಿಯಲ್ಲಿಯೇ ಸತ್ತವರನ್ನು ಮಣ್ಣು ಮಾಡುತ್ತಿದ್ದಾರೆ. ಅಲ್ಲದೇ ಹಿಂದೆ ಯಾರಾದರೂ ಸತ್ತರೆ ಹೆದರಿ ಬೇರೆಡೆಗೆ ಹೋಗುವ ಪದ್ಧತಿ ಇತ್ತು. ಆದರೆ ಇಂದು ಅಲ್ಲಿಯೇ ವಾಸ ಮಾಡುತ್ತಾರೆ. ಇಂತಹ ಸಾವಿನ ನಂತರದ ಎಲ್ಲಾ ವಿಧಿ–ವಿಧಾನಗಳಲ್ಲಿ ಬದಲಾವಣೆಗಳು ಹೆಚ್ಚಾಗಿ ಕಂಡು ಬಂದಿಲ್ಲ.

ಕಾಡುಕುರುಬ ಮತ್ತು ಜೇನುಕುರುಬರ ನ್ಯಾಯಪದ್ಧತಿಯಲ್ಲಿನ ಸ್ಥಿತ್ಯಂತರಗಳು

ಇಂದು ಬಹುತೇಕ ಬುಡಕಟ್ಟುಗಳು ಅನೇಕ ಕಾರಣಗಳಿಂದಾಗಿ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಲಿವೆ. ನಾಗರಿಕತೆ, ಆಧಿನಿಕತೆಯ ಪ್ರಭಾವದಿಂದ ಬುಡಕಟ್ಟು ಜನರಲ್ಲಿ ಬದಲಾವಣೆಯ ಗಾಳಿ ಬೀಸಿದೆ. ಆದರೆ ಇಂದು ಕಾಡುಕುರುಬರ ಕಟ್ಟೆಮನೆಯಲ್ಲಿ ನಡೆಯುವ ನ್ಯಾಯ ಪಂಚಾಯತಿಯಲ್ಲಿ ನಡೆಯುವ ನ್ಯಾಯಿಕ ತೀರ್ಮಾನಗಳಿಗೆ ಅಲ್ಲಿನ ಹಾಡಿಯ ಜನರೆಲ್ಲಾ ಇಂದು ಸಹ ಗೌರವದಿಂದ ಅದಕ್ಕೆ ಬದ್ಧರಾಗಿ ನಡೆದುಕೊಳ್ಳುತ್ತಿರುವುದನ್ನು ಕಾಣಬಹುದು. ಅಲ್ಲಿ ಯಾರೆ ತಪ್ಪು ಮಾಡಿದರು ಅಂಬಾಲದಲ್ಲಿಯೇ ತಮ್ಮ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಬೇಕು. ಆದರೆ ಕೆಲವರು ಅಂಬಾಲದಲ್ಲಿ ನೀಡಿದ ತೀರ್ಪಿಗೆ ಬದ್ಧರಾಗದೇ ಇದ್ದಂತಹ ಸಂದರ್ಭದಲ್ಲಿ ಅವರಿಗೆ ಶಿಕ್ಷೆಯನ್ನು ನೀಡಿದರೆ ಅವರು ಪೋಲಿಸ್ ಠಾಣೆಯ ಮೆಟ್ಟಿಲು ಏರುತ್ತಾರೆ ಎಂಬ ಭಯದಿಂದ ಅವರಲ್ಲಿಯೇ ಕುಳಿತು ಮಾತಿನ ಮೂಲಕವೇ ಬಗೆಹರಿಸಬಹುದಾದ ಒಂದು ಅನಿವಾರ್ಯತೆ ಇಂದು ಕಾಡುಕುರುಬರಲ್ಲಿ ಕಾಣಬಹುದು. ಹಿಂದೆ ಇದ್ದಂತಹ ದೈಹಿಕ ಶಿಕ್ಷೆಗಳು ಇಂದು ಕಾಣುವುದಿಲ್ಲ. ಹಾಗೆಯೇ ಜೇನುಕುರುಬ ಬುಡಕಟ್ಟಿನಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ಅಲ್ಲಿಯ ನ್ಯಾಯಿಕ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದನ್ನು ಕಾಣಬಹುದು. ನ್ಯಾಯಿಕ ಕಾರ್ಯವನ್ನು ನಿರ್ವಹಿಸುವ ಯಜಮಾನನಿಗೆ ಸಿಗಬೇಕಾದ ಗೌರವಾಧಾರಗಳು ಇಂದು ಕಣ್ಮರೆಯಾಗುತ್ತಿವೆ. ಜೇನುಕುರುಬರ ಹಾಡಿಯಲ್ಲಿ ಏನಾದರೂ ನ್ಯಾಯಿಕ ಕಾರ್ಯಗಳು ನಡೆಯಬೇಕಾದರೆ ಅಲ್ಲಿಗೆ ಭೇಟಿನೀಡಿದ ಯಾರಾದರು ನಾಗರಿಕ ಪ್ರಪಂಚದ ವ್ಯಕ್ತಿಗಳ ಮೂಲಕ ಅಲ್ಲಿ ಕಂಡುಬರುವ ವ್ಯಾಜ್ಯಗಳನ್ನು ಸರಿಪಡಿಸುವುದನ್ನು ನಾವು ಇಂದು ಕಾಣಬಹುದಾಗಿದೆ. ಇಂದು ಹಾಡಿಗಳಲ್ಲಿ ದೈಹಿಕ ಶಿಕ್ಷೆ, ಬಹಿಷ್ಕಾರದಂತಹ ಶಿಕ್ಷೆಯನ್ನು ನೀಡುವಂತಿಲ್ಲ. ಆದರೆ ಸ್ವಲ್ಪ ಮಟ್ಟಿನ ಹಣವನ್ನು ದಂಡದ ರೂಪದಲ್ಲಿ ಕಟ್ಟಿಸಿಕೊಂಡು ಅವರ ತಪ್ಪನ್ನು ಮನ್ನಿಸಲಾಗುತ್ತಿದೆ. ಈ ಜನರಲ್ಲಿ ನ್ಯಾಯವ್ಯವಸ್ಥೆಯ ಬಗ್ಗೆ ಅಸಡ್ಡೆ ಭಾವನೆ ಮೂಡಿ ಬಂದಿದೆ.

ಬುಂಡೆ ಮತ್ತು ಬುರುಡೆ ಪದ್ಧತಿ

ಬುಂಡೆ ಮತ್ತು ಬುರುಡೆ ಕರೆಯುವ ಪದ್ಧತಿಯು ಕಾಡುಕುರುಬ ಮತ್ತು ಜೇನುಕುರುಬರಲ್ಲಿರುವಂತಹ ಒಂದು ವಿಶಿಷ್ಟ ಪದ್ಧತಿಯಾಗಿದೆ. ಇಂತಹ ಆಚರಣೆಯ ಮೂಲಕ ಈ ಎರಡು ಸಮುದಾಯಗಳು ಇಂದಿಗೂ ಸಹ ತಮ್ಮ ಕಷ್ಟ ನಷ್ಟವನ್ನು, ಪರಿಹರಿಸಿಕೊಳ್ಳುವ ಹಾಗೂ ಸಣ್ಣ ಪುಟ್ಟ ರೋಗರುಜಿನಗಳನ್ನು ವಾಸಿಮಾಡಿಕೊಳ್ಳುವಂತಹ ಒಂದು ವಿಶಿಷ್ಟ ಪದ್ಧತಿ ಈ ಬುಂಡೆ ಮತ್ತು ಬುರುಡೆ ಕರೆಯುವ ಆಚರಣೆಯಲ್ಲಿ ಕಾಣಬಹುದಾಗಿದೆ. ಇಂತಹ ಆಧುನಿಕ ಯುಗದಲ್ಲಿಯು ಈ ತರಹದ ಆಚರಣೆಯನ್ನು ಮುಂದುವರೆಸಿಕೊಂಡು ಬಂದು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಆದರೆ ಈ ಬುಡಕಟ್ಟುಗಳು ತಮ್ಮ ಆಚರಣೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳದೇ ಯಥಾಸ್ಥಿತಿಯಲ್ಲಿಯೇ ಕಾಪಾಡಿಕೊಂಡು ಬಂದಿದ್ದಾರೆ.

ಅಡಿಟಿಪ್ಪಣಿ

೧. ಮೇತ್ರಿ ಕೆ.ಎಂ., ಬುಡಕಟ್ಟು ನ್ಯಾಯವ್ಯವಸ್ಥೆ, (ಸಂ)ಪ್ರಭಾಕರ ಎ.ಎಸ್., ಆದಿವಾಸಿ ಆಖ್ಯಾನ, ಪುಟ-೨೦೬.

೨. ಕನ್ನಡ ವಿಷಯ ವಿಶ್ವಕೋಶ, ಜಾನಪದ, ಪು.ಸಂ-೩೧೬

ಅಧ್ಯಾಯ ಐದು

ವಾರ್ಷಿಕಾವರ್ತನ ಆಚರಣೆಗಳು

ಕಾಡುಕುರುಬರು ಯುಗಾದಿ, ಗೌರಿಹಬ್ಬ, ದೀಪಾವಳಿ ಮೊದಲಾದ ಹಬ್ಬಗಳನ್ನು ಆಚರಿಸುವಂತೆ ಅವರ ಸಮುದಾಯಕ್ಕೆ ಸಂಬಂಧಿಸಿದ ಹಬ್ಬಗಳನ್ನು ಸಹ ಆಚರಿಸುತ್ತಾರೆ. ಯುಗಾದಿ ಹಬ್ಬವಾದ ಒಂದು ವಾರದ ನಂತರ ಕಾಡುಕುರುಬರು 'ಹೊಸದುಡುಕು'(ಮಾರಮ್ಮನ ಹಬ್ಬ) ಎಂಬ ಹಬ್ಬವನ್ನು ಮಾಡುತ್ತಾರೆ. ಅದಕ್ಕೂ ಮೊದಲು ಕಾಡುಕುರುಬರು ಅಂಬಾಲದಲ್ಲಿ ದೇವರನ್ನು ಕರೆದು ಮಾತನ್ನು ಕೇಳುತ್ತಾರೆ. ಅದೇನೆಂದರೆ ಈ ಹಬ್ಬವನ್ನು ಯಾವುದೇ ತೊಂದರೆಯಿಲ್ಲದೆ ನಡೆಸಿಕೊಂಡು ಹೋಗಬೇಕು ಎಂದು ದೇವರಲ್ಲಿ ಮಾತನ್ನು ಕೇಳುತ್ತಾರೆ. ಈ ಹಬ್ಬಕ್ಕೆ ಅಕ್ಕಪಕ್ಕದ ಊರಿನಿಂದಲೂ ಜನರು ಬರುತ್ತಾರೆ. ದೇವರನ್ನು ಕರೆಯುವ ದಿನ ಕುಣಿಯುವಾಟವನ್ನು ಆಡುತ್ತಾರೆ. ಅಂದು ಹಬ್ಬದ ರಾತ್ರಿ ದೊಡ್ಡವರು, ಸಣ್ಣವರು ಎಲ್ಲರೂ ಸೇರಿ ಕುಣಿಯುತ್ತಾ ಕಾಲ ಕಳೆಯುತ್ತಾರೆ. ಹೆಣ್ಣು ಮಕ್ಕಳು ಈ ಹಬ್ಬದಲ್ಲಿ ಕುಣಿಯುವುದಿಲ್ಲ. ಈ ಹಬ್ಬದ ದಿನ ದೇವಸ್ಥಾನದಲ್ಲಿ ದೇವರನ್ನು ಕರೆಯಿಸುತ್ತಾರೆ. ಆಗ ದೇವರು ಬಂದು ಎಲ್ಲರಿಗೂ ಆಶೀರ್ವದಿಸಿ ಮುಂದೆಯೂ ಹೀಗೆ ನನ್ನ ಪೂಜೆಯನ್ನು ನಿಮ್ಮ ಮುಂದಿನವರು ನಡೆಸಿಕೊಂಡು ಹೋಗಬೇಕು ಎಂದು ಹೇಳುತ್ತದೆ. ಆಗ ಕಾಡುಕುರುಬರು ಆಯಿತು ಎಂದು ಹೇಳಿ 'ನಮಗೆ ಯಾವುದೇ ತೊಂದರೆ ಕಷ್ಟಗಳು ಬರದಂತೆ ನೋಡಿಕೋ' ಎಂದು ದೇವರಲ್ಲಿ ಕೇಳಿಕೊಳ್ಳುತ್ತಾರೆ. ಅಂದು ದೇವರಿಗೆ ಗಂಧದ ಕಟ್ಟಿಗೆಯಿಂದ ಧೂಪವನ್ನು ಹಾಕುತ್ತಾರೆ. ದೇವರಿಗೆಂದು ವಿಶೇಷವಾಗಿ ಯಾವುದೇ ರೀತಿಯ ನೈವೇದ್ಯವಿಲ್ಲ. ಇವರು ತಿನ್ನುವ ಹಾಗೂ ಅಲ್ಲಿಯೇ ತಯಾರಿಸಿದ ಆಹಾರವನ್ನು ಯಾರು ಎಂಜಲು ಅಥವಾ ಅಂಟು ಮುಂಟು ಮಾಡದೇ ಮೊದಲು ದೇವರಿಗೆ ಸಮರ್ಪಿಸುತ್ತಾರೆ. ಈ ಹಬ್ಬದ ದಿನ ಕಾಡಿನಲ್ಲಿ ದೇವರಿಗೆಂದು ಹಿಟ್ಟು, ಸಾರು, ಅಡಿಗೆಯನ್ನು ಮಾಡಲಾಗಿರುತ್ತದೆ. ಅಂದು ಹಬ್ಬದ ದಿನ ದೇವರಿಗೆ ಯಾವುದೇ ರೀತಿಯ ಹೊಸ ಬಟ್ಟೆಯನ್ನು ಹಾಕುವುದಿಲ್ಲ. ದೇವರು ಬರುವ ದೇವರ ಗುಡ್ಡಪ್ಪನ ತೊಡೆಯ ಮೇಲೆ ಒಂದು ಹೊಸ ಬಿಳಿಯ ಪಂಚೆಯನ್ನು ಹಾಕುತ್ತಾರೆ. ಅಂದು ದೊಡ್ಡವರು, ಸಣ್ಣವರು ಯಾರೂ ಹೊಸ ಬಟ್ಟೆಯನ್ನು ಹಾಕುವುದಿಲ್ಲ. ತಮ್ಮಲ್ಲಿ ಇರುವ ಬಟ್ಟೆಯನ್ನೇ ತೊಡುತ್ತಾರೆ. ಅಂದು ಮಕ್ಕಳು ಮತ್ತು ಹಿರಿಯರು ರಾತ್ರಿಯೆಲ್ಲಾ ಕುಣಿಯುವಾಟವನ್ನು ಆಡುತ್ತಾರೆ.

ಕಾಡುಕುರುಬರು ಒಂದು ಮೊರಕ್ಕೆ ಗೆಜ್ಜೆಯನ್ನು ಕಟ್ಟಿರುತ್ತಾರೆ. ಅದನ್ನು ದೇವರು ಬರುವ ದೇವರ ಗುಡ್ಡಪ್ಪನ ಕೈಗೆ ಕೊಟ್ಟು ದೇವರನ್ನು ಬರಮಾಡಿಕೊಳ್ಳುತ್ತಾರೆ. ದೇವರಿಗೆ ಯಾವುದೇ ರೀತಿಯ ಹೊಸ ಬಟ್ಟೆಯನ್ನು ಹಾಕುವುದಿಲ್ಲ. ಲಿಂಗಾಯತ ಸಮುದಾಯಕ್ಕೆ ಸೇರಿದ ವ್ಯಕ್ತಿಯು ಈ ಮಾರಮ್ಮ ದೇವಿಯನ್ನು ಪೂಜಿಸುವ ಪೂಜಾರಿಯಾಗಿರುತ್ತಾನೆ. ಈ ಪೂಜಾರಿಯು ಬಾಲಕವಾಡಿ ಬಸವೇಶ್ವರ ದೇವರನ್ನು ಸಹ ಪೂಜಿಸುತ್ತಾನೆ. ಹಬ್ಬದ ದಿನ ಪೂಜಾರಿಯು ಮಡಿಯಿಂದ ಇದ್ದು ದೇವರನ್ನು ಶುಚಿಗೊಳಿಸಿ ನಂತರ ದೇವರನ್ನು ಪೂಜಿಸುತ್ತಾನೆ. ಅಂದು ಕಾಡುಕುರುಬರು ಮಡಿಯಾಗಿ ದೇವಸ್ಥಾನಕ್ಕೆ ತೆರಳಿ ದೇವರ ದರ್ಶನವನ್ನು ಪಡೆಯುತ್ತಾರೆ. ಅಂದು ಹಿರಿಯರೆಲ್ಲಾ ಪಂಚೆ ಮತ್ತು ಶರ್ಟನ್ನು ಧರಿಸುತ್ತಾರೆ. ಮಕ್ಕಳು, ಪ್ಯಾಂಟು, ಶರ್ಟ್, ಮಹಿಳೆಯರು ಸೀರೆಯನ್ನು ಧರಿಸುತ್ತಾರೆ.

ರಾಮನಹಳ್ಳಿ ಬೊಮ್ಮಧ್ಯಾನ ದೇವರ ಆಚರಣೆ

ರಾಮನಹಳ್ಳಿಯ ಬೊಮ್ಮಧ್ಯಾನ ದೇವರನ್ನು ಸಹ ಕಾಡುಕುರುಬರು ಪೂಜಿಸುತ್ತಾರೆ. 'ಬೊಮ್ಮಧ್ಯಾನ' ಎಂದರೆ ಕುಲದ ಹೆಸರು. ಈ ದೇವರ ಹಬ್ಬವನ್ನು ಯುಗಾದಿ ಕಳೆದ ನಂತರ ಮಾಡುತ್ತಾರೆ. ಈ ಹಬ್ಬವು ಕಾಡುಕುರುಬರಲ್ಲಿ ಕಂಡುಬರುವ 'ಕಲ್ಕರ್ ಮಕ್ಕ' ಎಂಬ ಕುಲಕ್ಕೆ ಸಂಬಂಧಿಸಿದ ಹಬ್ಬವಾಗಿದೆ. ಈ ಹಬ್ಬವು ಮೂರು ಎಲಮಗೇಯವರದ್ದಾಗಿದೆ. ಈ ಜಾತ್ರೆಯಲ್ಲಿ ದೇವರಿಗೆ ನಿಷ್ಠೆಯಿಂದ ನಡೆದುಕೊಳ್ಳಬೇಕು. ಈ ದೇವರಿಗೆ ಹದಿನೈದು ದಿನ ಮುಂಚಿತವಾಗಿಯೇ ಕೇರಳಕ್ಕೆ ಹೋಗಿ ಬಾಳೆಗೊನೆಯನ್ನು ತರಬೇಕು. ಬಾಳೆಗೊನೆಯನ್ನು ತರಲು ಕೋಳಿ ಕೂಗುವ ಮುಂಚೆಯೇ ಯಾರ ಕಣ್ಣಿಗೂ ಬೀಳದೆ ಹೋಗಬೇಕು. ಈ ಬಾಳೆಗೊನೆಯನ್ನು ತರಲು ೫ ಜನರನ್ನು ಒಳಗೊಂಡ ಒಂದು ತಂಡ ಹೋಗುತ್ತದೆ. ಅವರು ಕಾಲಿಗೆ ಚಪ್ಪಲಿಯನ್ನು ಹಾಕುವಂತಿಲ್ಲ. ಊಟವನ್ನು ಮಾಡುವಂತಿಲ್ಲ. ತಂದಂತಹ ಬಾಳೆಹಣ್ಣಿನ ಗೊನೆಯನ್ನು ಊರಿಗೂ ಸಹ ತರುವಂತಿಲ್ಲ. ಅದನ್ನು ದೇವಸ್ಥಾನದ ಹತ್ತಿರವೇ ಒಂದು ಗುಂಡಿಯಲ್ಲಿ ಹೂತಿಟ್ಟು ಬರಬೇಕು. ಜಾತ್ರೆ ನಾಳೆ ಇರುವಂತೆ ಹಾಡಿಯ ಜನರೆಲ್ಲಾ ಹೋಗುತ್ತಾರೆ. ಆ ಬಾಳೆಗೊನೆಯನ್ನು ತೆಗೆದಾಗ ಅದರಲ್ಲಿ ಕೆಲ ಸತ್ಯಾಂಶಗಳು ಗೋಚರವಾಗುತ್ತವೆ. ಅದೇನೆಂದರೆ ಕಾಡುಕುರುಬರು ದೇವರಿಗೆ ನಡೆದುಕೊಳ್ಳುವ ಬಗೆಯಲ್ಲಿ ಏನಾದರೂ ತಪ್ಪಾಗಿದ್ದರೆ ಆ ಬಾಳೆಗೊನೆಯು ಹಣ್ಣಾಗಿರುವುದಿಲ್ಲ. ತಪ್ಪು ಎಸಗಿಲ್ಲ ಎಂದಾದರೆ ಬಾಳೆಹಣ್ಣಿನ ಗೊನೆಯು ಪೂರ್ತಿಯಾಗಿ ಹಣ್ಣಾಗಿರುತ್ತದೆ. ಇದಲ್ಲದೇ ಬೇರೆ ರೀತಿಯಲ್ಲಿಯೂ ಸಹ ತಪ್ಪನ್ನು ಗುರುತಿಸಬಹುದು. ಮಡಿಯಾಚರಣೆಯಲ್ಲಿ ತಪ್ಪಾಗಿದ್ದರೆ, ಕಾಡಿನಲ್ಲಿ ಹೋಗುವಾಗ ಕಾಡುಕುರುಬರ ಎದುರಿಗೆ ಆನೆಯು ಬಂದು ನಿಲ್ಲುತ್ತದೆ. ಕಾಡುಕುರುಬರನ್ನು ದೇಪಸ್ಥಾನಕ್ಕೆ ತೆರಳಲು ಆನೆಯು ಬಿಡುವುದಿಲ್ಲ. ಆಗ ಅವರು ತಪ್ಪಾಗಿರುವುದನ್ನು ತಿಳಿದು ನಂತರ ಹಾಡಿಗೆ ಬಂದು ದೇವರನ್ನು ಕರೆಯಿಸಿ ಕೇಳುತ್ತಾರೆ.

ನಮ್ಮಿಂದ ಆಗಿರುವ ತಪ್ಪನ್ನು ಕೇಳಿ ತಪ್ಪನ್ನು ಕಟ್ಟುತ್ತಾರೆ (ಹತ್ತೂ ಕಾಲು ರೂಪಾಯಿ, ಐದೂ ಕಾಲು ರೂಪಾಯಿ). ಇನ್ನುಮುಂದೆ ಹೀಗೆ ಮಾಡುವುದಿಲ್ಲವೆಂದು ಯಜಮಾನರು ಹೇಳುತ್ತಾರೆ.

ಅಂದು ದೇವರಿಗೆ ಹೂ, ಹಣ್ಣು, ಕಾಯಿ, ಗಂಧದ ಕಡ್ಡಿಯನ್ನು ತೆಗೆದುಕೊಂಡು ಹೋಗುತ್ತಾರೆ. ದೇವರಿಗೆಂದು ಯಾವುದೇ ರೀತಿಯ ಹೊಸ ಬಟ್ಟೆಯನ್ನು ಕೊಡುವುದಿಲ್ಲ. ಅಂದು ದೇವರಿಗೆಂದು ಬೆಲ್ಲದ ಅನ್ನವನ್ನು ಮಾಡಲಾಗುತ್ತದೆ. ಬೆಲ್ಲದ ಅನ್ನವನ್ನು ದೇವರಿಗೆ ನೈವೇದ್ಯ ಮಾಡಲಾಗುತ್ತದೆ. ಆದರೆ ಬೆಲ್ಲದ ಅನ್ನವನ್ನು ನೈವೇದ್ಯ ಮಾಡುವ ಪದ್ಧತಿ ಕಾಡುಕುರುಬರಲ್ಲಿ ಇಲ್ಲ. ಇದು ನಾಡಜನರು ಮಾಡುವ ನೈವೇದ್ಯವಾಗಿದೆ. ಕಾಡುಕುರುಬರು ದೇವರಿಗೆಂದು ಎಲೆ, ಅಡಿಕೆ, ಹೊಗೆಸೊಪ್ಪನ್ನು ಮಾತ್ರ ದೇವರಿಗೆ ಕೊಡುವುದು. ಇತ್ತೀಚೆಗೆ ಹಣ್ಣು, ಹೂ, ಕಾಯಿಗಳನ್ನು ಸಹ ಕೊಡುತ್ತಾರೆ. ಜಾತ್ರೆಯ ದಿನ ಯಜಮಾನರು ದೇವಸ್ಥಾನಕ್ಕೆ ಹೋಗಿ ದೇವರನ್ನು ಪೂಜಿಸಿ ಹಾಡಿಗೆ ಬಂದು ಎಲ್ಲರ ಮನೆಗೂ ದೇವರ ಪ್ರಸಾದವನ್ನು ಹಂಚುತ್ತಾರೆ.

ಈ ರಾಮನಹಳ್ಳಿಯ ಜಾತ್ರೆಗೆ ಯಾವುದೇ ಸಮುದಾಯದವರು ಬರದೇ ಇದ್ದರೂ ಪರವಾಗಿಲ್ಲ. ಆದರೆ ಕಾಡುಕುರುಬರು ಮತ್ತು ಜೇನುಕುರುಬರು ಈ ದೇವರ ಜಾತ್ರೆಯಲ್ಲಿ ಇರಲೇಬೇಕು. ಅವರು ಬರದೇ ಇದ್ದರೆ ಪೂಜಾರಿಯ ಮೇಲೆ ದೇವರು ಬಂದು 'ನನ್ನ ಮಕ್ಕಳು ಬಂದಿಲ್ಲ. ಅವರನ್ನು ಕರೆದುಕೊಂಡು ಬನ್ನಿ' ಎಂದು ಹೇಳುತ್ತದೆ. ಈ ದೇವರ ಜಾತ್ರೆ ಐದು ದಿನಗಳವರೆಗೂ ನಡೆಯುತ್ತದೆ. ಕಾಡುಕುರುಬರು ಮತ್ತು ಜೇನುಕುರುಬರು ಬರದೇ ಇದ್ದರೆ ಐದು ದಿನಗಳಾದರೂ ದೇವರು ಬರುವುದಿಲ್ಲ. ಆದರೆ ಕಾಡುಕುರುಬ ಮತ್ತು ಜೇನುಕುರುಬರು ಬಂದು ಗೆಜ್ಜೆ ಕಟ್ಟಿ ಕುಣಿದರೆ ಸಾಕು ದೇವರು ಬರುತ್ತಾನೆ ಎಂದು ಹೇಳುತ್ತಾರೆ. ಈ ರಾಮನಹಳ್ಳಿಯ ಬೊಮ್ಮಧ್ಯಾನ ದೇವರನ್ನು ಲಿಂಗಾಯತ ಸಮುದಾಯದ ಪೂಜಾರಿಯು ಪೂಜೆಯನ್ನು ಮಾಡುತ್ತಾನೆ. ಈ ಜಾತ್ರೆಯಲ್ಲಿ ಕೊಂಡವನ್ನು ಹಾಕಿರುತ್ತಾರೆ.

ಈ ದೇವರ ಜಾತ್ರೆಯ ದಿನ ಕಾಡುಕುರುಬ ಮತ್ತು ಜೇನುಕುರುಬರು ಮಡಿಯಾಗಿ ಇಲ್ಲದೇ ಇದ್ದರೂ ಸಹ ದೇವರು ಮಾತ್ರ ಇವರನ್ನು ಎಂದಿಗೂ ದೂರ ಇಡುವುದಿಲ್ಲ. ಇವರು ಆತ್ಮಪೂರ್ವಕವಾಗಿ ದೇವರ ಮುಂದೆ ಕುಣಿದರೆ ಸಾಕು, ಆ ದೇವರು ನಮ್ಮನ್ನು ಒಪ್ಪಿಕೊಳ್ಳುತ್ತಾನೆ ಎಂದು ಹೇಳುತ್ತಾರೆ.

ಕಾಡುಕುರುಬರಲ್ಲಿ ಈಗಲೂ ಕಂಡುಬರುವ ತಪ್ಪುಗಳೆಂದರೆ ಮೊದಲನೆಯದಾಗಿ ಪರಿಶಿಷ್ಟ ಜಾತಿಯವರ ಮನೆಯಲ್ಲಿ ಊಟ ಮಾಡಿರುವುದು. ಅಂದರೆ ಕಾಡುಕುರುಬರು ಮತ್ತು ಜೇನುಕುರುಬರಲ್ಲಿ ಈಗಲೂ ಸಹ ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂಬ ಈ ಪರಿಕಲ್ಪನೆಗಳು

ಇಂದಿಗೂ ಜೀವಂತವಾಗಿವೆ. ಕ್ಷೇತ್ರಕಾರ್ಯ ಕೈಗೊಂಡಂತಹ ಸಂದರ್ಭದಲ್ಲಿ ಬ್ರಹ್ಮಗಿರಿಯ ಮಹಿಳೆಯೊಬ್ಬರು ನನಗೆ ಮತ್ತು ನನ್ನ ಸ್ನೇಹಿತನಿಗೆ ನೀವು ಪರಿಶಿಷ್ಟ ಜಾತಿಯವರಾದರೆ ನಮ್ಮ ಮನೆಯ ಹತ್ತಿರ ಬರುವ ಹಾಗಿಲ್ಲ ಎಂದು ಹೇಳಿದರು.

ಎರಡನೆಯದಾಗಿ ಸೂತಕದ ಮನೆಗೆ ಹೋಗಿರುವುದು. ಇತ್ಯಾದಿ ಕಾರಣಗಳಿಂದ ಅವರು ತಪ್ಪು ಮಾಡಿದ್ದೇವೆ ಎಂದು ತಿಳಿದುಬಂದರೆ ಆಗ ಅವರು ತಪ್ಪು ಕಟ್ಟುತ್ತಾರೆ. ತಪ್ಪು ಕಟ್ಟಲು ಹಣ ಮತ್ತು ಕಬ್ಬಿಣದ ಚೂರನ್ನು ಕೊಡುವ ಮೂಲಕ ತಪ್ಪು ತೀರಿಸುತ್ತಾರೆ. ಆ ತಪ್ಪನ್ನು ಮಾಡಿದಾಗ, ಅವರು ತಪ್ಪು ತೀರಿಸದೆ ಇದ್ದರೆ ಅವರು ಕಾಡಿನಲ್ಲಿ ಹೋಗುವಾಗ ಪ್ರಾಣಿಗಳು ಅಡ್ಡಬರುವುದು, ಇನ್ನೂ ಮೊದಲಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಆಗ ಅವರು ತಪ್ಪು ತೀರಿಸಬೇಕು. ಇಲ್ಲದೆ ಹೋದರೆ ಅವರು ಒಂದಲ್ಲ ಒಂದು ದಿನ ಕಾಡುಪ್ರಾಣಿಗಳ ದಾಳಿಗೆ ಅಥವಾ ಇನ್ನಾವುದೋ ಕಾರಣದಿಂದ ಸಾಯಬಹುದು.

ಗುಂಡ್ರೆ ಮಾರಮ್ಮನ ಜಾತ್ರೆ

ಜಾಗನಕೋಟೆ ಹಾಡಿಯ ಕಾಡುಕುರುಬ ವಕ್ತೃವಿನ ಪ್ರಕಾರ ನಾಳೆ ದೇವರ ಕಾರ್ಯಕ್ಕೆ ಹೋಗಬೇಕಾದರೆ ಹಿಂದಿನ ದಿನದ ಸಂಜೆ ಆರು ಗಂಟೆ ಸುಮಾರಿಗೆ ಎಲ್ಲರೂ ಸೇರಿ ದೇವರಿಗೆ ಮಾತು ಕೊಟ್ಟು ಹೋಗುತ್ತಿದ್ದರು. ಹಿಂದಿನ ಕಾಲದಲ್ಲಿ ಕಾಡಿನಲ್ಲಿ ಇದ್ದಂತಹವರು ನಾಳೆ ದೇವರ ಕಾರ್ಯಕ್ಕೆ ಹೋಗಬೇಕಾದರೆ ಅವರ ಹಾಡಿಯ ಮುಂದೆ ಜಿಂಕೆಯಂತಹ ಒಂದು ಪ್ರಾಣಿ ಹಾಡಿಗೆ ಬಂದು ತಾನಾಗಿಯೇ ಸಾಯಬೇಕು. ಒಂದು ವೇಳೆ ಜಿಂಕೆಯಂತಹ ಪ್ರಾಣಿ ಬಂದು ಸಾಯದಿದ್ದರೆ 'ನಿನ್ನ ಕಾರ್ಯಕ್ಕೆ ನಾವು ಬರುವುದಿಲ್ಲ'ವೆಂದು ದೇವರಿಗೆ ಹೇಳುತ್ತಾರೆ. ಆಗ ಆ ಪ್ರಾಣಿಯು ಯಾವುದೋ ಕಾರಣಕ್ಕೆ ಹಾಡಿಯ ಮುಂದೆ ಬಂದು ಸಾಯುತ್ತದೆ. ಆದರೆ ಆ ಸತ್ತ ಪ್ರಾಣಿಯ ಬಲಗಡೆಯ ಕಿವಿಯಲ್ಲಿ ಗಾಯವಾಗಿದ್ದರೆ ಮಾತ್ರ ಅದು ತಾವು ಆರಾಧಿಸುವ ದೈವದ ಫಲ ಎಂದು ನಂಬುತ್ತಾರೆ. ಅದು ಅವರಿಗೆ ತಮ್ಮ ದೈವವನ್ನೇ ನೋಡಿದಷ್ಟು ಖುಷಿಯಾಗುತ್ತದೆ. ದೈವದ ಜಾತ್ರೆಗೆ ಮರುದಿನ ಕಾಡಿಗೆ ತೆರಳುತ್ತಾರೆ. ಜಿಂಕೆಯಂತಹ ಪ್ರಾಣಿ ತಮ್ಮ ಹಾಡಿಯ ಮುಂದೆ ಬಂದು ತನ್ನ ಜೀವ ಬಿಡದೆ ಹೋದರೆ ಅವರು ಜಾತ್ರೆಯನ್ನು ಮಾಡುವಂತಿಲ್ಲ. ಅಂದರೆ ಆ ವರ್ಷ ಕಾಡುಕುರುಬರು ಯಾವುದೇ ಜಾತ್ರೆಯನ್ನು ಮಾಡುವಂತಿಲ್ಲ. ಆದರೆ ಈಗ ಅವರು ಕಾಡಿನಿಂದ ಹೊರಗೆ ಬಂದ ಕಾರಣ ಈ ರೀತಿಯ ಆಚರಣೆಗಳು ಇಂದು ಅವರಲ್ಲಿ ಕಂಡುಬರುವುದಿಲ್ಲ. ಕಾಡುಕುರುಬರ ಶಾಸ್ತ್ರಕ್ಕೂ, ಬ್ರಾಹ್ಮಣರ ಶಾಸ್ತ್ರಕ್ಕೂ ಸಂಬಂಧವಿದೆಯಂತೆ. ಹಿಂದಿನ ಕಾಲದಲ್ಲಿ ಯಾರಾದರೂ ಕಾಡುಕುರುಬರ ಹಾಡಿಯೊಳಗೆ ಪ್ರವೇಶಿಸಬೇಕಾದರೆ ಅವರ ಅನುಮತಿಯನ್ನು ಪಡೆಯಬೇಕು. ಆದರೆ ಇಂದು ಯಾರು

ಬೇಕಾದರೂ ಅವರ ಹಾಡಿಯೊಳಗೆ ಪ್ರವೇಶಿಸಬಹುದು. ಕಾರಣ ಇವರಿಗೆ ಇಂದು ನಾಗರಿಕತೆಯ ಅರಿವು ಬಂದಿದೆ ಎಂದು ಹೇಳುತ್ತಾರೆ.

ಗುಂಡ್ರೆ ಮಾರಮ್ಮನ ಜಾತ್ರೆ

ಬ್ರಹ್ಮಗಿರಿ ಹಾಡಿಯ ಕಾಡುಕುರುಬರು ಯುಗಾದಿ ಹಬ್ಬವಾದ ಒಂದು ವಾರ ಅಥವಾ ೧೫ ದಿನಗಳ ನಂತರ ಗುಂಡ್ರೆ ಕಾಡಿನಲ್ಲಿ ಗುಂಡ್ರೆ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಅಲ್ಲಿಗೆ ಎಲ್ಲಾ ಹೆಣ್ಣುಮಕ್ಕಳು ಸಹ ಹೋಗಿ ಜಾತ್ರೆಯನ್ನು ಆಚರಿಸುತ್ತಾರೆ. ಈ ತಾಯಿಗೆ ಹಾಡಿಯ ಯಜಮಾನರು ಮೊದಲು ಪೂಜೆಯನ್ನು ಸಲ್ಲಿಸುತ್ತಾರೆ. ಯಜಮಾನರು ಇಲ್ಲದೇ ಇದ್ದರೆ ಅವರ ಮಕ್ಕಳು ಪೂಜೆಯನ್ನು ಮಾಡುತ್ತಾರೆ. ಈ ಜಾತ್ರೆಯಲ್ಲಿ ಹೊಸ ಬಟ್ಟೆಯನ್ನು ತೊಡುತ್ತಾರೆ. ಈ ಹಬ್ಬದಲ್ಲಿ ದೇವರಿಗೆ ಕೋಳಿಯನ್ನು ಬಲಿ ಕೊಡುತ್ತಾರೆ. ಪೂಜೆಗೆ ಹಣ್ಣು, ಕಾಯಿ, ಹೂ, ಗಂಧದ ಕಡ್ಡಿ, ಅರಿಶಿನ, ಕುಂಕುಮ, ಕರ್ಪೂರ ಮೊದಲಾದ ಪೂಜಾಸಾಮಗ್ರಿಗಳನ್ನು ತಂದು ಪೂಜೆಯನ್ನು ಮಾಡುತ್ತಾರೆ. ಅಡುಗೆಯನ್ನು ಸಹ ಅಲ್ಲಿಯೇ ತಯಾರಿಸಿ ಊಟ ಮಾಡಿ ಅಂದು ರಾತ್ರಿ ಅಲ್ಲಿಯೇ ಉಳಿದುಕೊಂಡು ಕಾಲಿಗೆ ಗೆಜ್ಜೆ ಕಟ್ಟಿ ರಾತ್ರಿಯಿಂದ ಬೆಳಗ್ಗೆಯವರೆಗೂ ಕುಣಿಯುವಾಟ ಆಡುತ್ತಾರೆ. ಮರುದಿನ ಕೋಳಿ ಊಟ, ಅನ್ನ, ಸಾರು ಅಡುಗೆಯನ್ನು ಮಾಡಿ ಊಟ ಮಾಡಿಕೊಂಡು ಸಾಯಂಕಾಲ ಮನೆಗೆ ಬರುತ್ತಾರೆ. ಹಿಂದಿನ ಕಾಲದಲ್ಲಿ ಕುಣಿಯುವಾಟದ ಹಬ್ಬದಲ್ಲಿ ಹೆಣ್ಣುಮಕ್ಕಳು ಸಹ ಕುಣಿಯುತ್ತಿದ್ದರು. ಆದರೆ ಇಂದು ಹೆಣ್ಣುಮಕ್ಕಳು ನಾಚಿಕೆ ಸ್ವಭಾವದಿಂದ ಕುಣಿಯಲು ಮುಂದೆ ಬರುವುದಿಲ್ಲ. ಕಾಡುಕುರುಬರಲ್ಲಿ ಮೂರು ರೀತಿಯ ಕುಣಿಯುವಾಟವನ್ನು ನೋಡಬಹುದು. ೧. ಆಟಕೇರಿ, ೨. ಅಡ್ಡಿಗೆ, ೩. ತೂಗಾಟ ಕುಣಿತಗಳನ್ನು ಕುಣಿಯುತ್ತಾರೆ. ಕೊಳಲಿನಲ್ಲಿ ನಾನಾ ತರಹದ ನಾದಗಳನ್ನು ಅಂದು ನುಡಿಸುತ್ತಾರೆ. ಹಾಡುಗಳನ್ನು ಹಾಡುತ್ತಾರೆ. ನಂತರ ಅದಕ್ಕೆ ಸಂಬಂಧಿಸಿದ ಕುಣಿತವನ್ನು ಕುಣಿಯುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಕಾಡುಕುರುಬರು ಹಲವಾರು ವಾದ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ. ಮುದಲಿ, ತಮಟೆ (ದೌಲು), ಕೊಳಲು(ಕಳಾಲು) ಮೊದಲಾದ ವಾದ್ಯಗಳನ್ನು ಒಯ್ಯುತ್ತಾರೆ.

ಅಂದು ದೇವರಿಗೆ ಹೊಸ ಕೆಂಪು ವಸ್ತ್ರವನ್ನು ಉಡಿಸುತ್ತಾರೆ. ಹಾಗೆಯೇ ಗಂಡು ದೇವರಿಗೆ ಬಿಳಿಯ ವಸ್ತ್ರವನ್ನು ತೊಡಿಸುತ್ತಾರೆ. ಅಂದು ಜಾತ್ರೆಯ ದಿನ ಗಂಡು ಮಕ್ಕಳು ಬಿಳಿಯ ಪಂಚೆಯನ್ನು ಉಡಬೇಕು. ಪ್ಯಾಂಟನ್ನು ಧರಿಸುವಂತಿಲ್ಲ. ಹೆಣ್ಣುಮಕ್ಕಳು ಸಹ ಹೊಸಬಟ್ಟೆಯನ್ನು ತೊಟ್ಟು ಸಂಭ್ರಮಿಸುತ್ತಾರೆ. ದೇವರ ಆಭರಣಗಳೆಂದರೆ ಮುಖ ಮಂಡಲಾ, ದೀಪದ ಕಂಬ ಮೊದಲಾದ ಆಭರಣಗಳನ್ನು ಹಾಕುತ್ತಾರೆ. ದೇವರಿಗೆ ಪ್ರಿಯವಾದ ಮಲ್ಲಿಗೆ ಹೂ, ಕನಕಾಂಬರ ಹೂಗಳನ್ನು ಹಾಕುತ್ತಾರೆ. ಹಿಂದಿನ ಕಾಲದಲ್ಲಿ

ಕಾಡಿನಲ್ಲಿಯೇ ಸಿಗುವ ಹೂಗಳನ್ನು ಪೋಣಿಸಿ ಹಾಕುತ್ತಿದ್ದರು. ಆದರೆ ಇಂದು ಕಾಡಿಗೆ ಹೋಗುವುದು ನಿಷೇಧವಿರುವುದರಿಂದ ಅವರು ನಾಡಿನ ಜನರು ಬಳಸುವ ಹೂವಿನ ಹಾರಗಳನ್ನು ದೇವರಿಗೆ ಹಾಕುತ್ತಾರೆ.

ಬಾಕಲವಾಡಿ ಮಾರಮ್ಮನ ಜಾತ್ರೆ

ಕಾಡುಕುರುಬರು ಜನವರಿ ತಿಂಗಳಿನಲ್ಲಿ ಬಾಕಲವಾಡಿ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಕಾಡುಕುರುಬರು ಕಾಡಿನಲ್ಲಿರುವ ದೇವಸ್ಥಾನಕ್ಕೆ ಹೋಗುವ ಮೊದಲು ಅಂಬಾಲದಲ್ಲಿ ದೇವರನ್ನು ಕರೆಯಿಸಿ 'ನಿನ್ನ ಕಾಡಿಗೆ ನಾವು ಬರುತ್ತೇವೆ' ಎಂದು ಒಂದು ಮಾತನ್ನು ಕೇಳುತ್ತಾರೆ. ಏಕೆಂದರೆ ಕಾಡಿನಲ್ಲಿ ಹೋಗುವಾಗ ಯಾವುದೇ ರೀತಿಯ ತೊಂದರೆ ಸಂಕಷ್ಟಗಳು ಬರಬಾರದು ಎಂಬುದಾಗಿ ಅವರು ಅಂದು ರಾತ್ರಿ ಕುಣಿಯುವಾಟದ ಮೂಲಕ ದೇವರನ್ನು ಮೆಚ್ಚಿಸಿ ದೇವರನ್ನು ಕರೆಯಿಸಿಕೊಂಡು ಆ ತಾಯಿಯ ಒಪ್ಪಿಗೆಯನ್ನು ಕೇಳುತ್ತಾರೆ. ಆಗ ದೇವರು ಬಂದು ಒಪ್ಪಿಗೆಯನ್ನು ಸೂಚಿಸಿದ ತಕ್ಷಣ ಅಂದಿನ ರಾತ್ರಿಯೇ ದೇವರಿಗೆ ವಾಮ ತುಂಬಿಸಿ ನೈವೇದ್ಯವನ್ನು ಮಾಡುತ್ತಾರೆ. ಅದಾದ ನಂತರ ರಾತ್ರಿಯೇ ಡೋಲು, ಕೊಳಲು, ಮುದಲಿ ವಾದ್ಯಗಳನ್ನು ತೆಗೆದುಕೊಂಡು ಕಾಡಿನಲ್ಲಿ ನಡೆದುಕೊಂಡು ಹೋಗುತ್ತಾರೆ. ಕಾಡುಕುರುಬರ ಪಾರಂಪರಿಕ ವಾದ್ಯ 'ಮುದಲಿ'.

ಅಂದಿನ ರಾತ್ರಿಯೇ ಎಲ್ಲರೂ ಹೋಗಿ ಮೊದಲು ಗುಡಿಯನ್ನು ಶುಚಿಗೊಳಿಸುತ್ತಾರೆ. ಕಾಡುಕುರುಬರಲ್ಲಿರುವ ಒಂದೊಂದು ಕೋಮಿಗೂ ಒಂದೊಂದು ಜವಾಬ್ದಾರಿಯ ಕೆಲಸಗಳನ್ನು ಹಂಚಲಾಗುತ್ತದೆ. ಬೆಂಕಿ ಕೊಂಡವನ್ನು ಸಿದ್ಧಪಡಿಸುವುದು, ಊಟದ ಚಪ್ಪರವನ್ನು ಹಾಕುವುದು ಇನ್ನಿತರ ಕೆಲಸಗಳನ್ನು ವಹಿಸಲಾಗುತ್ತದೆ. ನಂತರ ಮರುದಿನ ದೇವಸ್ಥಾನದ ಅರ್ಚಕರೇ ಬಂದು ಪೂಜೆಯನ್ನು ಮಾಡುತ್ತಾರೆ. ಇಲ್ಲಿ ಹಾಡಿಯ ಯಜಮಾನ ಪೂಜೆಯನ್ನು ಸಲ್ಲಿಸುವುದಿಲ್ಲ. ಅಂದು ಜಾತ್ರೆಯ ದಿನ ಪಾಯಸ, ಅನ್ನ, ಸಾಂಬಾರು ಅಡುಗೆಯನ್ನು ಮಾಡಿರುತ್ತಾರೆ. ಇದೇ ಅಡುಗೆಯನ್ನು ಮೊದಲು ದೇವರಿಗೆ ನೈವೇದ್ಯ ಮಾಡಿ ನಂತರ ಎಲ್ಲರಿಗೂ ಪ್ರಸಾದವನ್ನು ಹಂಚಲಾಗುತ್ತದೆ. ಈ ಜಾತ್ರೆಯಲ್ಲಿ ತೇರನ್ನು ಎಳೆಯುವುದಿಲ್ಲ. ಈ ಜಾತ್ರೆಗೆ ಕಾಡುಕುರುಬರು ಮತ್ತು ಜೇನುಕುರುಬರು ಅಲ್ಲದೇ ಬೇರೆ ಬೇರೆ ಸಮುದಾಯದ ಜನರು ಬಂದಿರುತ್ತಾರೆ. ಕಾಡಿನಲ್ಲಿರುವ ದೇವಸ್ಥಾನದ ಹತ್ತಿರವೇ ವ್ಯಾಪಾರಸ್ಥರು ಅಂಗಡಿಗಳನ್ನು ತೆರೆದಿರುತ್ತಾರೆ.

ಜೇನುಕುರುಬರ ವಾರ್ಷಿಕಾವರ್ತನ ಆಚರಣೆಗಳು

ಜೇನುಕುರುಬರು ವಾರ್ಷಿಕವಾಗಿ ಗುಂಡ್ರೆ ಮಾರಮ್ಮ, ಬಾಕಲವಾಡಿ ಬಸವೇಶ್ವರ ದೇವರನ್ನು ಆರಾಧಿಸುತ್ತಾರೆ. ಒಂದೊಂದು ಹಾಡಿಯವರು ತಮ್ಮದೇ ಆದ ದೇವರನ್ನು

ಹೊಂದಿದ್ದಾರೆ. ಜೇನುಕುರುಬರು ತಮ್ಮ ಆರಾಧ್ಯ ದೈವಗಳನ್ನು ಬಿಟ್ಟು ಬೇರೆ ಯಾವ ಅನ್ಯ ದೇವರಗಳನ್ನು ಪೂಜಿಸುವುದಿಲ್ಲ. ಇವರು ವರ್ಷದಲ್ಲಿ ಯುಗಾದಿ, ದೀಪಾವಳಿ ಮತ್ತು ಗೌರಿಹಬ್ಬವನ್ನು ಹಾಗೂ ಗುಂಡ್ರೆ ಮಾರಮ್ಮನ ಜಾತ್ರೆಯನ್ನು ಮಾಡುತ್ತಾರೆ. ಗುಂಡ್ರೆ ಕಾಡಿನಲ್ಲಿ ಗುಂಡ್ರೆ ಮಾರಮ್ಮನ ಮೂಲ ವಾಸಸ್ಥಾನವಿದೆ. ಈ ಗುಂಡ್ರೆ ಮಾರಮ್ಮನನ್ನು ಇವರು ಸೋಮವಾರ, ಮಂಗಳವಾರ, ಶುಕ್ರವಾರ, ಭಾನುವಾರ ಮಾತ್ರ ವಾರದಲ್ಲಿ ನಾಲ್ಕು ದಿನ ಪೂಜೆ ಮಾಡಲಾಗುತ್ತದೆ. ಅಲ್ಲದೆ ತಿಂಗಳ ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನ ಈ ತಾಯಿಯನ್ನು ವಿಶೇಷವಾಗಿ ಪೂಜಿಸಲಾಗುತ್ತದೆ. ಅಂದು ಈ ತಾಯಿಯ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆ ತಾಯಿಯ ಬಳಿ ಹರಕೆಯನ್ನು ಕಟ್ಟಿಕೊಳ್ಳುತ್ತಾರೆ. ಅವರ ಕಾರ್ಯಗಳು ಈಡೇರಿದ ಬಳಿಕ ಬಂದು ಈ ತಾಯಿಗೆ ಹರಕೆಯನ್ನು ಒಪ್ಪಿಸುತ್ತಾರೆ. ಅವರ ವೈಯಕ್ತಿಕ ಸಮಸ್ಯೆಗಳು, ಬಾಹ್ಯ ಸಮಸ್ಯೆಗಳನ್ನು ಇಲ್ಲಿ ತಿಳಿಸಿ ಪರಿಹಾರ ಕಂಡುಕೊಳ್ಳುತ್ತಾರೆ. ಅಂದು ಪೂಜಾರಿಯ ಮೈ ಮೇಲೆ ದೇವರು ಬಂದು ಭಕ್ತರ ಕಷ್ಟಗಳನ್ನು ಪರಿಹರಿಸುವ ಭರವಸೆಯನ್ನು ನೀಡುತ್ತದೆ. ಅಂದು ಮಧ್ಯಾಹ್ನ ೧೨ರಿಂದ ೩ ಗಂಟೆಯವರೆಗೆ ದೇವರು ಪೂಜಾರಿಯ ಮೈ ಮೇಲೆ ಬರುತ್ತದೆ. ಗುಂಡ್ರೆ ಮಾರಮ್ಮನ ಜಾತ್ರೆಗೆ ಪೂಜಾರಿಯ ಮನೆಯವರು ಹೋಗಬೇಕೆಂದರೆ ಮೊದಲು ಪೂಜಾರಿಯು ಅವರ ಬುದ್ಧಿಗಳ ಹತ್ತಿರ ಹೋಗಿ ತೀರ್ಥವನ್ನು ತಂದು ಮನೆಗೆ ಹಾಕಿ ಶುಭ್ರಗೊಳಿಸಿ ಜಾತ್ರೆಗೆ ಹೋಗಬೇಕು. ಹಾಗೆಯೇ ಹೋಗುವಂತಿಲ್ಲ. ಗುಂಡ್ರೆ ಮಾರಮ್ಮನಿಗೆ ಜಾತ್ರೆಯಲ್ಲಿ ಹಸಿರು ಅಥವಾ ಕೆಂಪು ಬಣ್ಣದ ಸೀರೆಯನ್ನು ಹಾಗೂ ತಾಳಿಯನ್ನು ಹಾಕಲಾಗುತ್ತದೆ. ಅಂದು ತಾಯಿಗೆ ಜೇನುತುಪ್ಪದ ಅಭಿಷೇಕ ಮತ್ತು ಸಕ್ಕರೆ, ಬಾಳೆಹಣ್ಣನ್ನು ಎಡೆ ಮಾಡುತ್ತಾರೆ. ಅಂದು ಪೂಜಾರಿಯು ಕೆಂಪು ಪಂಚೆ ಮತ್ತು ಬಿಳಿ ಬನಿಯನ್ ತೊಟ್ಟಿರುತ್ತಾನೆ. ಪೂಜಾರಿಯು ಆಯ್ಕೆಯು ಇಲ್ಲಿ ವಂಶಪಾರಂಪರ್ಯವಾಗಿ ನಡೆಯುತ್ತದೆ.

ಬಾಕಲವಾಡಿಯ ಬಸವೇಶ್ವರನ ಜಾತ್ರೆ

ಬಾಕಲವಾಡಿಯ ಬಸವೇಶ್ವರನ ಜಾತ್ರೆಯನ್ನು ಯುಗಾದಿ ಆದ ಕೆಲ ದಿನಗಳ ನಂತರ ಅಥವಾ ಮೇ ತಿಂಗಳಿನಲ್ಲಿ ಮಾಡುತ್ತಾರೆ. ಜಾತ್ರೆಯ ಹಿಂದಿನ ದಿನವೇ ಎಲ್ಲರೂ ಸೇರಿ ಅಂದಿನ ಜಾತ್ರೆಗೆ ಬೇಕಾದಂತಹ ಎಲ್ಲಾ ತಯಾರಿಯನ್ನು ನಡೆಸುತ್ತಾರೆ. ಅಂದು ಬಸವೇಶ್ವರನ ಜಾತ್ರೆಯಲ್ಲಿ ಬ್ರಾಹ್ಮಣ ಜಾತಿಯ ಪೂಜಾರಿಯು ಆ ದೇವಸ್ಥಾನದ ದೇವರನ್ನು ಪೂಜಿಸುತ್ತಾನೆ. ಆ ಜಾತ್ರೆಯ ದಿನ ಪೂಜಾರಿಯು ಕೆಂಪು ಪಂಚೆಯನ್ನು ಉಟ್ಟಿರುತ್ತಾರೆ. ಅಂದು ಜಾತ್ರೆಯಲ್ಲಿ ದೇವರ ಪೂಜೆಗೆಂದು ಗಂಧದ ಕಡ್ಡಿ, ಕರ್ಪೂರ, ಹೂ, ಹಣ್ಣು, ಕಾಯಿ, ಎಲೆ ಅಡಿಕೆಯನ್ನು ತೆಗೆದುಕೊಂಡು ಹೋಗಿ ಪೂಜೆ

ಮಾಡಿಸುತ್ತಾರೆ. ಅಂದು ಬಸವೇಶ್ವರ ದೇವರಿಗೆಂದು ಬೆಲ್ಲದ ಅನ್ನವನ್ನು ನೈವೇದ್ಯ ಮಾಡಲಾಗುತ್ತದೆ. ಅಲ್ಲಿಗೆ ಬಂದಂತಹ ಎಲ್ಲರಿಗೂ ಅನ್ನ ಸಾಂಬಾರು ಮಾಡಿ ಬಡಿಸಲಾಗುತ್ತದೆ. ಹಿಂದಿನ ಕಾಲದಲ್ಲಿ ಜೇನುಕುರುಬರೇ ಬಸವೇಶ್ವರ ದೇವರನ್ನು ಪೂಜಿಸುತ್ತಿದ್ದರು.

ಜೇನುಕುರುಬರು ಜಾತ್ರೆಗೆ ಹೋಗುವುದಕ್ಕೂ ಮುಂಚೆ ದೇವರನ್ನು ಕರೆಯಬೇಕು. ದೇವರನ್ನು ಗುಡ್ಡಪ್ಪನು ಕರೆಯುತ್ತಾನೆ. ಗುಡ್ಡಪ್ಪನು ಸೋರೆಕಾಯಿಯ ಬುರುಡೆಯನ್ನು ತಿರುಗಿಸುತ್ತಾ ಮಂತ್ರವನ್ನು ಹೇಳುತ್ತಾ ದೇವರನ್ನು ಆಹ್ವಾನಿಸಿಕೊಳ್ಳುತ್ತಾನೆ. ಗುಡ್ಡಪ್ಪನ ಹಿಂಬಾಳ ಮತ್ತು ಮುಂಬಾಳ ಹೆಂಗಸರೇ ಇರಬೇಕು. ಇದ್ದು ಸೊಲ್ಲನ್ನು ಹೇಳಬೇಕು. ಆಗ ದೇವರು ಬರುತ್ತದೆ. ಬಂದ ನಂತರ ದೇವರ ಹತ್ತಿರ ತಮ್ಮ ಕಷ್ಟಗಳನ್ನು ಬಗೆಹರಿಸಿ ಯಾವುದೇ ತೊಂದರೆಯಾಗದಂತೆ ನೋಡಿಕೋ ಎಂದು ದೇವರಲ್ಲಿ ಬೇಡಿಕೊಳ್ಳುತ್ತಾರೆ. ಜಾತ್ರೆಯಲ್ಲಿ ಆಡು, ಕುರಿ, ಮೇಕೆಯನ್ನು ಬಲಿ ಕೊಡುತ್ತಾರೆ.

ಕಾಡುಕುರುಬರ ಹಬ್ಬಗಳು

'ಹಬ್ಬ' ಎನ್ನುವ ಶಬ್ದ ಸಂಸ್ಕೃತದ ಪರ್ವನ್ ಪದದ ತದ್ಭವ. ಪರ್ವ ಎಂದರೆ ಒಂದು ಇನ್ನೊಂದರ ಜೊತೆ ಸಂಧಿಸುವುದು ಎಂದರ್ಥ. ಸಂಪ್ರದಾಯಗಳು ಮತ್ತು ಆಚರಣೆಗಳು ಹಬ್ಬಗಳಿಗೆ ಪ್ರೇರಕಗಳಾಗಿವೆ. ಒಂದು ಅವಧಿಯಲ್ಲಿ ನಡೆಸುವ ಸಂಪ್ರದಾಯಗಳು, ಆಚರಣೆಗಳು, ರೂಢಿ, ಉತ್ಸವಗಳು ಹಬ್ಬಗಳಾಗಿವೆ. ದ್ರಾವಿಡ ಭಾಷೆಯಲ್ಲಿ ಕೊಪ್ಪ, ಪಂಡಗ ಶಬ್ದಗಳಿಗೆ ಹಬ್ಬ ಎಂಬ ಅರ್ಥವಿದೆ. ಕೊಡಗು ಕೋಪು, ಶಬ್ದಗಳಿಗೆ ಹಬ್ಬ ಎಂಬ ಅರ್ಥವಿದೆ. ಬುಡಕಟ್ಟುಗಳ ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳ ಕ್ರಿಯಾ ರೂಪಗಳೇ ಹಬ್ಬಗಳು. ನಿಸರ್ಗದ ಆರಾಧನೆ ಮತ್ತು ದೇವರನ್ನು ತಮ್ಮೊಡನೆ ಒಪ್ಪಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿಯೇ ಈ ಹಬ್ಬಗಳು ಹುಟ್ಟಿಕೊಂಡಿವೆ. ಹೀಗಾಗಿ ಕೆಲವು ಸಂಪ್ರದಾಯಗಳ ಸಮೂಹವೇ ಹಬ್ಬಗಳಾಗಿರುತ್ತವೆ.[೧]

"ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನು ಒಲಿಸಿಕೊಳ್ಳುವ ಸತತ ಪ್ರಯತ್ನ"[೨] ನಡೆದುದರ ಫಲವಾಗಿಯೇ ಹಬ್ಬಗಳು ಹುಟ್ಟಿಕೊಂಡವು.

ಯುಗಾದಿ: ಕಾಡುಕುರುಬರು ಪ್ರಮುಖವಾಗಿ ಯುಗಾದಿ, ಗೌರಿಹಬ್ಬ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಈ ಹಬ್ಬಗಳಲ್ಲದೆ ಕಾಡಿನಲ್ಲಿರುವ ಗುಂಡ್ರೆ ಮಾರಕ್ಕ, ಚೆಲುವರಾಯ ಸ್ವಾಮಿ, ಭೈರಪ್ಪ ಮೊದಲಾದ ದೇವರುಗಳು ಕಾಡಿನಲ್ಲಿಯೇ ಇವೆ. ಇವುಗಳಿಗೆ ಸಂಬಂಧಿಸಿದ ಹಬ್ಬಗಳನ್ನು ಸಹ ಮಾಡುತ್ತಾರೆ. ಕಾಡುಕುರುಬರು ಯುಗಾದಿ ಹಬ್ಬದ ದಿನದಂದು ರಾತ್ರಿಯಿಂದ ಕುಣಿಯುವಾಟವನ್ನು ಆಡುತ್ತಾರೆ. ಈ ಹಬ್ಬದ ಸಂದರ್ಭದಲ್ಲಿ

ಮುಖ್ಯವಾಗಿ ಯಜಮಾನರು ಇರಬೇಕು. ಈ ಹಬ್ಬದಲ್ಲಿ ಜೇನುಕುರುಬರು ಸಹ ಭಾಗಿಯಾಗಿರುತ್ತಾರೆ. ಈ ಹಬ್ಬದಲ್ಲಿ ಮೊದಲು ಕಾಡುಕುರುಬರ ಯಜಮಾನ ಪೂಜೆಯನ್ನು ಮಾಡುತ್ತಾನೆ. ನಂತರ ಜೇನುಕುರುಬರ ಯಜಮಾನ ಪೂಜೆಯನ್ನು ಸಲ್ಲಿಸುತ್ತಾನೆ. ಈ ಯುಗಾದಿ ಹಬ್ಬವನ್ನು ಕಾಡಿನಲ್ಲಿ ಮಾಡುತ್ತಾರೆ. ಈ ಹಬ್ಬಕ್ಕೆ ತಮ್ಮ ಬಂಧುಬಾಂಧವರನ್ನು ಆಹ್ವಾನಿಸಿರುತ್ತಾರೆ. ಮಡಿಕೇರಿ, ಮೇಟಿಕುಪ್ಪೆ, ಕೇರಳ ಮೊದಲಾದ ಊರುಗಳಿಂದ ತಮ್ಮ ಬಂಧುಗಳನ್ನು ಕರೆಯಿಸಿಕೊಳ್ಳುತ್ತಾರೆ. ಅವರೂ ಸಹ ಈ ಹಬ್ಬದಲ್ಲಿ ಕುಣಿಯುವಾಟವನ್ನು ಆಚರಿಸುತ್ತಾರೆ. ಅಂದು ಗುಡಿಯ ಮುಂದೆಯೇ ಚಪ್ಪರ ಹಾಕಿ ಬಂದಂತವರಿಗೆ ಅಲ್ಲಿಯೇ ಅಡುಗೆಯನ್ನು ಮಾಡಿ ಬಡಿಸುತ್ತಾರೆ. ಆಗು ಹಬ್ಬಕ್ಕೆ ಬಂದಂತಹ ಬಂಧು-ಬಾಂಧವರು ಸಹ ಕುಣಿಯುವಾಟದಲ್ಲಿ ಪಾಲ್ಗೊಂಡು ಹಬ್ಬವನ್ನು ಆಚರಿಸುತ್ತಾರೆ. ಈ ಕುಣಿಯುವಾಟವನ್ನು ಒಂದು ರಾತ್ರಿ ಇಡೀ ಆಚರಿಸುತ್ತಾರೆ. ಯುಗಾದಿ ಹಬ್ಬವನ್ನು ಎಲ್ಲರೂ ಒಂದೇ ದಿನವೇ ಆಚರಿಸುತ್ತಾರೆ. ಬೇರೆಯವರು ಅಂದರೆ, ಅವರ ಬಂಧುಗಳು ಅವರ ಊರಲ್ಲಿ ಕುಣಿಯುವ ಹಬ್ಬ ಮಾಡದೆ, ಇದ್ದಂತಹ ಪಕ್ಷದಲ್ಲಿ ಅವರು ಇಲ್ಲಿಗೆ ಬಂದು ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಯುಗಾದಿ ಹಬ್ಬವನ್ನು ಕಾಡುಕುರುಬರು ಚಾವಡಿಯಲ್ಲಿ ಆಚರಿಸುತ್ತಿದ್ದರು. ಅವರು ಇಂದು ಕಾಡಿನಿಂದ ನಾಡಿಗೆ ಬಂದ ಕಾರಣ ಅವರವರ ಮನೆಯಲ್ಲಿಯೇ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ.

ಗೌರಿಹಬ್ಬ: ಕಾಡುಕುರುಬರಲ್ಲಿ ಗೌರಿಹಬ್ಬವು ಹೆಚ್ಚು ವಿಶೇಷವಾಗಿ ಕಂಡುಬರುತ್ತದೆ. ಕಾಡುಕುರುಬರು ಗೌರಿಹಬ್ಬದ ದಿನ ಗೌರಿಯನ್ನಷ್ಟೇ ಪೂಜಿಸುತ್ತಾರೆ. ಇನ್ನಾವುದೇ ದೇವರನ್ನು ಪೂಜಿಸುವುದಿಲ್ಲ. ಗೌರಿ ಹಬ್ಬದ ನಿಮಿತ್ತವಾಗಿ ಮನೆಯೆಲ್ಲವನ್ನು ಶುದ್ಧಿಗೊಳಿಸಿ ನಂತರ ಚಾವಡಿಯನ್ನು ಶುಚಿಗೊಳಿಸುತ್ತಾರೆ. ಅಂದು ಎಲ್ಲರ ಮನೆಯಲ್ಲಿ ಗೌರಿಹಬ್ಬದ ಆಚರಣೆ ನಡೆಯುತ್ತದೆ. ಈ ಹಬ್ಬದಲ್ಲಿ ಯಾವುದೇ ದೇವರನ್ನು ಕರೆಯುವುದಿಲ್ಲ. ಅಂದು ಗೌರಿಯನ್ನು ಪೂಜೆ ಮಾಡಿ ಹಿಟ್ಟು, ತುಂಬೆಸೊಪ್ಪು ಮತ್ತು ಅಂಬಲಿಯನ್ನು ಗೌರಿಗೆ ನೈವೇದ್ಯ ಮಾಡುತ್ತಾರೆ. ಕಾಡುಕುರುಬರ ಕಥೆಯ ಪ್ರಕಾರ ಹೇಳುವುದೇನೆಂದರೆ ಗೌರಿಹಬ್ಬದ ದಿನ ಗೌರಿಯು ಮೊದಲು ಕಾಡುಕುರುಬರ ಮನೆಗೆ ಬರುತ್ತಾಳೆ. ತುಂಬೆಸೊಪ್ಪು ಮತ್ತು ರಾಗಿ ಅಂಬಲಿಯನ್ನು ಕುಡಿದರೆ ನನ್ನ ಮಕ್ಕಳಿಗೆ ಸಂತೋಷವಾಗುತ್ತದೆ ಎನ್ನುವ ನಂಬಿಕೆ ಕಾಡುಕುರುಬರಲ್ಲಿದೆ. ಕಾಡುಕುರುಬರು ತಮ್ಮ ಮನೆಯಲ್ಲಿ ಅವರಿಗೆ ಸಂಬಂಧಿಸಿದ ಯಾವ ದೇವರ ಫೋಟೋವನ್ನು ಇಟ್ಟು ಪೂಜಿಸುವುದಿಲ್ಲ. ಅಲ್ಲದೇ ಬೇರೆ ದೇವರ ಫೋಟೋಗಳನ್ನು ಇಡುವಂತಿಲ್ಲ. ಆದರೆ ಇಂದು ನಾಗರಿಕತೆಯ ಪರಿಣಾಮವಾಗಿ ಗಣೇಶ, ಸರಸ್ವತಿ, ಲಕ್ಷ್ಮೀ ಮೊದಲಾದ ದೇವರ ಫೋಟೋಗಳನ್ನು ಇಟ್ಟು ಪೂಜಿಸುತ್ತಾರೆ. ಗೌರಿಹಬ್ಬದ ದಿನ ಇದ್ದಂತಹ ಬಟ್ಟೆಯನ್ನೇ ಹಾಕಿಕೊಳ್ಳುತ್ತಾರೆ.

ಜೇನುಕುರುಬರ ಹಬ್ಬ-ಹರಿದಿನಗಳು

ಯುಗಾದಿ: ಜೇನುಕುರುಬರು ವಾರ್ಷಿಕವಾಗಿ ಯುಗಾದಿ, ಗೌರಿಹಬ್ಬ ಮತ್ತು ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿ ಹಬ್ಬದಂದು ಮೇಲುಕೋಟೆಯ ದೇವಸ್ಥಾನಕ್ಕೆ ಹೋಗಿ ಪೂಜೆಯನ್ನು ಸಲ್ಲಿಸಿ ಕೋಲಾಟವನ್ನು ಆಡಿಕೊಂಡು ಬರುತ್ತಾರೆ. ಅಂದು ಅವರ ದ್ಯೇಯ ದೇವರುಗಳು ಇರುವ ಎಲ್ಲಾ ಮೂಲಸ್ಥಳಗಳಿಗೆ ಭೇಟಿಯನ್ನು ನೀಡಿ ಪೂಜೆಯನ್ನು ಸಲ್ಲಿಸಿ ಕೋಲಾಟವನ್ನು ಆಡಿಕೊಂಡು ಬರುತ್ತಾರೆ. ೧೦ರಿಂದ ೩೦ ಜನರ ತಂಡ ಈ ಕೋಲಾಟವನ್ನು ಆಡುತ್ತದೆ. ದೇವರ ಪೂಜೆಗೆ ಹಣ್ಣು, ಕಾಯಿ, ಎಲೆ ಅಡಿಕೆ, ಕಣಗಲ ಹೂ, ಕಕ್ಕೆ ಹೂ, ಮುತ್ತುಗದ ಹೂಗಳನ್ನು ಅರ್ಪಿಸುತ್ತಾರೆ. ನಂತರ ದೇವರ ಪೂಜೆ ಮಾಡಿ ಮನೆಗೆ ಬಂದು ಕೋಲು ಒಡೆಯಬೇಕು. ಆ ನಂತರ ಎಲ್ಲರೂ ಮನೆಯಿಂದ ತಂದು ಕೊಟ್ಟಂತಹ ಅಕ್ಕಿ, ಬೆಲ್ಲ, ಹಿಟ್ಟಿನಿಂದ ಅಡುಗೆಯನ್ನು ಮಾಡಿ ಊಟವನ್ನು ಮಾಡಿ ಬಡಿಸುತ್ತಾರೆ. ಅಂದು ಎಲ್ಲರೂ ಹೊಸ ಬಟ್ಟೆಯನ್ನು ತೊಟ್ಟು ಸಂಭ್ರಮದಿಂದ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ.

ಗೌರಿಹಬ್ಬ: ಗೌರಿಹಬ್ಬದ ದಿನದಂದು ಮನೆಯನ್ನು ಶುಚಿಗೊಳಿಸುತ್ತಾರೆ. ಅಂದು ಗೌರಿ ಬರುವ ದಿನ ಜೇನುಕುರುಬರು ಮನೆಯಲ್ಲಿ ಸೌತೆಕಾಯಿ, ಹೀರೆಕಾಯಿ, ಕುಂಬಳಕಾಯಿ, ಮೊದಲಾದ ತರಕಾರಿಗಳನ್ನು ಮನೆಯಲ್ಲಿ ಹೆಚ್ಚುವುದಿಲ್ಲ. ಗೌರಿಯು ಜೇನುಕುರುಬರ ಜಮ್ಮಾಕ್ಕೆ ಬಂದ ನಂತರ ಎಲ್ಲರೂ ಸೇರಿ ತರಕಾರಿಗಳನ್ನು ಹೆಚ್ಚಿ ಅಡುಗೆಯನ್ನು ಮಾಡಿ ಇಡುತ್ತಾರೆ. ಅಂದು ಅವರ ಮನೆಯಲ್ಲಿ ಗೌರಿಯ ವಿಗ್ರಹವನ್ನು ಇಡುವುದಿಲ್ಲ. ಗೌರಿಹಬ್ಬದ ದಿನ ಅವರ ಮನೆಯ ದೇವರನ್ನು ಪೂಜಿಸುತ್ತಾರೆ. ಅವರವರ ಮನೆಯಲ್ಲಿ ಅವರಿಗಿಷ್ಟವಾದ ತಿಂಡಿಗಳನ್ನು ಮಾಡುತ್ತಾರೆ. ಗೌರಿಹಬ್ಬದ ದಿನ ಹಿಟ್ಟು ಮತ್ತು ಅಂಬಲಿ, ಸೊಪ್ಪು(ತುಂಬೆ ಸೊಪ್ಪು) ವಿಶೇಷವಾದ ಆಹಾರವಾಗಿದೆ. ಇದು ಗೌರಿಗೆ ಪ್ರಿಯವಾದ ಆಹಾರ ಎಂಬುದು ಇವರ ನಂಬಿಕೆ.

ದೀಪಾವಳಿ: ದೀಪಾವಳಿಯ ದಿನದಂದು ಎಲ್ಲಾ ಹಿರಿಯರನ್ನು ಪೂಜಿಸಿ ನಂತರ ಅವರ ಮನೆಯ ದೇವರುಗಳನ್ನು ಪೂಜಿಸುತ್ತಾರೆ. ಅವರ ಹಿರಿಯರಿಗೆ ಪೂಜೆ ಸಲ್ಲಿಸಿದರೆ. ಅವರ ದ್ಯೇಯ ದೇವರುಗಳಿಗೆ ಪೂಜೆ ಸಲ್ಲಿಸಿದಂತೆ. ಅಂದು ಸತ್ತಂತಹ ಹಿರಿಯರಿಗೆ ಪಂಚೆ ಅಥವಾ ಸೀರೆಯನ್ನು ತಂದು ಇಡುತ್ತಾರೆ. ನಂತರ ಪೂಜಾ ಸಾಮಗ್ರಿಗಳಾದ ಗಂಧದ ಕಡ್ಡಿ, ಹೂ, ಕಾಯಿ, ಹಣ್ಣು, ಕರ್ಪೂರ, ಎಲೆ ಅಡಿಕೆ, ಹೊಗೆ ಸೊಪ್ಪನ್ನು ಇಟ್ಟು ಪೂಜಿಸಿ ತಮ್ಮ ಮೇಲೆ ಯಾವುದೇ ರೀತಿಯ ಕೋಪವನ್ನು ಇಟ್ಟುಕೊಳ್ಳದೆ ನಮ್ಮನ್ನು ಕಾಪಾಡಿ ಎಂದು ಅವರ ಹಿರಿಯರನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಅಂದು ಸಂಜೆ

ದೇವರನ್ನು ಕರೆದು ಭವಿಷ್ಯದಲ್ಲಿ ಯಾವುದೇ ತೊಂದರೆ ಬರದಂತೆ ಕಾಯಬೇಕು ಎಂದು ಕೇಳಿಕೊಳ್ಳುತ್ತಾರೆ. ಪೂಜೆ ಆದ ಬಳಿಕ ಎಂಟು ದಿನಗಳವರೆಗೆ ಒಬ್ಬರು ಇನ್ನೊಬ್ಬರ ಮನೆಗೆ ಹೋಗುವುದಿಲ್ಲ. ಅದನ್ನು ಅವರು ಸೂತಕದ ದಿನಗಳಂತೆ ಕಾಲ ಕಳೆಯುತ್ತಾರೆ. ಅಂದು ಹಿರಿಯರಿಗೆ ಅವರು ಇಷ್ಟಪಡುವಂತಹ ಆಹಾರಗಳನ್ನು ನೈವೇದ್ಯ ಮಾಡುತ್ತಾರೆ. ಅಂದು ಹಿರಿಯರಿಗೆಂದು ಪಾಯಸ, ಬೋಂಡಾ, ಉಪ್ಪಿಟ್ಟು, ಕೇಸರಿಬಾತ್ ಅವರವರ ಮನೆಯಲ್ಲಿ ಅವರಿಗೆ ಇಷ್ಟವಾದ ಆಹಾರವನ್ನು ಮಾಡುತ್ತಾರೆ.

ಕಾಡುಕುರುಬರ ವ್ಯವಸಾಯ ಸಂಬಂಧಿ ಆಚರಣೆಗಳು

ಕಾಡುಕುರುಬರು ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಬಿತ್ತನೆ ಸಂದರ್ಭದಲ್ಲಿ ಮಾಡಬೇಕಾದ ಕಾರ್ಯಗಳಿಗೆ ಸಂಬಂಧಿಸಿದಂತೆ ಮೊದಲು ಹಾಡಿಯ ಯಜಮಾನನ ನೇತೃತ್ವದಲ್ಲಿ ಸಭೆಯನ್ನು ಕರೆಯಲಾಗುತ್ತದೆ. ಚಾವಡಿಯಲ್ಲಿ ಯಜಮಾನ ಹಾಗೂ ಊರಿನ ಜನರೆಲ್ಲರೂ ಸೇರಿ ದೇವರನ್ನು ಕರೆದು ಕೇಳಲಾಗುತ್ತದೆ. ದೇವರು ಒಪ್ಪಿಗೆ ಕೊಟ್ಟ ಮೇಲೆ ಯಜಮಾನ ಬೆಳಗ್ಗೆ ಹೊಲದಲ್ಲಿ ಹೋಗಿ ಅಲ್ಲಿನ ಗಿಡವನ್ನು ಸ್ವಲ್ಪ ತೆರೆದು ಕೊಡಬೇಕು. ಆ ನಂತರ ಮರುದಿನ ಹೊಲವನ್ನು ಶುಚಿಗೊಳಿಸಲು ಹೋಗಬೇಕು. ಹಾಗೆಯೇ ಬೀಜವನ್ನು ನೆಡುವಾಗಲೂ ದೇವರನ್ನು ಕರೆಯಿಸಿ ಅಪ್ಪಣೆ ಪಡೆದ ನಂತರವೇ ಯಜಮಾನ ಹೋಗಿ ಬೀಜವನ್ನು ಬಿತ್ತಿದ ನಂತರವೇ ಉಳಿದೆಲ್ಲದಕ್ಕೂ ಬೀಜವನ್ನು ಬಿತ್ತುವ ಕಾರ್ಯವನ್ನು ಕೈಗೊಳ್ಳಬೇಕು. ಈ ಯಜಮಾನನು ತನ್ನ ವ್ಯಾಪ್ತಿಯಲ್ಲಿ ಬರುವ ಜಮ್ಮಾದಲ್ಲಿಯ ಎಲ್ಲಾ ಹೊಲಗಳಿಗೆ ಹೋಗಿ ಬೀಜ ಬಿತ್ತುವ, ಬೆಳೆಯನ್ನು ಕೋಯ್ಯುವ ಹಾಗೂ ಹೊಲದಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಆರಂಭ ಮಾಡುತ್ತಾನೆ.

ಯಜಮಾನನು ತನ್ನ ವ್ಯಾಪ್ತಿಯಲ್ಲಿ ಬರುವ ಜಮ್ಮಾದಲ್ಲಿನ ಯಾವುದಾದರೂ ಒಂದು ಹೊಲಕ್ಕೆ ಹೋಗದೆ ಇದ್ದರೆ ಅಲ್ಲಿ ಯಾವುದೇ ರೀತಿಯ ಬಿತ್ತನೆ ಕೆಲಸ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ. ಯಜಮಾನ ಬಂದು ಮೊದಲು ಬಿತ್ತನೆ ಕೆಲಸವನ್ನು ಪ್ರಾರಂಭಿಸಿಕೊಟ್ಟರೆ ಮಾತ್ರವೇ ಆ ಹೊಲದಲ್ಲಿ ಮುಂದಿನ ಕೃಷಿ ಚಟುವಟಿಕೆಗಳು ನಡೆಯಬೇಕು. ಇಲ್ಲದಿದ್ದರೆ ಅಲ್ಲಿ ಯಾವ ಚಟುವಟಿಕೆಯೂ ನಡೆಯುವಂತಿಲ್ಲ ಅಥವಾ ಏನಾದರೂ ತಪ್ಪಾಗಿದ್ದರೆ ಅಂಬಾಲದಲ್ಲಿ ತಪ್ಪನ್ನು ಕಳೆಯಲಾಗುತ್ತದೆ. ಕಟ್ಟೆ ಮನೆಗೆ ತಪ್ಪು ಮಾಡಿದವರು ೧ ರೂಪಾಯಿಯಿಂದ ೧೦ ರೂಪಾಯಿಗಳವರೆಗೆ ಯಜಮಾನರು ದಂಡ ವಿಧಿಸುತ್ತಾರೆ. ಆಗ ತಪ್ಪು ಮಾಡಿರುವಂತಹವರು ಆ ದಂಡ ಮತ್ತು ಕಬ್ಬಿಣದ ಚೂರನ್ನು ನೀಡಬೇಕು. ಆಗ ತಪ್ಪು ಕಳೆದಂತೆ ಆಗುತ್ತದೆ. ಹೊಲದಲ್ಲಿ ಜಗಳವಾಡಿದ ಸಂದರ್ಭದಲ್ಲಿ, ತಪ್ಪಾಗಿ ಕೆಟ್ಟು ಮಾತುಗಳಾಡಿದ ಸಂದರ್ಭದಲ್ಲಿ ತಪ್ಪಿಗೆ ದಂಡ ಹಾಕಲಾಗುತ್ತದೆ.

ಕಾಡುಕುರುಬರು ಬೆಳೆ ಬಂದಂತಹ ಸಂದರ್ಭದಲ್ಲಿ ಯಾವುದೇ ರೀತಿಯ ವಿಶೇಷ ಪೂಜೆ ಮಾಡುವಂತಿಲ್ಲ. ಆದರೆ ಯಜಮಾನರು ಬಂದು ದೇವರ ಹೆಸರು ಹೇಳಿ ಪೂಜೆಯನ್ನು ಮಾಡುತ್ತಾರೆ. ಪೂಜೆಗೆ ಗಂಧದ ಕಡ್ಡಿ, ತೆಂಗಿನ ಕಾಯಿ, ಬಾಳೆಹಣ್ಣು, ಅರಿಶಿನ ಕುಂಕುಮ ಇಟ್ಟು ಬೆಳೆದಂತಹ ಬೆಳೆಗೆ ಯಜಮಾನರು ಪೂಜೆಯನ್ನು ಸಲ್ಲಿಸಿ ಯಜಮಾನ ೩ ತೆನೆಯನ್ನು ತೆಗೆದುಕೊಡುತ್ತಾರೆ. ಅದನ್ನು ತಂದು ಮನೆಯಲ್ಲಿ ಇಡಲಾಗುತ್ತದೆ. ಆ ನಂತರ ಉಳಿದ ಫಸಲನ್ನು ಕಟಾವು ಮಾಡಲಾಗುತ್ತದೆ. ಹಾಗೆಯೇ ಕುಂಬಳ ಕಾಯಿ ಬೆಳೆಯನ್ನು ಹಾಕಿದಾಗ ಬೆಳೆ ಬಂದಂತಹ ಸಂದರ್ಭದಲ್ಲಿ ಯಜಮಾನ ಬೆಳೆಗೆ ಪೂಜೆ ಸಲ್ಲಿಸಿ ಒಂದು ಕುಂಬಳ ಕಾಯಿಯನ್ನು ತೆಗೆದುಕೊಂಡು ಹೋಗುತ್ತಾನೆ. ಆ ನಂತರ ಉಳಿದ ಫಸಲನ್ನು ತೆಗೆದುಕೊಂಡು ಹೋಗಬಹುದು.

ಕಾಡುಕುರುಬರು ಹಿಂದಿನ ಕಾಲದಲ್ಲಿ ಮಳೆ ಆಧಾರಿತ ಕೃಷಿಯನ್ನು ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಕಾಡಿನಲ್ಲಿಯ ಕೆರೆಯ ಹತ್ತಿರ ನೀರನ್ನು ಬಳಸಿಕೊಂಡು ರಾಗಿ, ಭತ್ತ, ಬಾಳೆ, ಗೆಣಸನ್ನು ಬೆಳೆಯುತ್ತಿದ್ದರು. ಬೆಳೆದಂತಹ ಬೆಳೆಯನ್ನು ಅಂಬಾಲಕ್ಕೆ ತೆಗೆದುಕೊಂಡು ಹೋಗಿ ಹಾಕಿ ಎಲ್ಲಾ ಯಜಮಾನರಿಗೂ ಹಂಚಲಾಗುತ್ತಿತ್ತು. ಉಳಿದ ಫಸಲನ್ನು ಅವರು ಇಟ್ಟುಕೊಳ್ಳುತ್ತಿದ್ದರು. ಆದರೆ ಇಂದು ಆ ಸಂಪ್ರದಾಯ ಅವರಲ್ಲಿ ಕಣ್ಮರೆಯಾಗಿದೆ. ಕಾಡುಕುರುಬರು ವರ್ಷಕ್ಕೆ ಒಂದು ಬೆಳೆಯನ್ನು ಮಾತ್ರ ತೆಗೆಯುತ್ತಾರೆ. ಅದೂ ಮಳೆಯಾಧಾರಿತ ಬೇಸಾಯವನ್ನು ಮಾತ್ರ ಮಾಡುತ್ತಾರೆ. ಉಳಿದ ಸಮಯದಲ್ಲಿ ಕಾಡುಕುರುಬರು ಹಾಗೆಯೇ ಕಾಲ ಕಳೆಯುವುದು, ಇಲ್ಲವೇ ಹೊರರಾಜ್ಯ ಅಥವಾ ಹೊರಜಿಲ್ಲೆಗಳಿಗೆ ಕೃಷಿ ಕೂಲಿಗೆ ಹೋಗುತ್ತಾರೆ. ಮತ್ತೆ ಅವರು ಮಳೆಗಾಲಕ್ಕೆ ತಮ್ಮ ಮೂಲನೆಲೆಗಳಿಗೆ ಹಿಂದಿರುಗುತ್ತಾರೆ.

ಜೇನುಕುರುಬರ ವ್ಯವಸಾಯಸಂಬಂಧಿ ಆಚರಣೆಗಳು

ಜೇನುಕುರುಬರು ಹೊಲದಲ್ಲಿ ಬೀಜ ಬಿತ್ತುವ ಮೊದಲು ಪೂಜಾರಿಯ ಮೂಲಕ ಹಣ್ಣು, ಕಾಯಿ, ಅರಿಶಿನ ಕುಂಕುಮ, ಗಂಧದ ಕಡ್ಡಿಯನ್ನಿಟ್ಟು ಪೂಜೆಯನ್ನು ಸಲ್ಲಿಸಿ ಆ ನಂತರ ಬೀಜವನ್ನು ಬಿತ್ತುತ್ತಾರೆ. ಅಂದು ಪೂಜಾರಿಯು ಪೂಜೆ ಮಾಡಿ ಬೀಜ ಬಿತ್ತಿ ಕೊಟ್ಟ ನಂತರವೇ ಹೊಲವನ್ನು ಬಿತ್ತಲು ಪ್ರಾರಂಭಿಸುತ್ತಾರೆ. ಆ ಪೂಜೆಯನ್ನು ಬೆಳಗ್ಗೆ ೬ರಿಂದ ೭ರೊಳಗೆ ಮಾಡುತ್ತಾರೆ. ಹಾಗೆಯೇ ಬೆಳೆ ಬಂದಾಗ ಸಹ ಪೂಜೆಯನ್ನು ಮಾಡುತ್ತಾರೆ. ನಂತರ ಬೆಳೆದಂತಹ ಬೆಳೆಯನ್ನು ತಂದು ಒಂದು ಕಡೆ ರಾಶಿ ಹಾಕಿ ರಾಶಿಪೂಜೆಯನ್ನು ಮಾಡುತ್ತಾರೆ. ಇವರು ರಾಗಿ, ಅಕ್ಕಿ, ಭತ್ತವನ್ನು ಬೆಳೆಯುತ್ತಾರೆ. ಅವರು ಈಗ ಬೆಳೆದಂತಹ ಬೆಳೆಯನ್ನು ಮುಂದಿನ ವರ್ಷದವರೆಗೂ ಇಟ್ಟುಕೊಂಡು ಅದನ್ನೇ ಬಿತ್ತನೆಗೆ ಬಳಸುತ್ತಾರೆ. ಇವರು ಮಳೆಯಾಧಾರಿತ ಬೇಸಾಯವನ್ನು ಮಾಡುತ್ತಾರೆ.

ಆದರಿಂದ ಇವರು ವರ್ಷಕ್ಕೆ ಒಂದು ಬಾರಿ ಮಾತ್ರ ಬೆಳೆಯನ್ನು ಪಡೆಯುತ್ತಾರೆ. ಬೇಸಿಗೆ ಕಾಲದಲ್ಲಿ ನೀರಿನ ವ್ಯವಸ್ಥೆಯಿಲ್ಲದ ಕಾರಣ ಆ ದಿನಗಳಲ್ಲಿ ಸುಮ್ಮನೆ ಕಾಲ ಕಳೆಯುವ ಅಥವಾ ಬೇರೆಡೆಗೆ ಕೂಲಿಗೆ ವಲಸೆ ಹೋಗುತ್ತಾರೆ. ಮತ್ತೆ ಮಳೆಗಾಲ ಬಂದಾಗ ತಮ್ಮ ಮೂಲ ನೆಲೆಗಳಿಗೆ ಹಿಂದಿರುಗಿ ವ್ಯವಸಾಯದಲ್ಲಿ ತೊಡಗಿಕೊಳ್ಳುತ್ತಾರೆ. ಬೆಳೆಗೆ ಬಂದಂತಹ ರೋಗಗಳಿಗೆ ಸಗಣಿ ಗೊಬ್ಬರವನ್ನು ಹಾಕುತ್ತಾರೆ. ಇವರು ರಾಗಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಜೇನುಕುರುಬರು ಬೆಳೆದಂತಹ ಬೆಳೆಯನ್ನು ಇವರು ಗುಂಡಿ ತೋಡಿ ಅದರಲ್ಲಿ ತೊಪ್ಪೆಯ ಗೊಬ್ಬರವನ್ನು ಹಾಕಿ ಮತ್ತು ಗುಂಡಿಯಲ್ಲಿ ಸೌದೆಯನ್ನು ಸುಟ್ಟು ಅದನ್ನೇ ಗುಂಡಿಯ ಸುತ್ತಲೂ ಬಳಿಯುತ್ತಾರೆ. ನಂತರ ಸಗಣಿಯನ್ನು ಬಳಿಯುತ್ತಾರೆ. ನಂತರ ಗುಂಡಿಯಲ್ಲಿ ಬೆಳೆಯನ್ನು ಹಾಕಿ ಅದರ ಮೇಲೆ ಸಾಗುವಾನಿಯ ಎಲೆಯನ್ನು ಹಾಕಿ ಬಿದಿರಿನ ಕಡ್ಡಿಯಿಂದ ಮಾಡಿದ ಪುಟ್ಟಿಯನ್ನು ಮುಚ್ಚಿ ಮಣ್ಣು ಹಾಕಲಾಗುತ್ತದೆ.

ಜೇನುಕುರುಬರು ಮಳೆ ಬಾರದಂತಹ ಸಂದರ್ಭದಲ್ಲಿ ಪೂಜಾರಿಯನ್ನು ಕರೆದು ದೇವರನ್ನು ಕರೆಸುತ್ತಾರೆ. ಪೂಜಾರಿಯು ಗುಡ್ಡಪ್ಪನ ಮೇಲೆ ದೇವರನ್ನು ಹಾಗೂ ಹಿರಿಯರನ್ನು ಆಹ್ವಾನಿಸಿ ಮಳೆಯ ಬರುವಿಕೆಯ ಬಗ್ಗೆ ಭವಿಷ್ಯವನ್ನು ನುಡಿಯುತ್ತಾನೆ. ಇಂತಿಷ್ಟು ದಿನಕ್ಕೆ ಮಳೆಯಾಗುತ್ತದೆ ಎಂದು ದೇವರು ಭವಿಷ್ಯವನ್ನು ಹೇಳುತ್ತದೆ. ಅಷ್ಟು ದಿನಗಳಲ್ಲಿ ಮಳೆ ಬಂದರೆ ಅವರು ದೇವರ ಇರುವಿಕೆಯನ್ನು ನಂಬುತ್ತಾರೆ. ದೇವರು ಮಳೆ ಬರುವಿಕೆಗೆ ೩ ಅಥವಾ ೮ ದಿನಗಳ ಕಾಲಾವಕಾಶವನ್ನು ನೀಡುತ್ತದೆ.

ಅಡಿಟಿಪ್ಪಣಿ

೧. ಭದ್ರಾಪೂರ ಎಸ್.ಎಸ್., ಜೋಕುಮಾರ: ಜಾನಪದ ಸಾಹಿತ್ಯದರ್ಶನ(ಭಾಗ-೧೦) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭

೨. ದೇ. ಜವರೇಗೌಡ, ಜಾನಪದ ಅಧ್ಯಯನ, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು, ೧೯೭೬

ಅಧ್ಯಾಯ ಆರು

ಸಮಾರೋಪ

'ಪ್ರತಿಯೊಂದು ಸಮಾಜವು ನಿತ್ಯಪರಿವರ್ತನ ಶೀಲವಾದದ್ದು. ಬುಡಕಟ್ಟು ಸಮುದಾಯಗಳು ಆದಿಮ ಕಾಲದಿಂದಲು ಬದಲಾವಣೆಯನ್ನು ಹೊಂದುತ್ತಾ ಬಂದಿದ್ದು ಕೆಲವು ಬುಡಕಟ್ಟುಗಳಲ್ಲಿ ಬದಲಾವಣೆಯು ಆಗುತ್ತಿಲ್ಲ ಎಂಬ ಭಾವನೆ ಒಂದು ಕಾಲಕ್ಕೆ ಇತ್ತು. ಆದರೆ ಇಂದು ಕಾಡುಕುರುಬ ಮತ್ತು ಜೇನುಕುರುಬರ ಜೀವನ ವಿಧಾನದಲ್ಲಿ ನಿಧಾನಗತಿಯಲ್ಲಿ ಬದಲಾವಣೆ ಹೊಂದುತ್ತಿದ್ದು. ಆಧುನಿಕ ಸಮಾಜದ ಪ್ರೇರಣೆಗಳ ಹಿನ್ನೆಲೆಯಿಂದ ಹಲವು ರೀತಿಯಲ್ಲಿ ಸ್ಥಿತ್ಯಂತರಗೊಳ್ಳುತ್ತಿರುವುದನ್ನು ಗಮನಿಸಬಹುದು'.[೧] ಈ ಸಂದರ್ಭದಲ್ಲಿ ಕಾಡುಕುರುಬ ಮತ್ತು ಜೇನುಕುರುಬರ ಪಾರಂಪರಿಕ ಜ್ಞಾನವನ್ನು ಅವಲೋಕಿಸಿದಾಗ ಅವರ ಪರಂಪರೆಯಲ್ಲಿ ಆಗಿರುವ ಬದಲಾವಣೆಗಳನ್ನು ಗ್ರಹಿಸಬಹುದು. ಅಂದರೆ ಆಹಾರ, ಉಡುಗೆ-ತೊಡುಗೆ, ವೈದ್ಯಪದ್ಧತಿ, ಆಚರಣೆಗಳು, ನಂಬಿಕೆಗಳಲ್ಲಿ ಬದಲಾವಣೆಯಾಗುತ್ತಿದೆ. ಇವರ ಪಾರಂಪರಿಕ ಕಸುಬುಗಳಾದ ಜೇನು ಕೀಳುವುದು, ಬಿದಿರಿನ ವಸ್ತುಗಳ ತಯಾರಿಕೆ, ಅರಣ್ಯೋತ್ಪನ್ನಗಳನ್ನು ಸಂಗ್ರಹಿಸುವುದು ಮೊದಲಾದ ಪಾರಂಪರಿಕ ಕಸುಬುಗಳು ಈ ಬುಡಕಟ್ಟು ಜನರಿಂದ ದೂರ ಸಂದಿವೆ. ಕಾರಣ ಈ ಬುಡಕಟ್ಟು ಸಮುದಾಯಗಳನ್ನು ಅವರ ಮೂಲ ನೆಲೆಯಿಂದ ಹೊಕ್ಕಲೆಬ್ಬಿಸಲಾಗಿದೆ ಮತ್ತು ಸರ್ಕಾರಗಳ ಕಾಯಿದೆ ಕಾನೂನುಗಳನ್ನು ಜಾರಿಗೆ ತಂದು ಅವರು ಕಾಡಿನಲ್ಲಿ ಯಾವುದೇ ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧ ವಿಧಿಸಿದ್ದಾರೆ. ಇದಕ್ಕೆ ಮೂಲ ಕಾರಣ ಜಾಗತೀಕರಣ ಮತ್ತು ಆಧುನಿಕತೆಯ ಪ್ರಭಾವ ಎಂದರೆ ತಪ್ಪಾಗಲಾರದು.

* ಇಂದು ಬುಡಕಟ್ಟು ಜನರ ಉದ್ಯೋಗವಾಗಿ ಕೃಷಿ, ಕೃಷಿಕೂಲಿ ಕಾರ್ಮಿಕರಾಗಿ, ಅರಣ್ಯ ಕಾಯುವ ಗಾರ್ಡ್‌ಗಳಾಗಿ ಕಾರ್ಯನಿರ್ವಹಿಸುತ್ತಾ, ಅವರ ಪರಂಪರೆಯ ವೃತ್ತಿಯಲ್ಲಿ ಆಗಿರುವ ಸ್ಥಿತ್ಯಂತರವನ್ನು ಗಮನಿಸಬಹುದು.
* ಇವರ ಆಹಾರ ಪದ್ಧತಿಯಾಗಿ ಅಂದು ಗೆಡ್ಡೆ ಗೆಣಸು, ಸೊಪ್ಪು, ಹಣ್ಣುಹಂಪಲುಗಳನ್ನು ತಿಂದು ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಂಡು ಬಂದಿದ್ದರು. ಆದರೆ

ಇಂದು ಇವರು ನಗರಗಳ ಸಮೀಪದಲ್ಲಿ ಬದುಕು ಸಾಗಿಸುತ್ತಿದ್ದಾರೆ. ಇವರ ಆರೋಗ್ಯದಲ್ಲಿ ಬದಲಾವಣೆಗಳಾಗುತ್ತಿವೆ. ಹಿಂದೆ ಇವರು ಆಸ್ಪತ್ರೆ ವೈದ್ಯರು ಇಲ್ಲದ ಕಾಲದಲ್ಲೂ ರೋಗಗಳು ರುಜಿನಗಳು ಬರುತ್ತಿದ್ದವು. ಅಂತ ಸಂದರ್ಭದಲ್ಲಿ ಇವರು ತಮ್ಮ ಪರಂಪರೆಯಿಂದ ಬಂದಂತಹ ವೈದ್ಯಪದ್ಧತಿಯ ಮೂಲಕ, ದೇವರ ಮೂಲಕ, ಹಿರಿಯರ ಆತ್ಮಗಳನ್ನು ಪೂಜಿಸುವ ಮೂಲಕ ತಮಗೆ ಬಂದಂತಹ ರೋಗ–ರುಜಿನಗಳನ್ನು ವಾಸಿಮಾಡಿಕೊಳ್ಳುತ್ತಿದ್ದರು. ಆದರೆ ಇಂದು ಇವರು ಆಧುನಿಕ ವೈದ್ಯಕೀಯ ಪದ್ಧತಿಗೆ ಹೊಂದಿಕೊಳ್ಳುತ್ತಾ ತಮ್ಮ ಪರಂಪರೆಯಿಂದ ಬಂದಂತಹ ವೈದ್ಯಕೀಯ ಜ್ಞಾನ ಅವರಲ್ಲಿ ಮರೆಯಾಗುತ್ತಿದೆ. ಇಂದು ಹಾಲೋಪತಿ ಮಾದರಿಯ ವೈದ್ಯಪದ್ಧತಿಗೆ ಸ್ಪಂದಿಸುತ್ತಿರುವ ಮನೋಭಾವನೆ ಇವರಲ್ಲಿ ಕಂಡು ಬರುತ್ತದೆ.

* ಇಲ್ಲಿಯವರೆಗೂ ಇವರು ಒಂದು ಸರಳವಾದ ಗುಡಿಸಲನ್ನು ಕಟ್ಟಿಕೊಂಡು ಅದರಲ್ಲಿಯೇ ಅವರ ಕುಟುಂಬಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಂಡು ಬದುಕುತ್ತಿದ್ದರು. ಇಂದು ಕೆಲವರು ಹೆಂಚಿನ ಮನೆಗಳಲ್ಲಿ, ಜನತಾ ಮನೆಗಳಲ್ಲಿ ವಾಸಿಸುವುದನ್ನು ರೂಢಿಸಿಕೊಳ್ಳುತ್ತಿದ್ದಾರೆ.

* ಮಣ್ಣಿನ ಮಡಕೆಯನ್ನು ಮಾತ್ರ ಬಳಸುತ್ತಿದ್ದವರು ಇಂದು ಹಿತ್ತಾಳೆ, ಅಲ್ಯುಮಿನಿಯಂ, ಸ್ಟೀಲ್ ಪಾತ್ರೆಗಳನ್ನು ಬಳಸುತ್ತಿದ್ದಾರೆ.

* ಹಿಂದೆ ಬಿಳಿಯ ಕಚ್ಚೆಪಂಚೆ ಮತ್ತು ಮೇಲಂಗಿಯನ್ನು ಪುರುಷರು ತೊಡುತ್ತಿದ್ದರು. ಆದರೆ ಇಂದು ಬಣ್ಣ ಬಣ್ಣದ ಲುಂಗಿಗಳು, ಟೀ ಶರ್ಟುಗಳು, ಜೀನ್ಸ್ ಪ್ಯಾಂಟ್‌ಗಳು ಇವರ ಹಾಡಿಯನ್ನು ಪ್ರವೇಶಿಸಿವೆ. ಹೆಂಗಸರು ಸಹ ಹಿಂದೆ ಸೀರೆ, ಕುಪ್ಪಸವನ್ನಷ್ಟೆ ತೊಡುತ್ತಿದ್ದರು. ಆದರೆ ಇಂದು ಇವರು ನೈಟಿ, ಚೂಡಿದಾರ್, ಬಂಗಾರ ಲೇಪಿತ ಒಡವೆಗಳನ್ನು ವ್ಯಾಪಕವಾಗಿ ಬಳಸುತ್ತಿದ್ದಾರೆ. ವಯಸ್ಸಾದ ಹಿರಿಯರು ತಮ್ಮ ಪಾರಂಪರಿಕ ವೇಷಭೂಷಣಗಳನ್ನು ತೊಡುತ್ತಿರುವುದನ್ನು ಕಾಣುತ್ತೇವೆ.

* ಇವರಿಗೆ ಭೂಮಿಯಿಲ್ಲದ ಕಾರಣ ಇವರು ಕೃಷಿ ವೃತ್ತಿಯನ್ನು ಕೈಗೊಂಡಿರಲಿಲ್ಲ. ಇತ್ತೀಚಿತ್ತಲಾಗಿ ಸರ್ಕಾರ ಕೆಲವರಿಗೆ ಒಂದೆರೆಡು ಎಕರೆ ಭೂಮಿಯನ್ನು ನೀಡಿದೆ. ಅದರಲ್ಲಿ ಕೆಲವರು ಸಣ್ಣ ಪ್ರಮಾಣದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಇನ್ನೂ ಕೆಲವರು ದುಡ್ಡಿನ ಆಸೆಗೆ ತಮ್ಮ ಭೂಮಿಯನ್ನು ಇತರೆ ರಾಜ್ಯದವರೆಗೆ ಗೇಣಿಗೆ ನೀಡುತ್ತಿರುವುದನ್ನು ಕಾಣುತ್ತೇವೆ. ಅಲ್ಲದೇ ಅವರಿಂದ ಶೋಷಣೆಗೆ ಒಳಗಾಗಿ ತಮ್ಮ ಜೀವನ ಕ್ರಮವನ್ನು ಬದಲಿಸಿಕೊಳ್ಳಲಾಗದ ಸ್ಥಿತಿಯಲ್ಲಿರುವುದನ್ನು ಕಾಣಬಹುದು.

* ಆಧುನಿಕತೆ, ನಗರೀಕರಣ, ವೈಜ್ಞಾನಿಕತೆ, ಮಾಧ್ಯಮಗಳು ಮತ್ತು ನಾಗರಿಕ

ಸಮುದಾಯದೊಂದಿಗಿನ ಒಡನಾಟದಿಂದ ಇವರು ಪರಿವರ್ತನೆಯ ಹಾದಿಯಲ್ಲಿದ್ದಾರೆ. ಜೊತೆಗೆ ಶಿಕ್ಷಣ, ಮತದಾನದ ಹಕ್ಕುಗಳು ಅವರನ್ನು ಬದಲಾವಣೆಯತ್ತ ಕೊಂಡಯ್ಯುತ್ತಿವೆ. ಅವರ ಆಚರಣೆಗಳು ಸತ್ವ ಕಳೆದುಕೊಳ್ಳುತ್ತಿವೆ. ಶಿಷ್ಟ ಸಂಸ್ಕೃತಿ ಪ್ರಭಾವ ಇವರ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ.

* ಇವರು ತಮ್ಮ ಹುಟ್ಟು, ಮದುವೆ, ಸಾವು, ಜಾತ್ರೆ, ಹಬ್ಬಹರಿದಿನಗಳು ಇತ್ಯಾದಿ ಸಂಪ್ರದಾಯ ಆಚರಣೆಗಳ ಸಂದರ್ಭದಲ್ಲಿ ಬ್ರಾಹ್ಮಣ ಮತ್ತು ಲಿಂಗಾಯತರ ಪೌರೋಹಿತ್ಯಕ್ಕೆ ಅವಕಾಶ ನೀಡುತ್ತಿರಲಿಲ್ಲ. ಇಂದು ಬ್ರಾಹ್ಮಣ ಮತ್ತು ಲಿಂಗಾಯತರ ಪುರೋಹಿತರ ಉಸ್ತುವಾರಿಯಲ್ಲಿ ಹುಟ್ಟು, ವಿವಾಹ, ಮದುವೆ ಮೊದಲಾದ ಆಚರಣೆಗಳು ಜರಗುತ್ತಿವೆ. ಇಂದು ಇವರಲ್ಲಿ ಅನ್ಯ ದೈವಗಳ ಆಚರಣೆಯನ್ನು ಸಹ ಇವರಲ್ಲಿ ಕಾಣುತ್ತೇವೆ. ಗಣೇಶ, ಲಕ್ಷ್ಮೀ, ಸರಸ್ವತಿಯ ಫೋಟೋಗಳನ್ನು ಇಟ್ಟು ಇಂದು ಪೂಜೆ ಮಾಡುತ್ತಿರುವುದನ್ನು ನೋಡುತ್ತೇವೆ.

* ಇಂದು ಇವರು ನಾಗರಿಕ ಜನರಂತೆ ಯುಗಾದಿ, ಗೌರಿಹಬ್ಬ, ದೀಪಾವಳಿಯ ಹಬ್ಬಗಳನ್ನು ಮಾಡುವುದನ್ನು ಕಾಣುತ್ತೇವೆ.

* ಅವರ ಒಳಾಡಳಿತ ವ್ಯವಸ್ಥೆ ಅಭದ್ರವಾಗುತ್ತಿದೆ. ನ್ಯಾಯ ಪಂಚಾಯತಿಯ ನೀತಿ ನಿಯಮಗಳು, ಕಟ್ಟು-ಕಟ್ಟಳೆಗಳು ನಶಿಸುತ್ತಿವೆ. ಹಾಡಿಯ ಯಜಮಾನನ ಮೇಲಿದ್ದ ಗೌರವ, ಭಯ, ಇಂದು ಕಡಿಮೆಯಾಗುತ್ತಿದೆ.

* ಪಾರಂಪರಿಕ ಮದುವೆಯ ಆಚರಣೆಗಳು ಇಂದು ಮಾಯವಾಗಿ ನಾಗರಿಕ ಜನರ ಪ್ರಭಾವದಿಂದಾಗಿ ಮೈಕ್‌ಸೆಟ್‌ಗಳು, ಮೇಳದವರು ಕಂಡುಬರುತ್ತಿದ್ದಾರೆ. ವಧುದಕ್ಷಿಣೆಯ ಬದಲಾಗಿ ವರದಕ್ಷಿಣೆಯು ಆ ಸ್ಥಾನವನ್ನು ಅಲಂಕರಿಸಿದೆ.

* ಆಧುನಿಕತೆ ಮತ್ತು ಜಾಗತೀಕರಣದ ಇಂದಿನ ವ್ಯವಸ್ಥೆಯಲ್ಲಿ ಇವರು ಸಂಪ್ರದಾಯ, ಆಚರಣೆಗಳನ್ನು ಇಂದಿಗೂ ರೂಢಿಸಿಕೊಂಡಿದುದು. ಇವರ ಕೆಲ ಆಚರಣೆಗಳಲ್ಲಿ ನಿಧಾನಗತಿಯ ಬದಲಾವಣೆಯಾಗುತ್ತಿದೆ.

* ಶೈಕ್ಷಣಿಕವಾಗಿ ಸ್ತ್ರೀ ಮತ್ತು ಪುರುಷರ ಪ್ರಮಾಣ ಕಡಿಮೆ ಇದೆ. ಆದರೆ ಇವರ ಶಿಕ್ಷಣ ಮುಂದುವರಿಕೆಗೆ ಬಡತನ ಕಾರಣವಾಗಿದೆ.

ಇಷ್ಟೆಲ್ಲಾ ಬದಲಾವಣೆಗಳಾದರೂ ಇವರುಗಳು ತೀರಾ ಹಿಂದುಳಿದವರಾಗಿದ್ದಾರೆ. ಸರ್ಕಾರದಿಂದ ಇವರ ಹೆಸರಿನಲ್ಲಿ ಮಂಜೂರಾದ ಹೆಚ್ಚಿನ ಯೋಜನೆಗಳು ಮಧ್ಯವರ್ತಿಗಳ ಪಾಲಾಗುತ್ತಿವೆ. ಬುಡಕಟ್ಟು ಮಕ್ಕಳ ಶಿಕ್ಷಣಕ್ಕೆಂದು ಆಶ್ರಮ ಶಾಲೆಗಳಿವೆ. ಆದರೆ ಅಲ್ಲಿ ಆಶ್ರಮ

ಶಾಲೆಯ ಪಕ್ಕದಲ್ಲಿಯೇ ಇರುವ ಹಾಡಿಯ ಮಕ್ಕಳಿಗೆ ಶಿಕ್ಷಣ ನೀಡದೆ ಇನ್ನೆಲ್ಲಿಯೋ ಇರುವ ಮಕ್ಕಳನ್ನು ಕರೆತಂದು ಶಿಕ್ಷಣ ಕೊಡುತ್ತಾರೆ. ಇಂತಹ ಸರ್ಕಾರೇತರ ಸಂಘ–ಸಂಸ್ಥೆಗಳ ಧೋರಣೆಯನ್ನು ಕೇಳುವವರು ಯಾರು ಇಲ್ಲದಂತಾಗಿ ಆ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದೆ. ಇಂತಹ ಸಂಘ–ಸಂಸ್ಥೆಗಳಿಗೆ ಎಚ್ಚರಿಕೆಯನ್ನು ನೀಡಿ ಎಲ್ಲಾ ಮಕ್ಕಳಿಗೂ ಶಿಕ್ಷಣ ದೊರೆಯುವಂತೆ ಮಾಡಬೇಕು ಹಾಗೂ ಹೆಚ್ಚಿನ ಆಶ್ರಮ ಶಾಲೆಗಳನ್ನು ತೆರೆದು ಅವುಗಳ ವ್ಯವಸ್ಥೆಯಲ್ಲಿ ಸುಧಾರಣೆ ಆಗಬೇಕು. ಬುಡಕಟ್ಟುಗಳ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಾಕಿಕೊಂಡು ಆ ಯೋಜನೆಗಳು ಅವರಿಗೆ ನೇರವಾಗಿ ತಲುಪುವ ವ್ಯವಸ್ಥೆಯನ್ನು ಮಾಡಬೇಕು. ಮಧ್ಯವರ್ತಿಗಳು ಭಾಗಿಯಾಗುವುದನ್ನು ತಪ್ಪಿಸಬೇಕು. ಅಲ್ಲದೇ ಇವರುಗಳ ಬಗ್ಗೆ ಸೂಕ್ಷ್ಮವಾದ ಅಧ್ಯಯನವನ್ನು ನಡೆಸಿ ಇವರ ಆಚರಣೆಗಳು, ಸಂಪ್ರದಾಯಗಳ ಉಳಿವಿಗೆ ಪ್ರಯತ್ನಿಸಿ ಅವರ ಮೂಲ ಪರಂಪರೆಯ ಉಳಿವಿಗೆ ಅನುಕೂಲ ಮಾಡಬೇಕು ಹಾಗೂ ಮೊದಲಿನಂತೆಯೇ ಅವರ ಸ್ವಚ್ಛಂದದ ಬದುಕಿಗೆ ಅವಕಾಶ ಮಾಡಿಕೊಡಬೇಕು.

ಸಲಹೆಗಳು

೧. ಬುಡಕಟ್ಟು ಜನರು ಕೂಲಿಗಾಗಿ ದೂರದ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆದು. ಸ್ಥಳೀಯವಾಗಿಯೇ ಕೂಲಿ ಕೆಲಸವನ್ನು ನೀಡಿ ಆ ಕೆಲಸಕ್ಕೆ ಸರಿಯಾದ ದರವನ್ನು ನೀಡುವುದು.

೨. ಅರಣ್ಯ ಉತ್ಪನ್ನಗಳನ್ನು ಹರಾಜು ಹಾಕುವ ಮೂಲಕ ಪರರಿಗೆ ಮಾರುವ ಬದಲು ಅರಣ್ಯ ಇಲಾಖೆಯೇ ವಹಿಸಿಕೊಂಡು ಅರಣ್ಯ ಉತ್ಪನ್ನಗಳ ಸಂಗ್ರಹ ಕಾರ್ಯವನ್ನು ಸ್ಥಳೀಯವಾಗಿ ವಾಸಿಸುವ ಕಾಡುಕುರುಬ ಮತ್ತು ಜೇನುಕುರುಬರಿಗೆ ನೀಡುವುದು.

೩. ಹೆಜ್ಜೇನು ಸಂಗ್ರಹಣ ಕಾರ್ಯವನ್ನು ವಹಿಸಿಕೊಡಬೇಕು. ಜೇನುಸಾಕಾಣಿಕೆಯನ್ನು ಇವರಿಗೆ ತರಬೇತಿ ಮೂಲಕ ಅವಕಾಶ ಕಲ್ಪಿಸಬೇಕು. ಅರಣ್ಯ ಇಲಾಖೆ ಇವರ ಮೂಲಕ ಸಂಗ್ರಹಿಸಬಹುದಾದ ಜೇನುತುಪ್ಪಕ್ಕೆ ಬೆಂಬಲ ಬೆಲೆ ಕೊಟ್ಟು ಸಬ್‌ಸಿಡಿ ವ್ಯವಸ್ಥೆಯನ್ನು ತಂದು ವಹಿವಾಟು ನಡೆಸಬೇಕು.

೪. ಆಶ್ರಮ ಪಾಠ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಆಶ್ರಮ ಪಾಠ ಶಾಲೆಯ ಉಪಾಧ್ಯಾಯರು ಆಯಾಗಳು ಈ ಜನರ ನಡುವೆಯೇ ಬದುಕಬೇಕು. ಸರ್ಕಾರಿಂದ ಬಂದಂತಹ ನೆರವು ನೇರವಾಗಿ ಈ ಬುಡಕಟ್ಟು ಸಮುದಾಯಗಳಿಗೆ ತಲುಪಬೇಕು.

೫. ಆಶ್ರಮ ಶಾಲೆಗಳು ಸ್ಥಳೀಯ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯವಾಗಿ ನೀಡಲೇಬೇಕು.

೬. ಬೇರೆ ರಾಜ್ಯದವರು ಈ ಬುಡಕಟ್ಟುಗಳ ಕೃಷಿ ಭೂಮಿಯನ್ನು ಬೋಗ್ಯಕ್ಕೆ ಪಡೆದು ಕೃಷಿ ಮಾಡಿಕೊಂಡು ಹೆಚ್ಚಿನ ಲಾಭವನ್ನು ಗಳಿಸುತ್ತಿದ್ದಾರೆ. ಈ ತರಹದ ವ್ಯವಸ್ಥೆಯನ್ನು ಕೊನೆಗಾಣಿಸಿ ಬುಡಕಟ್ಟು ಜನರಿಗೆ ಕೃಷಿ ತರಬೇತಿ ನೀಡಿ ಅದರ ಬಗ್ಗೆ ಅರಿವು ಮೂಡಿಸಿ ಕೃಷಿ ಸಲಕರಣೆಗಳನ್ನು ಒದಗಿಸಿ ಕೃಷಿ ಮಾಡಲು ಅನುವು ಮಾಡಿಕೊಡಬೇಕು.

೭. ಸರ್ಕಾರವು ಕಾಡುಕುರುಬರನ್ನು ಅವರ ಮೂಲ ಹೆಸರಾದ ಬೆಟ್ಟಕುರುಬರೆಂದು ಕರೆದು ಅವರಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳಲ್ಲಿ ಬೆಟ್ಟಕುರುಬರೆಂದು ನಮೂದಿಸಬೇಕು.

ಅಡಿ ಟಿಪ್ಪಣಿ

೧. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪುಟ – ೧೪೪

ಅನುಬಂಧ

ಪರಾಮರ್ಶನ ಗ್ರಂಥಗಳು

೧. ಅಕ್ಕಮಹಾದೇವಿ, ಬುಡಕಟ್ಟು ನ್ಯಾಯ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮

೨. ಕರ್ನಾಟಕ ರಾಜ್ಯಗ್ಯಾಸೇಟಿಯರ್, ಭಾಗ-೧, ೧೯೮೪

೩. ಕರ್ನಾಟಕ ರಾಜ್ಯಗ್ಯಾಸೆಟಿಯರ್, ಭಾಗ-೨

೪. ಕರ್ನಾಟಕ ರಾಜ್ಯಗ್ಯಾಸೆಟಿಯರ್, ಭಾಗ-೨, ೧೯೮೬

೫. ಕರ್ನಾಟಕ ರಾಜ್ಯಗ್ಯಾಸೆಟಿಯರ್, ಕೊಡಗು ಜಿಲ್ಲೆ, (ಪರಿಷ್ಕೃತ ಆವೃತ್ತಿ) ೧೯೯೨

೬ ಕಿಕ್ಕೇರಿ ನಾರಾಯಣ, 'ಜೇನು ಕುರುಬರು' ಲಕ್ಕಪ್ಪ ಗೌಡ, ಎಚ್.ಜೆ. (ಪ್ರಸಂ), ಕರ್ನಾಟಕದ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಸಂಪುಟ-೧, ಬೆಂಗಳೂರು, ೨೦೦೦

೭ ಗಂಗಾಧರ ದೈವಜ್ಞ, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೮. ಗಂಗಾಧರ ದೈವಜ್ಞ, ಆದಿವಾಸಿಗಳ ವೈದ್ಯ ಪದ್ಧತಿ, ಸಂ. ಪ್ರಭಾಕರ ಎ.ಎಸ್. ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೯. ಚಂದ್ರಶೇಖರ್ ಕಂಬಾರ, (ಸಂ, ೧-೨) ಕರ್ನಾಟಕ ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೫

೧೦. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, (ನ-೧೨) ಕನ್ನಡ ಸಾಹಿತ್ಯ, ಪರಿಷತ್ತು, ಬೆಂಗಳೂರು

೧೧. ನಾರ್ಗೇಗೌಡ, ವಿರಿಯರ್ ಎಲ್ವಿನ್ ಗಿರಿಜನ ಪ್ರಪಂಚ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೧೯೭೯

೧೨. ನಾಗೇಶ್ ಎಚ್.ಎಂ. ಗ್ರಾಮೀಣ ನ್ಯಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೩. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು. ೨೦೦೭-೦೮

೧೪. ಪಾರ್ವತಮ್ಮ ಸಿ. ಕಾಡು ಕುರುಬ ಮತ್ತು ಜೇನುಕುರುಬ ಸಮುದಾಯಗಳು, ಸಿ.ಆರ್.ಆರ್.ಟಿ.ಡಿ. ಸಂಸ್ಥೆ, ಮೈಸೂರು, ೧೯೯೯

೧೫. ಪ್ರಭಾಕರ್ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೬. ಬೋರಲಿಂಗಯ್ಯ, ಎ.ಎಸ್. ಪ್ರಭಾಕರ, ಎಸಂವ, ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೭. ಬೋರಲಿಂಗಯ್ಯ, ಬುಡಕಟ್ಟು ದೈವರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೮. ಬೋರಲಿಂಗಯ್ಯ, ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೧೯. ಬೋರಲಿಂಗಯ್ಯ ಹಿ.ಚಿ. ಅರಣ್ಯದೊಳಗಿನ ಬುಡಕಟ್ಟುಗಳು: ಒಂದು ವಿವೇಚನೆ, ಸಂ. ಪ್ರಭಾಕರ ಎ.ಎಸ್. ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೨೦. ಬೋರಲಿಂಗಯ್ಯ, ಕಾಡು ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬

೨೧. ಬೋರಲಿಂಗಯ್ಯ, ಗಿರಿಜನ ನಾಡಿಗೆ ಪಯಣ, ಪುಸ್ತಕ ಜೇನು ಚೆನ್ನದೇವಿ ಆಗ್ರಹಾರ, ದೊಡ್ಡಬಳ್ಳಾಪುರ, ೧೯೯೧

೨೨. ಮಂದಭಾವಿ, ಭಾರತದ ಆದಿವಾಸಿಗಳು, ಪ್ರಸಾರಾಂಗ, ಧಾರವಾಡ ವಿಶ್ವವಿದ್ಯಾಲಯ, ಧಾರವಾಡ

೨೩. ಮಧುಗುಂಡ್ಲಪೇಟೆ, ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ, ಅಕ್ಷತ ಪಬ್ಲಿಕೇಷನ್ಸ್, ೨೦೦೭

೨೪. ಮೇತ್ರಿ ಕೆ.ಎಂ. ಬುಡಕಟ್ಟು ಕುಲ ಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨೫. ರಾಜಮಣಿ, ಎಲೇವ, ಕಾಡುಕುರುಬರು, ಲಕ್ಕಪ್ಪಗೌಡ ಹೆಚ್.ಜೆ. ಎಪ್ರಸಂವ, ಕರ್ನಾಟಕ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮

೨೬. ಎ.ಸಿ. ಲಲಿತ, ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ, ಕನಾಘಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೭. ವಾಸುದೇವ ಮೂರ್ತಿ, ದಕ್ಷಿಣ ಭಾರತೀಯ, ಜನಪದ ಕೋಶ, ಸಸಂ. ಮುರಿಗೆಪ್ಪ. ಎ. ಆರ್ಫಿಯಸ್ ಸುಂದರಂ ಮತ್ತು ರಮೇಶ್ ಸ.ಚಿ. ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨೮. ಸಣ್ಣರಾಮ, ಬುಡಕಟ್ಟು ಸಂಸ್ಕೃತಿ, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ೨೦೦೧

೨೯. ಬಟ್ಲರ್ ಜೆ.ಎಸ್. ಐಡಿಯಾಲಿಜಂ ಇನ್ ಎಜುಕೇಶನ್ ಆಲ್ ಫಾರ್ ಎಂಡ್, ನ್ಯೂಯಾರ್ಕ್, ೧೯೬೬

೩೦. ಮಿಂಗೋ ಎಂ.ಜಿ. ಫಿಲಾಸೊಪಿಕಲ್ ಆಫ್ ಎಜುಕೇಷನ್ ಜಾನ್ ಇನ್ಟ್ರುಡಕ್ಷನ್ ಸ್ಟ್ರಾಲಿಂಗ್ ಪಬ್ಲಿಕೇಷನ್, ಪ್ರೈವೈಟ್ ಲಿಮಿಟೆಡ್, ನ್ಯೂಡೆಲ್ಲಿ, ೧೯೭೫

English Books

1. Edger Thurston Ethnographic Notes in Southern India, Asian Educational Services, New Delhi, 1989
2. L.K.A. Iyer, The Mysore Tribes and Castes, Mittal Publications, New Delhi, 2005
3. Lalitha A.C. Kadukuruba and Jenukuruba Culture, Karnataka Saithya Academy, Bangalore, 1993
4. Lawrence D.Souza S.J. Jenukurubas and Kadukurubas Unesco Co-actio Learning Centre, Mangalore, 2004
5. Misra P.K., Jenukuruba Bulletio of Anthropological Survey of India, Vol-18, Calcutta, 1975
6. Metry K.M. Budakattu Kulakasubugalu, Prasaranga, Kannada University, Hampi, 2006
7. Mutturayapp, ``Socio-cultural factors and marriage amoung Jenukuruba and Kadukuruba Tribes of Karnataka" Man in India, 1993
8. Nanjundayya H.V. and Iyer Ananthakrishna, The Mysore Tribes and castes, The Mysore University Press, Vol-4, 1961
9. Sing K.S., The Scheduled Tribes, Anthropological Survey of India, Oxford University Press, 1994
10. Thurston caste and Tribes of Southern India govt Press, Madras, Delhi cosmo Publication, 1909

ಮಾಹಿತಿದಾರರ ವಿವರ

ಕಾಡುಕುರುಬರು

೧. ಕಿರುಮಾರ–ಪ್ರಹ್ಲಾದ– ೨೦ ವರ್ಷ, ಜಗಲೇರ್ ಮನೆತನದವರು, ಜಾಗನಕೋಟೆ ಹಾಡಿ

೨. ಮಾರ – ೪೦ ವರ್ಷ, ಕಕ್ಕರ್ ಮನೆತನದವರು, ಜಾಗನಕೋಟೆ ಹಾಡಿ

೩. ಚಲ್ಲಾ – ೫೯ ವರ್ಷ, ಜಾಗನಕೋಟೆ ಹಾಡಿ

೪. ಮಾದ – ೩೦ ವರ್ಷ, ಜಾಗನಕೋಟೆ ಹಾಡಿ, ಡ್ರೈವರ್ ಡಿ.ಬಿ. ಕುಪ್ಪೆ

೫. ರಾಜೀವ್ – ೪೦ ವರ್ಷ, ಕೆಂಪನಹಾಡಿ

೬. ಮುದಲಿ ಮಾದಯ್ಯ, ಜಾಗನಕೋಟೆ ಹಾಡಿಯ, ಯಜಮಾನ, ಬೆಟ್ಟಕುರುಬ

೭. ಕಾಳ – ೩೮ ವರ್ಷ, ಬೆಟ್ಟಕುರುಬ (ಕಲ್ಕರ್ ಮನೆ), ಬ್ರಹ್ಮಗಿರಿಹಾಡಿ

೮. ಬಿ.ಎಂ. ಕಾಳ – ೩೨ ವರ್ಷ, ಬೆಟ್ಟಕುರುಬ (ಕುಪ್ಪೋಸ್ ಮಗೆ), ಬ್ರಹ್ಮಗಿರಿಹಾಡಿ

೯. ಕಾಳಿ – ೪೫ ವರ್ಷ, ಬೆಟ್ಟಕುರುಬರ, ಬ್ರಹ್ಮಗಿರಿಹಾಡಿ

೧೦. ಕಾಳಿ – ೫೫ ವರ್ಷ, ಬೆಟ್ಟಕುರುಬ (ಕುಪ್ಪೇರ್‌ಕ್ಕ), ಬ್ರಹ್ಮಗಿರಿಹಾಡಿ

೧೧. ಮಾದ – ೬೭ ವರ್ಷ, ಬೆಟ್ಟಕುರುಬ (ಕಲ್ಕರ್ ಮಗೆ), ಬ್ರಹ್ಮಗಿರಿಹಾಡಿ

೧೨. ಮಾರಕ್ಕಾ – ೪೫ ವರ್ಷ, ಬೆಟ್ಟಕುರುಬ, ಜಾಗನಕೋಟೆ ಹಾಡಿ

೧೪. ಸೋಮ – ೩೨ ವರ್ಷ, ಬೆಟ್ಟಕುರುಬ (ಕುಪ್ಪೇಸ್ ಮಗೆ), ಜಾಗನಕೋಟೆ ಹಾಡಿ

ಜೇನುಕುರುಬರು

೧. ದೊಡ್ಡ ಮಾಸ್ತಿ– ೭೦ ವರ್ಷ, ಜೇನುಕುರುಬ, ಮಾಳದಹಾಡಿ

೨. ಬಸವ/ಕುಳ್ಳು ಮುದ್ದನ ಮಗ, ೭೦ ವರ್ಷ, ಜೇನುಕುರುಬ, ಮಾಳದಹಾಡಿ

೩. ಬೊಮ್ಮಿ – ೬೫ ವರ್ಷ, ಜೇನುಕುರುಬ, ಮಾಳದಹಾಡಿ

೪. ರಾಜಪ್ಪ ತಂದೆ ದಾಸಯ್ಯ, ಬೋರೆ ದೇವರ ಮುಂತಿ, ಹೆಚ್ ಡಿ ಕೋಟೆ (ತಾ), ಕಳಸೂರು (ಅಂಚೆ), ಅಂತರ ಸಂತೆ ಹೋಬಳಿ, ಮೈಸೂರು ಜಿಲ್ಲೆ, ಮೊ. ೯೯೮೦೬೩೦೬೯೨

೫. ಶಿವಣ್ಣ – ೪೦ ವರ್ಷ, ಜೇನುಕುರುಬ ದೇವನಾಡಿ

೬. ಉಪಾ (ಮಹಾದೇವಿ), ಶಿವಣ್ಣನ ಪತ್ನಿ, ದೇವನಾಡಿ

೭. ಬಸಮ್ಮ – ೪೦ ವರ್ಷ, ಜೇನುಕುರುಬ, ಮಾಳದಹಾಡಿ

೮. ಹೇಮಲತಾ ಪತ್ನಿ ನಾಗರಾಜ, ಕಳಸೂರು, ಕಬಿನಿ ವಿ, ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ, ೫೭೧೧೧೬, ಮೊ. ೯೯೮೦೭೮೪೬೩೫, ಅಂಗನವಾಡಿ ಟೀಚರ್

ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗದವರು

೧. ಜವರಯ್ಯ, ದ್ವಿತೀಯ ದರ್ಜೆಯ ಲೆಕ್ಕ ಸಹಾಯಕರು, ಎನ್. ಬೇಗೂರು ಗ್ರಾಮ ಪಂಚಾಯಿತಿ, ಎಚ್.ಡಿ. ಕೋಟೆ ತಾಲೂಕು,ಮೈಸೂರು ಜಿಲ್ಲೆ


೨. ವೆಂಕಟೇಶ್, ಬಿಲ್‌ಕಲೆಕ್ಟರ್, ಎನ್. ಬೇಗೂರು ಗ್ರಾಮ ಪಂಚಾಯಿತಿ, ಎಚ್.ಡಿ. ಕೋಟೆ ತಾಲೂಕು, ಮೈಸೂರು ಜಿಲ್ಲೆ

೩. ನಟರಾಜ್, ಬಿಲ್‌ಕಲೆಕ್ಟರ್, ಎನ್. ಬೇಗೂರು ಗ್ರಾಮ ಪಂಚಾಯಿತಿ, ಎಚ್.ಡಿ. ಕೋಟೆ ತಾಲೂಕು, ಮೈಸೂರು ಜಿಲ್ಲೆ

ಕಾಡುಕುರುಬ ಭಾಷೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರ ಭಾಷೆಯಲ್ಲಿ ವ್ಯತ್ಯಾಸಗಳನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ.


ನಾಗರಿಕ ಭಾಷೆ		ಕಾಡುಕುರುಬ ಭಾಷೆ
ಅಕ್ಕಿ	–	ಹಿಕ್ಕಿ
ಕೂತುಕೊಳ್ಳುವುದು	–	ಕೂರಸೆ
ಬನ್ನಿ	–	ಬಾರೆ
ಹೋಗು	–	ಪಾಗೇ
ಎತ್ತಕೋ	–	ಅಡಿಯೇ
ಪಾತ್ರೆ	–	ತಪ್ಪೀಲಿ
ಹಿಂದುಗಡೆ	–	ಪಿಂಮಂಗ್
ಮುಂದುಗಡೆ	–	ಮಿಂದ್‌ಂಗ್
ಗಜ್ಜಿ	–	ಕಂಜ್ಜಿ
ಬಸ್ತಿರುವುದು	–	ನಿಚ್
ಸಾಂಬಾರ	–	ಎಕ್‌ರೀ
ಸೊಪ್ಪು ಸಾರು	–	ತೌಲು
ಹುರುಳಿ ಕಾಳು ಸಾರು	–	ಮುಯ್ಯಿರಿಕ್ಕಿ
ಹಿಟ್ಟು	–	ಪುಟ್ಟು
ರೊಟ್ಟಿ	–	ಆಡ್‌ಪುಟ್ಟ
ತಿನ್ನು	–	ತಿನ್ನೆ
ಬಾವಮ್ಮೈದ	–	ಮಸ್
ಅಕ್ಕ	–	ಅಕ್ಕ್
ತಾಯಿ	–	ಅಬ್ಬೆ
ಸಣ್ಣಕೂಸು	–	ಪೈಮಗೆ
ದೊಡ್ಡಹುಡುಗ	–	ದಪ್ಪುಹುಡುಗನ್
ತಂಗಿ	–	ಕರಾಳ್
ತಮ್ಮ	–	ಕರಿನ್
ನನ್ನ ಹೆಂಡತಿ	–	ಎನ್ ಪಣಾಕ
ತಮ್ಮನ ಹೆಂಡತಿ	–	ಕರಿನ್ ಪಣಮಗೆ
ಅತ್ತಿಗೆ	–	ಏದಿಗೆ

ನಾಗರಿಕ ಭಾಷೆ		ಕಾಡುಕುರುಬ ಭಾಷೆ
ಗಂಡುಮಗು	–	ಗಣಮಗೆ
ಹೆಣ್ಣುಮಗು	–	ಪಣಮಗೆ
ಅಳಿಯ	–	ಅಲಿಯ
ರಾಗಿ	–	ತೋಯಿಂಡಿ
ಜೋಳ	–	ಜೋಳ
ಮಾಂಸ	–	ಅರ್ಚಿ
ಹೇಳು	–	ಪೋಳೆ
ಭತ್ತ	–	ಭತ್ತ
ಹಲಸಂದೆ ಕಾಳು	–	ಪೈರಿಕ್ಕಿ
ಬೇಳೆ	–	ಬೋಳೆ
ಅವರೆ ಬೇಳೆ	–	ಯವರೆ ಬೋಳೆ
ಹಸಿಕಡಲೆ	–	ಪಸಕಡಲಕ್ಕಿ
ಕಿರುಬಿದಿರು	–	ಕರಕಾಯಿಲ್
ಹೆಬ್ಬಬಿದಿರು	–	ಪೆರಕಾಯಿಲ್
ಯಜಮಾನ	–	ಮೆಗಾಳ
ಸಗಣಿ	–	ತೊಪ್ಪೆ
ಸಹಣಿ	–	ಅತ್ತಪಿ
ಎತ್ತು	–	ಅತ್ತ
ಸೌತೆಕಾಯಿ	–	ತೊತಾಯಿ
ಕುಂಬಳಕಾಯಿ	–	ಕುಂಗಾಯಿ



Belur
Hassan
Channarayapatna
Madikeri
Harangi
Kushalnagar
K R Nagar
Mysore
H D Kote
Nagarhole
Wildlife Sanctuary
To Mananthavadi
Kabini River Lodge
To Sultan Battery
To Ooty
Bandipur
Wildlife Sanctuary
Himavad
Gopalaswamy
Hills
Nanjangud
Kollegal
Malavalli
Halagur
Madcur
Somnathpur
Cauvery Falls
Talakad
To Bangalore
To Kanakapura
To Mettur
To Bhavani
To Sathyamangalam
Melkote
Nagamangala
Delhur
Bird Sanctuary
Brindavan
Gardens
Ranganathittu
Bird Sanctuary

OBLIES - H.D.KOTE TALUK



Prepared By: District NRDMS Centre, Zilla Panchayath, Mysore


MAGGE
MALALI
BEERAMBALLI
GANDATHUR
HOSALLI
BYYANAPURA
BEGUR
BEGUR JUNGLE



ಏಣಿಯನ್ನು ತಯಾರಿಸುತ್ತಿರುವ ಕಾಡುಕುರುಬ ಯುವಕ



ಅಕ್ಕಿಯನ್ನು ಹಸನಗೊಳಿಸುತ್ತಿರುವ ಕಾಡುಕುರುಬ ಮಹಿಳೆ



ಕಾಡುಕುರುಬ ಮಹಿಳೆಯರು



ಎನ್.ಬೇಗೂರು ಗ್ರಾಮಪಂಚಾಯಿತಿ ಗ್ರಂಥಾಲಯ



ಕಾಡಿನಿಂದ ಕಟ್ಟಿಗೆ ತರುತ್ತಿರುವ ಕಾಡುಕುರುಬ ಮಹಿಳೆಯರು



ಕಬಿನಿ ಹಿನ್ನೀರಿನ ಪ್ರದೇಶ









ಕಾಡುಕುರುಬರು ಬೆಳೆದ ಶುಂಠಿ



ಮಾಳದ ಹಾಡಿಯ ಗಿರಿಜನ ವಸತಿ ಶಾಲೆ



ನೀರು ತರುತ್ತಿರುವ ಕಾಡುಕುರುಬ ಅಜ್ಜಿ









ಕಾಡುಕುರುಬರ ಕಟ್ಟೆಮನೆ



ಜೇನುಕುರುಬರ ಹುಡುಗಿ



ಜೇನುಕುರುಬರ ವ್ಯವಸಾಯದ ಭೂಮಿ



ಜೇನುಕುರುಬರ ಗುಡಿಸಲುಗಳು



ಕೃಷಿಯಲ್ಲಿ ನಿರತರಾದ ಕಾಡುಕುರುಬರು








ಭಯ ನಿವಾರಣಾ ಬೊಂಬೆಯನ್ನು ತಯಾರಿಸುತ್ತಿರುವುದು




ಭಯ ನಿವಾರಣಾ ಬೊಂಬೆ



ಭಯ ನಿವಾರಣಾ ಪೂಜೆಗೆ ಸಿದ್ದತೆ ಮಾಡುತ್ತಿರುವುದು









ಕವಡೆ ಶಾಸ್ತ್ರ ಕೆಳುವುದು



ಗಾಳಿ ಬಿಡಿಸುವುದು



ಬಿಲ್ಮಾದ ಪೂಜೆಯನ್ನು ಮಾಡುತ್ತಿರುವುದು










ಪಂಚಾಂಗ ನೋಡುತ್ತಿರುವುದು



ಬಿಳಿಯಕ್ಕದ ಗಿಡ (ಬಿಲ್ಮಾ)



ಭಯನಿವಾರಣಾ ಪೂಜಾ ಸಾಮಗ್ರಿಗಳು









ಕೋಳಿ ಬಲಿಕೊಡುತ್ತಿರುವುದು



ಕೋಳಿ ಬಲಿ



ಭಯ ನಿವಾರಿಸುತ್ತಿರುವುದು










ತುಡುಬೆ ಜೇನು ಕೀಳುತ್ತಿರುವುದು



ಭೈರವೇಶ್ವರ ದೇವರು



ಆತ್ಮಗಳನ್ನು ಬಂಧಿಸಿ ಹೂಳಿರುವ ಕಲ್ಲುಗಳು









ಬೈರವೇಶ್ವರ ದೇವರ ಭಂಟ



ಬೈರವೇಶ್ವರ ದೇವಾಲಯ



ಎನ್.ಬೇಗೂರಿನ ಶಾಲೆ









ಬಿಲ್ಮಾದ ಪೂಜೆ ಮಾಡುತ್ತಿರುವುದು



ಜೇನುಕುರುಬರ ಸಮಾದಿ



ಗುಂಡ್ರೆ ಮಾರಮ್ಮನ ಜಾತ್ರೆಗೆ ಚಪ್ಪರ ಹಾಕುತ್ತಿರುವುದು










ವಿವೇಕಾನಂದ ಗಿರಿಜನ ಆಶ್ರಮ ಶಾಲೆ




ಔಷಧಿ ಸಸ್ಯ ತೋರಿಸುತ್ತಿರುವ ಜೇನುಕುರುಬ ಮಹಿಳೆ



ನಾಗದಾಳಿ ಸೊಪ್ಪು




ಜೇನುಕುರುಬರು ಹುಣಸೆಹಣ್ಣು ಸಂಗ್ರಹಿಸಿರುವುದು



ಗಾಳಿಸೊಪ್ಪು




ಜೇನುಕುರುಬರ ಬುರುಡೆ ಕರೆಯುವ ಸಾಧನ



ಗುಂಡ್ರೆ ಮಾರಮ್ಮ ದೇವರು



ಬುರುಡೆ ಕರೆಯುತ್ತಿರುವ ಯಜಮಾನ



ಗುಂಡ್ರೆ ಮಾರಮ್ಮನ ಪಾದುಕೆಗಳು



ದೇವರನ್ನು ಕೇಳಲು ಪೂರ್ವಸಿದ್ದತೆ ಮಾಡುವ ಆಚರಣೆ



ಜೇನುಕುರುಬರ ಶೌಚಾಲಯಗಳು



ಜೇನುಕುರುಬರ ದನದ ಕೊಟ್ಟಿಗೆ



ಜೇನುಕುರುಬರ ಗುಡಿಸಲ ಗೋಡೆಯ ಮೇಲಿನ ಚಿತ್ತಾರಗಳು



ಜೇನುಕುರುಬರ ಅಡುಗೆಮನೆ